Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–18 | ಸಂಚಿಕೆ–12 | ಮಾರ್ಚ್ 18–24, 2024 | ಪುಟ 16 | ರೂ.10
Volume-18 | Issue-12 | March 18-24, 2024 | Pages:16 | Price: 10/-



ಚುನಾವಣಾ ಸಮಯದ ಕುತಂತ್ರಗಳು

'ಚುನಾವಣಾ ಬಾಂಡ್' ಎಂಬ ಮಹಾಭ್ರಷ್ಟಾಚಾರದ ಕಣ್ಕಟ್ಟು

ಒಂದು ರಾಷ್ಟ್ರ ಒಂದು ಚುನಾವಣೆ ಶಿಫಾರಸು: ಸರ್ವಾಧಿಕಾರದ ಕಡೆಗೆ




ಬ್ಯಾಡಗಿ ಮಾರುಕಟ್ಟೆ ದುರ್ಘಟನೆ:

ಕಾರ್ಪೊರೇಟ್ ಕಂಪನಿಗಳ ಪರ ನೀತಿಗಳೇ ಕಾರಣ

ಮಹಿಳಾ ದಿನಾಚರಣೆಯ ವಿಶೇಷ ಲೇಖನ



ಸಂವಿಧಾನ ಮತ್ತು ಮಹಿಳೆ





ಡಾ.ಎಂ.ಚಂದ್ರ ಪೂಜಾರಿ

ಲಿಂಗ ಸಮಾನತೆ ಸಾಧಿಸುವ ನಿಟ್ಟಿನಲ್ಲಿ ಭಾರತದ ಸಂವಿಧಾನವು ಮಹಿಳೆಯರಿಗೆ ಕೊಡ ಮಾಡಿರುವ ಹಕ್ಕು–ರಕ್ಷಣೆಗಳೇನು? ಸಂವಿಧಾನದ ಮೂಲ ಆಶಯಗಳ ಈಡೇರಿಕೆಯ ನಿಟ್ಟಿನಲ್ಲಿ ಇರುವ ಅಡೆತಡೆಗಳೇನು? ವಿಷಯದ ಸಂಕೀರ್ಣತೆಗಳೇನು? ವಿವರವಾಗಿ ಚರ್ಚಿಸಿದ್ದಾರೆ, ಖ್ಯಾತ ಅಭಿವೃದ್ಧಿ ಅರ್ಥಶಾಸ್ತ್ರಜ್ಞರಾದ ಡಾ. ಎಂ. ಚಂದ್ರಪೂಜಾರಿಯವರು.

ಸಂವಿಧಾನ, ಮಹಿಳೆ ಮತ್ತು ಈ ಎರಡರ ನಡುವಿನ ಸಂಬಂಧಗಳಲ್ಲಿರುವ ಸಂಕೀರ್ಣತೆಯನ್ನು ಅರ್ಥಮಾಡಿಕೊಳ್ಳಲು ಈ ಲೇಖನದಲ್ಲಿ ಪ್ರಯತ್ನಿಸಿದ್ದೇನೆ. ಇವುಗಳು ಮೇಲ್ನೋಟಕ್ಕೆ ಕಾಣುವಷ್ಟು ಸರಳವಾಗಿಲ್ಲ. ಸಂವಿಧಾನ ಜಾರಿಗೆ ಬಂದ ನಂತರ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳಿಂದ ಈ ಸಂಕೀರ್ಣತೆಯನ್ನು ಅರ್ಥಮಾಡಿಕೊಳ್ಳಬಹುದು. ಸಂವಿಧಾನಿಕ ಮೌಲ್ಯಗಳು ಆಶಿಸುವ ರೂಪದಲ್ಲಿ ಲಿಂಗ, ಸಮುದಾಯಗಳ ನಡುವಿನ ಸಂಬಂಧ ಹಾಗೂ ವರ್ಗ ಸಂಬಂಧಗಳು ಆಚರಣೆಗೆ ಬಂದಿರುವುದು ಕಾಣುತ್ತಿಲ್ಲ. ಸಮಾಜದ ಬಲಾಢ್ಯರು ಸ್ವಾತಂತ್ರ್ಯ, ಸಮಾನತೆಗಳನ್ನು ತುಂಬಾ ಸರಳೀಕೃತವಾಗಿ ವ್ಯಾಖ್ಯಾನಿಸುವ ಮತ್ತು ಆಚರಣೆಗೆ ತರಲು ಪ್ರಯತ್ನಿಸುವುದನ್ನು ನೋಡುತ್ತಿದ್ದೇವೆ. ಸ್ವಾತಂತ್ರ್ಯ, ಸಮಾನತೆಗಳ ನಡುವಿನ ತಿಕ್ಕಾಟ ಕೂಡ ಹಲವು ಬಾರಿ ಮುಂಚೂಣಿಗೆ ಬಂದಿದೆ ಮತ್ತು ಪ್ರತಿ ಬಾರಿ ಕೂಡ ವ್ಯಕ್ತಿ ಸ್ವಾತಂತ್ರ್ಯ ಪಡೆಯುವ ಆದ್ಯತೆಯನ್ನು ಸಮಾನತೆ ಪಡೆದಿದೆಯೆಂದು ಹೇಳಲಾಗುವುದಿಲ್ಲ. ವ್ಯಕ್ತಿ ಸ್ವಾತಂತ್ರ್ಯ ಮುಂಚೂಣಿಗೆ ಬರುವುನ್ನು ನಕರಾತ್ಮಕವಾಗಿ ನೋಡಬೇಕಾಗಿಲ್ಲ. ಆದರೆ ನಮ್ಮ ಸಂಸ್ಕೃತಿ ಹೆಸರಲ್ಲಿ ಏಣಿಯ ಮೇಲಿರುವ ವ್ಯಕ್ತಿ ಸ್ವಾತಂತ್ರ್ಯಗಳು ಮುಂಚೂಣಿಗೆ ಬಂದು ಬಹುತೇಕ ಮಹಿಳೆಯರ ವ್ಯಕ್ತಿ ಸ್ವಾತಂತ್ರ್ಯ ಹರಣವಾಗುವುದು ಸಕರಾತ್ಮಕ ಬೆಳೆವಣಿಯಾಗಲು ಸಾಧ್ಯವಿಲ್ಲ.

ಸಂವಿಧಾನಿಕ ಮೌಲ್ಯಗಳ ಅನುಷ್ಠಾನದ ಹಲವು ರೂಪಗಳಿವೆ. ಎಲ್ಲ ಸಂದರ್ಭಗಳಲ್ಲೂ ಈ ರೂಪಗಳು ಮಹಿಳೆಪರ ಇವೆ ಎನ್ನಲಾಗುವುದಿಲ್ಲ. ಇದಕ್ಕೆ ಬಹುಮುಖ್ಯ ಕಾರಣ ಬಲಾಢ್ಯರ ಮೇಲಾಟಗಳು. ಈ ಮೇಲಾಟಗಳು ಎಬ್ಬಿಸುವ ರಾಡಿಯಲ್ಲಿ ಸಂವಿಧಾನದ ಮೂಲ ಆಶಯಗಳು ಕಣ್ಮರೆಯಾಗುವುದನ್ನು ನೋಡುತ್ತಲೇ ಇದ್ದೇವೆ. ಇದರಿಂದ ಮಹಿಳೆ ಮತ್ತು ಅವಳ ಆಸಕ್ತಿ, ಆದ್ಯತೆಗಳು ಮೂಲೆಗುಂಪಾಗುವ ಪರಿಯನ್ನು ಈ ಲೇಖನದಲ್ಲಿ ಚರ್ಚಿಸಿದ್ದೇನೆ. ಲೇಖನದ ವಿವರಗಳನ್ನು ಮೂರು ಭಾಗಗಳಲ್ಲಿ ನೀಡಿದ್ದೇನೆ. ಲೇಖನದ ಮೊದಲ ಭಾಗದಲ್ಲಿ ಸಂವಿಧಾನದ ಪೀಠಿಕೆ, ಮೂಲಭೂತ ಹಕ್ಕುಗಳು ಮತ್ತು ರಾಜ್ಯ ನಿರ್ದೇಶನ ತತ್ತ್ವಗಳಲ್ಲಿ ಅಡಕವಾಗಿರುವ ಮಹಿಳಾಪರ ಅಂಶಗಳನ್ನು ಪರಿಚಯಿಸಿದ್ದೇನೆ. ಸಂವಿಧಾನ ಪ್ರತಿಪಾದಿಸುವ ಸಾಮಾಜಿಕ ಪರಿಕಲ್ಪನೆ, ಸಮಾನತೆ ಮತ್ತು ಸ್ವಾತಂತ್ರ್ಯಗಳನ್ನು ಲೇಖನದ ಎರಡನೇ ಭಾಗದಲ್ಲಿ ಚರ್ಚಿಸಿದ್ದೇನೆ. ಸಂವಿಧಾನ ಮತ್ತು ಮಹಿಳೆ ಸಂಬಂಧದ ಮೇಲಿನ ಚರ್ಚೆಯನ್ನು ಲೇಖನ ಕೊನೇ ಭಾಗದಲ್ಲಿ ನೀಡಿದ್ದೇನೆ.

ಸಂವಿಧಾನದಲ್ಲಿ ಮಹಿಳೆ

ನ್ಯಾಯಯುತ ಸಮಾಜ ನಿರ್ಮಾಣದ ಆಶಯವನ್ನು ಸಂವಿಧಾನದ ಪೀಠಿಕೆ (ಪ್ರಿಯೇಂಬಲ್ ಆಫ್ ಕಾನ್‌ಸ್ಟಿಟ್ಯುಶನ್) ವ್ಯಕ್ತ ಪಡಿಸುತ್ತಿದೆ. ನ್ಯಾಯಯುತ ಸಮಾಜದಲ್ಲಿ ಗಂಡು ಹೆಣ್ಣು ಎನ್ನುವ ಬೇಧ ಇಲ್ಲದೆ ಎಲ್ಲ ಪ್ರಜೆಗಳಿಗೂ ಸಮಾನ ಅವಕಾಶ ಮತ್ತು ಸ್ಥಾನಮಾನಗಳಿರಬೇಕು ಮತ್ತು ಎಲ್ಲ ಪ್ರಜೆಗಳು ಸಾಮಾಜಿಕ, ರಾಜಕೀಯ ಹಾಗು ಆರ್ಥಿಕ ನ್ಯಾಯವನ್ನು ಅನುಭವಿಸಬೇಕೆಂದು ಸಂವಿಧಾನದ ಪೀಠಿಕೆ ಸ್ಪಷ್ಟಪಡಿಸಿದೆ. ಮೂಲಭೂತ ಹಕ್ಕುಗಳ ಮೇಲಿನ ಎಲ್ಲ ಆರ್ಟಿಕಲ್‌ಗಳು ಮಹಿಳೆ ಮತ್ತು ಪುರುಷರನ್ನು ಸಮಾನರಾಗಿ ನೋಡಬೇಕೆಂದು ತಾಕೀತು ಮಾಡುತ್ತಿವೆ. ಆರ್ಟಿಕಲ್ 14ರ ಪ್ರಕಾರ ಕಾನೂನಿನ ಮುಂದೆ ಎಲ್ಲರೂ ಸಮಾನರು ಅಥವಾ ಕಾನೂನು ಗಂಡು ಹೆಣ್ಣು ಎನ್ನುವ ವ್ಯತ್ಯಾಸ ಮಾಡುವುದಿಲ್ಲ. ಆರ್ಟಿಕಲ್ 15 (1) ಜಾತಿ, ಧರ್ಮ, ಲಿಂಗ, ಪ್ರದೇಶದ ನೆಲೆಯಲ್ಲಿ ನಕಾರಾತ್ಮಕ ತಾರತಮ್ಯ ಮಾಡುವುದನ್ನು ನಿಷೇಧಿಸುತ್ತದೆ. ಆರ್ಟಿಕಲ್ 15 (3) ಮಹಿಳೆಯರ ಆಸಕ್ತಿಯನ್ನು ರಕ್ಷಿಸಲು ಸಕಾರಾತ್ಮಕ ತಾರತಮ್ಯ (ಪೊಸಿಟಿವ್ ಡಿಸ್ಕ್ರಿಮಿನೇಶನ್) ಮಾಡಲು ಅವಕಾಶ ನೀಡುತ್ತದೆ.

ಆರ್ಟಿಕಲ್ 16 ಉದ್ಯೋಗದಲ್ಲಿ ಮಹಿಳೆಗೆ ಸಮಾನ ಅವಕಾಶ ನೀಡಲು ಹೇಳುತ್ತದೆ. ರಾಜ್ಯ ನಿರ್ದೇಶನ ತತ್ತ್ವಗಳ ಆರ್ಟಿಕಲ್ 39(ಎ) ಬದುಕಲು ಅವಶ್ಯವಿರುವ ಭೂಮಿ, ಬಂಡವಾಳ, ಪ್ರಾಕೃತಿಕ ಸಂಪನ್ಮೂಲ ಇತ್ಯಾದಿ ಸಂಪನ್ಮೂಲಗಳನ್ನು ಬಳಸಲು ಮಹಿಳೆ ಮತ್ತು ಪುರುಷರಿಗೆ ಸಮಾನ ಅವಕಾಶ ಇರುವ ಕಾನೂನುಗಳನ್ನು ರೂಪಿಸಲು ರಾಜ್ಯಗಳಿಗೆ ಸೂಚಿಸುತ್ತದೆ. ಆರ್ಟಿಕಲ್ (39) (ಡಿ) ವೇತನ ನೀಡುವಾಗ ಲಿಂಗ ತಾರತಮ್ಯ ಮಾಡದೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕೆನ್ನುತ್ತದೆ. ಆರ್ಟಿಕಲ್ (42) ಮಹಿಳಾ ಕೆಲಸಗಾರರಿಗೆ ಹೆರಿಗೆ ಭತ್ತೆ ಮತ್ತು ರಜೆ ನೀಡಲು ಸೂಚಿಸುತ್ತದೆ. ಸಂವಿಧಾನದ 73 ಮತ್ತು 74ನೇ ತಿದ್ದುಪಡಿಯಲ್ಲಿ ನಗರ ಮತ್ತು ಗ್ರಾಮೀಣ ಸ್ಥಳೀಯ ಸರಕಾರಗಳಲ್ಲಿ ಮಹಿಳೆಯರಿಗೆ ಮೂರನೇ ಒಂದರಷ್ಟು ಸೀಟುಗಳನ್ನು ಮೀಸಲಿಡಲು ಸೂಚಿಸಿದೆ. ಮಹಿಳೆ ಬಲಗೊಳ್ಳಬೇಕಾದರೆ ಸಂವಿಧಾನದಲ್ಲಿರುವ ಮಹಿಳಾಪರ ಅಂಶಗಳು ಅವುಗಳ ಮೂಲ ಉದ್ದೇಶಿತ ರೂಪದಲ್ಲಿ ಅನುಷ್ಠಾನಗೊಳ್ಳಬೇಕು. ಲೇಖನದ ಮುಂದಿನ ಭಾಗದಲ್ಲಿ ಸಂವಿಧಾನದಲ್ಲಿರುವ ಮಹಿಳಾಪರ ಅಂಶಗಳು ಮತ್ತು ಅವು ಅನುಷ್ಠಾನಗೊಳ್ಳುವ ಸಂದರ್ಭದಲ್ಲಿ ಪಡೆದುಕೊಳ್ಳುವ ರೂಪಗಳನ್ನು ಪರಿಚಯಿಸಿದ್ದೇನೆ.

ಸಮಾನತೆ

ನಮ್ಮಂತಹ ಶ್ರೇಣೀಕೃತ ಸಮಾಜದಲ್ಲಿ ಮೆಕಾನಿಕಲ್ ದೃಷ್ಟಿಯಿಂದ ಸಮಾನತೆಯನ್ನು ನೋಡುವ ಬದಲು ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಸಮಾನತೆಯನ್ನು ನೋಡಬೇಕೆನ್ನುವುದು ಸಂವಿಧಾನದ ಆಶಯ. ಮೆಕಾನಿಕಲ್ ಸಮಾನತೆ ಅಂದರೆ ಎಲ್ಲವನ್ನು ಎಲ್ಲರಿಗೂ ಸಮಾನಾಗಿ ಹಂಚುವುದು ಅಥವಾ ಎಲ್ಲರನ್ನು ಸಮನಾಗಿ ನೋಡುವುದು ಅಥವಾ ಧರ್ಮದ ಪ್ರಶ್ನೆ ಬಂದರೆ ಎಲ್ಲ ಧರ್ಮಗಳನ್ನು ಸಮಾನ ಅಂತರದಲ್ಲಿಡುವುದು ಎನ್ನುವ ಅರ್ಥ ಇದೆ. ಶ್ರೇಣೀಕೃತ ವ್ಯವಸ್ಥೆಯಲ್ಲಿ ಮೆಕಾನಿಕಲ್ ದೃಷ್ಟಿಯಿಂದ ಸಮಾನತೆಯನ್ನು ನೋಡಿದರೆ ಸಮಾನತೆ ಹೆಚ್ಚುವುದಕ್ಕಿಂತ ಅಸಮಾನತೆ ಹೆಚ್ಚುತ್ತದೆ. ಎಲ್ಲ ಸಮಾಜಗಳಲ್ಲೂ ಏಣಿ–ಶ್ರೇಣಿಗಳಿವೆ. ನಮ್ಮಲ್ಲೂ ಕೆಲವರು ಮೇಲೆ, ಹಲವರು ಮಧ್ಯದಲ್ಲಿ ಮತ್ತು ತುಂಬಾ ಜನ ಏಣಿಯ ಬುಡದಲ್ಲಿದ್ದಾರೆ. ಮೇಲಿರುವವರ ಆದಾಯ ಒಂದು ಲಕ್ಷ ರುಪಾಯಿಗಳು, ಮಧ್ಯದಲ್ಲಿರುವವರ ಆದಾಯ ಐವತ್ತು ಸಾವಿರ ರುಪಾಯಿಗಳು ಮತ್ತು ಏಣಿಯ ಬುಡದಲ್ಲಿರುವವರ ಆದಾಯ ಹತ್ತು ಸಾವಿರ ರುಪಾಯಿಗಳೆಂದು ಊಹಿಸೋಣ. ಇವರ ನಡುವೆ ಆರ್ಥಿಕ ಸಮಾನತೆ ತರುವ ಉದ್ದೇಶದಿಂದ ಹದಿನ್ನೆದು ಸಾವಿರ ರೂಪಾಯಿ ಮೌಲ್ಯದ ಸಂಪನ್ಮೂಲವನ್ನು ಸಮನಾಗಿ ಹಂಚಿದರೆ ಪ್ರತಿಯೊಬ್ಬರು ಐದು ಸಾವಿರ ರುಪಾಯಿಗಳಷ್ಟು ಸಂಪನ್ಮೂಲ ಪಡೆಯುತ್ತಾರೆ. ಹಂಚಿದ ನಂತರ ಮೇಲಿದ್ದವರ ಆದಾಯ ಒಂದು ಲಕ್ಷದ ಐದು ಸಾವಿರ ರುಪಾಯಿಗಳಾಗುತ್ತದೆ, ಮಧ್ಯದಲ್ಲಿರುವವರ ಆದಾಯ ಐವತ್ತೈದು ಸಾವಿರ ರುಪಾಯಿ ಮತ್ತು ಏಣಿಯ ಬುಡದಲ್ಲಿರುವವರ ಆದಾಯ ಹದಿನೈದು ಸಾವಿರ ರುಪಾಯಿಗಳಾಗುತ್ತದೆ.

ಒಂದು ಗುಂಪು ಮಹಿಳೆಯರನ್ನು ಇಡಿಯಾಗಿ ನೋಡಬೇಕೆಂದು ವಾದಿಸಿದರೆ ಮತ್ತೊಂದು ಗುಂಪು ಮಹಿಳೆಯರನ್ನು ಬಿಡಿಬಿಡಿಯಾಗಿ ನೋಡಬೇಕೆಂದು ವಾದಿಸುತ್ತದೆ. ಮಹಿಳೆಯರನ್ನು ಇಡಿಯಾಗಿ ನೋಡಿದರೆ ತಳಸ್ತರದ ಮಹಿಳೆಯರು ಹೆಚ್ಚು ನಷ್ಟ ಅನುಭವಿಸುತ್ತಾರೆ. ಆದುದರಿಂದ ಸಂಪನ್ಮೂಲ, ಅವಕಾಶಗಳನ್ನು ಹಂಚುವಾಗ ಮಹಿಳೆಯರನ್ನು ಬಿಡಿಬಿಡಿಯಾಗಿ ನೋಡುವ ಅವಶ್ಯಕತೆ ಇದೆ.

ಅಸಮಾನತೆ ಕಡಿಮೆ ಮಾಡುವ ಉದ್ದೇಶದಿಂದ ಹದಿನ್ನೈದು ಸಾವಿರ ಮೌಲ್ಯದ ಸಂಪನ್ಮೂಲವನ್ನು ಸಮನಾಗಿ ಹಂಚಿದ ನಂತರ ಕೂಡ ಇವರ ನಡುವಿನ ಆರ್ಥಿಕ ಅಸಮಾನತೆ ಕಡಿಮೆಯಾಗಿಲ್ಲ. ಆದುದರಿಂದ ಅಸಮಾನ ಸಮಾಜದಲ್ಲಿ ಸಮಾನತೆ ತರಬೇಕಾದರೆ ಸಂಪನ್ಮೂಲಗಳನ್ನು, ಅವಕಾಶಗಳನ್ನು ಸಮನಾಗಿ ಹಂಚುವುದಲ್ಲ; ಅಸಮಾನವಾಗಿ ಹಂಚಬೇಕಾಗಿದೆ. ಮೇಲಿನ ಉದಾಹರಣೆಯಲ್ಲಿನ ಹದಿನೈದು ಸಾವಿರ ರುಪಾಯಿ ಮೌಲ್ಯದ ಸಂಪನ್ಮೂಲದಲ್ಲಿ ಹೆಚ್ಚಿನ ಭಾಗವನ್ನು ಏಣಿಯ ಬುಡದಲ್ಲಿರುವವರಿಗೆ ನೀಡಿ, ಮಧ್ಯದಲ್ಲಿರುವವರಿಗೆ ಕಡಿಮೆ ಮತ್ತು ಮೇಲಿದ್ದವರಿಗೆ ಏನೇನೂ ನೀಡದಿದ್ದರೂ ನಡೆಯುತ್ತದೆ. ಶ್ರೇಣೀಕೃತ ಸಮಾಜದಲ್ಲಿ ಏಣಿಯ ಬುಡದಲ್ಲಿರುವವರ ಸಂಪನ್ಮೂಲಗಳ ಒಡೆತನ, ಅವಕಾಶಗಳನ್ನು ಪಡೆಯುವ ಸಾಧ್ಯತೆಗಳು, ಜವಾಬ್ದಾರಿಗಳನ್ನು ಹೊರುವ ಶಕ್ತಿ ಏಣಿಯ ಮೇಲಿದ್ದವರ ಸಮಕ್ಕೆ ಬರುವ ತನಕ ಸಂಪನ್ಮೂಲಗಳನ್ನು, ಅವಕಾಶಗಳನ್ನು ಜವಾಬ್ದಾರಿಗಳನ್ನು ಅಸಮಾನವಾಗಿ ಹಂಚಬೇಕಾಗುತ್ತದೆ. ಹೀಗೆ ಮಾಡುವುದರಿಂದ ಸಮಾಜದಲ್ಲಿನ ಒಟ್ಟು ಸಮಾನತೆ ಹೆಚ್ಚುತ್ತದೆ. ಸಮಾಜದಲ್ಲಿನ ಒಟ್ಟು ಸಮಾನತೆ ಹೆಚ್ಚಾದಂತೆ ಪ್ರತಿಯೊಬ್ಬರೂ ತಮ್ಮ ಸಾಮರ್ಥ್ಯಗಳನ್ನು ವೃದ್ಧಿಸಿಕೊಳ್ಳಲು ಸಾಧ್ಯ. ವೃದ್ಧಿತ ಸಾಮರ್ಥ್ಯ ಸರಕಾರ ಮತ್ತು ಖಾಸಗಿ ವಲಯಗಳು ಸೃಷ್ಟಿಸುವ ಹೊಸ ಹೊಸ ಅವಕಾಶಗಳನ್ನು ಬಳಸಿಕೊಳ್ಳಲು ಮತ್ತು ಸ್ವತಂತ್ರರಾಗಿ ಬದುಕಲು ಸಹಕರಿಸುತ್ತದೆ. ಆದುದರಿಂದಲೇ ಸಮಾಜದಲ್ಲಿನ ಒಟ್ಟು ಸಮಾನತೆಯನ್ನು ಹೆಚ್ಚಿಸುವ ದೃಷ್ಟಿಯಿಂದ ಸಂಪನ್ಮೂಲಗಳನ್ನು, ಅವಕಾಶಗಳನ್ನು ಹಂಚುವುದಕ್ಕೆ ಸಂವಿಧಾನ ಆದ್ಯತೆ ನೀಡಿದೆ.

ಸಂವಿಧಾನ ಆದ್ಯತೆ ನೀಡಿದ ಸಮಾನತೆಯ ಕಲ್ಪನೆಯನುಸಾರ ನಮ್ಮ ದೇಶ/ರಾಜ್ಯ ಅಭಿವೃದ್ಧಿ ಸಂಪನ್ಮೂಲ, ಅವಕಾಶ, ಜವಾಬ್ದಾರಿಗಳನ್ನು ಹಂಚಿದೆಯೇ? ಎಂದು ಪ್ರಶ್ನಿಸಿದರೆ ತುಂಬಾ ನಿರಾಶಾದಾಯಕ ಉತ್ತರ ಸಿಗುತ್ತದೆ. ಕೃಷಿ ಅಭಿವೃದ್ಧಿಗಾಗಿ ಕಡಿಮೆ ಬಡ್ಡಿ ಸಾಲ, ಉಚಿತ ವಿದ್ಯುತ್, ಉಚಿತ ನೀರಾವರಿ, ಕಡಿಮೆ ದರದಲ್ಲಿ ಯಂತ್ರೋಪಕರಣ, ಬೀಜ, ರಸಗೊಬ್ಬರ ಇತ್ಯಾದಿ ಸವಲತ್ತುಗಳನ್ನು ನೀಡಲಾಗುತ್ತಿದೆ. ಸಮಾನತೆಯ ಸಾಂವಿಧಾನಿಕ ಕಲ್ಪನೆ ಪ್ರಕಾರ ಇಂತಹ ಸವಲತ್ತುಗಳನ್ನು ಸಣ್ಣ ಮತ್ತು ಅತೀ ಸಣ್ಣ ಕೃಷಿಕರಿಗೆ ಹೆಚ್ಚಿನ ಪ್ರಮಾಣದಲ್ಲಿ ನೀಡಿ ಮಧ್ಯಮ ಕೃಷಿಕರಿಗೆ ಕಡಿಮೆ ಪ್ರಮಾಣದಲ್ಲಿ ಮತ್ತು ದೊಡ್ಡ ಕೃಷಿಕರಿಗೆ ನೀಡದಿದ್ದರೂ ನಡೆಯುತ್ತದೆ. ಆದರೆ ನಮ್ಮ ಸರಕಾರಗಳು ಸಮಾನತೆಯ ಸಾಮಾನ್ಯ ಕಲ್ಪನೆಯನ್ನು ಅನುಸರಿಸುತ್ತಿವೆ. ಎಲ್ಲಾ ರೈತರಿಗೆ–

ಪುಟ 04 ಕ್ಕೆ

ಚುನಾವಣೆ ಘೋಷಣೆ: ಸಿದ್ಧವಾಗುತ್ತಿರುವ ಸ್ಪರ್ಧಾ ಕಣ

ಈ ವಾರ

ಎಸ್.ವೈ.ಗುರುಶಾಂತ್

18ನೆಯ ಲೋಕಸಭಾ ಚುನಾವಣಾ ದಿನಾಂಕಗಳನ್ನು ಚುನಾವಣಾ ಆಯೋಗ ಅಂತೂ ಪ್ರಕಟಿಸಿದೆ. 2024 ಎಪ್ರೀಲ್ 19 ರಿಂದ ಆರಂಭವಾಗಿ ಮೇ 26 ಕೊನೆಯ ಸುತ್ತಿನ ಮತದಾನ. ಜೂನ್ 04 ರಂದು ಮತ ಎಣಿಕೆ. ಏಳು ಹಂತಗಳ ಈ ಚುನಾವಣೆಯಲ್ಲಿ ಕರ್ನಾಟಕದ ದಕ್ಷಿಣ ಭಾಗದಲ್ಲಿ ಎಪ್ರೀಲ್ 26, ಉತ್ತರ ಭಾಗದ ಕ್ಷೇತ್ರಗಳಲ್ಲಿ ಮೇ 07 ರಂದು ಮತದಾನ ಆಗಲಿದೆ. ಚುನಾವಣಾ ನೀತಿ ಸಂಹಿತೆ ಉಳಿದಂತೆ ಈಗಿನಿಂದಲೇ ಜಾರಿ ಆಗಲಿದೆ. ಚುನಾವಣಾ ವೇಳಾಪಟ್ಟಿಯು ಬಿಡುಗಡೆ ಆಗಬೇಕಾದ ನಿಕಟದಲ್ಲೇ ಚುನಾವಣಾ ಆಯುಕ್ತರೊಬ್ಬರ ರಾಜೀನಾಮೆ ಹಾಗೂ ಚುನಾವಣಾ ಬಾಂಡ್ ಗಳ ಕುರಿತ ಸರಕಾರದ ಹಸ್ತಕ್ಷೇಪದ ಅನುಮಾನಗಳು, ಭಾರೀ ಭ್ರಷ್ಟಾಚಾರದ ಸೂಚನೆಗಳಿಂದ ಇಕ್ಕಟ್ಟಿಗೆ ಸಿಲುಕಿದ ಸರಕಾರ ಇವೆಲ್ಲವುಗಳಿಂದ ನಿಗದಿತ ಅವಧಿಯಲ್ಲಿ ಯೋಜಿತವಾಗಿ ಚುನಾವಣೆಗಳು ನಡೆಯಲು ಅನುವು ಮಾಡಬಹುದೇ ಎಂಬ ಆತಂಕ ಹಲವರಲ್ಲಿ ಹುಟ್ಟಿಸಿದ್ದವು. ಇಬ್ಬರು ಚುನಾವಣಾ ಆಯುಕ್ತರ ನೇಮಕವಾಗಿ, ವೇಳಾಪಟ್ಟಿ ಬಿಡುಗಡೆಯಾಗಿದೆ. ಮುಖ್ಯ ಚುನಾವಣಾ ಆಯುಕ್ತರಾದ ರಾಜೀವ್ ಕುಮಾರ್ ಅವರ ಜೊತೆಗೆ ಜ್ಞಾನೇಶ್ ಕುಮಾರ್ ಹಾಗೂ ಸುಕಬೀರ್ ಸಿಂಗ್ ಸಂದು ಇಬ್ಬರು 1988ರ ಐಎಎಸ್ ಕೇಡರ್‌ಗಳಾಗಿದ್ದವರು 2024 ರ ಮಾರ್ಚ್ 14ರಂದು ಚುನಾವಣಾ ಆಯುಕ್ತರುಗಳಾಗಿ ನೇಮಕಗೊಂಡಿದ್ದಾರೆ. ವೇಳಾ ಪಟ್ಟಿ ಇವರ ಸಮ್ಮುಖದಲ್ಲಿ ಪ್ರಕಟಗೊಂಡಿದೆ.

ಹೀಗಾಗಿ ನಿರೀಕ್ಷಿತ ಲೋಕಸಭಾ ಚುನಾವಣೆಯ ತಯಾರಿ ಮತ್ತಷ್ಟೂ ಗರಿಗೆದರಿದೆ. ವಿವಿಧ ಪಕ್ಷಗಳು ಗೆಲ್ಲುವ ಅಭ್ಯರ್ಥಿಗಳ ಶೋಧನೆಯಲ್ಲಿ ತೊಡಗಿವೆ. ಕೆಲವರು ಅಭ್ಯರ್ಥಿಗಳನ್ನು ಘೋಷಿಸುತ್ತಿದ್ದರೆ 'ಟಿಕೇಟ್' ಸಿಗದ ಆಕಾಂಕ್ಷಿಗಳಲ್ಲಿನ ತೀವ್ರ ನಿರಾಶೆ, ಹತಾಶೆ ಬೀದಿಗೆ ಬರುತ್ತಿದೆ. ಎಲ್ಲಾ ಕ್ಷೇತ್ರಗಳ ಅಭ್ಯರ್ಥಿಗಳ ಬಗ್ಗೆ ಕಾಂಗ್ರೆಸ್ ಇನ್ನೂ ಪೂರ್ಣ ನಿರ್ಧಾರಕ್ಕೆ ಬಂದಂತಿಲ್ಲ! ಅದು 7 ಕ್ಷೇತ್ರಗಳ ಅಭ್ಯರ್ಥಿಗಳನ್ನು ಮಾತ್ರ ಬಿಡುಗಡೆ ಮಾಡಿದೆ. ಬಿಜೆಪಿ ಸಹ 28 ಸ್ಥಾನಗಳ ಪೈಕಿ 10ರಲ್ಲಿ ತಮ್ಮ ಅಭ್ಯರ್ಥಿಗಳನ್ನು ಘೋಷಿಸಿದೆ. ಬಿಜೆಪಿ ಸಖ್ಯತೆಯಲ್ಲಿರುವ ಜೆ.ಡಿ.ಎಸ್.ಪಕ್ಷ ಸ್ಥಾನ ಹೊಂದಾಣಿಕೆಯಲ್ಲಿ 3 ಸ್ಥಾನಗಳಿಗೆ ತನ್ನ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಲಿದೆ. ವಿಚಿತ್ರ ಎಂದರೆ ಒಂದು ಕ್ಷೇತ್ರದಲ್ಲಿ-ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಲ್ಲಿ ಜೆ.ಡಿ.ಎಸ್.ನ ಅಭ್ಯರ್ಥಿ ಬಿಜೆಪಿಯ ಚಿನ್ಹೆಯ ಮೇಲೆ ಸ್ಯರ್ದಿಸುವುದು, ಬಿಜೆಪಿಯ ಅಭ್ಯರ್ಥಿ ಜೆ.ಡಿ.ಎಸ್. ನ ಚಿಹ್ನೆಯ ಮೇಲೆ ಸ್ಪರ್ದಿಸುವುದು ಎಂಬ ಒಪ್ಪಂದ ಏರ್ಪಟ್ಟಿದೆ! ಅದರ ಭಾಗವಾಗಿ ಹೃದಯರೋಗ ತಜ್ಞ, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಅಳಿಯ ಡಾ.ಸಿ.ಎನ್.ಮಂಜುನಾಥ್ ಅವರು ಬಿಜೆಪಿಯ ಅಭ್ಯರ್ಥಿಯಾಗಿ ಆ ಚಿಹ್ನೆಯ ಮೇಲೆ ಗ್ರಾಮಾಂತರ ಕ್ಷೇತ್ರದಲ್ಲಿ ಸ್ಪರ್ದೆಗೆ ಇಳಿಯಲಿದ್ದಾರೆ! ಹಾಲಿ ಸಂಸದ ಕಾಂಗ್ರೆಸ್ಸನ ಡಿ.ಕೆ.ಸುರೇಶ್ ಅವರನ್ನು ಎದುರಿಸಲಿದ್ದಾರೆ.



ಇನ್ನು ಎಡ ಪಕ್ಷಗಳಲ್ಲಿ ಮೈತ್ರಿ, ಸ್ಪರ್ದೆಯ ಬಗ್ಗೆ ಇನ್ನೂ ಪೂರ್ಣ ಚರ್ಚೆಗಳು ನಡೆದಿಲ್ಲವಾದರೂ ಸಿಪಿಐ(ಎಂ) ಎರಡು, ಸಿಪಿಐ ನಾಲ್ಕು ಕ್ಷೇತ್ರಗಳಲ್ಲಿ ಸ್ಪರ್ದಿಸುವ ಇಂಗಿತ ವ್ಯಕ್ತ ಪಡಿಸಿವೆ. ಉಳಿದ ಎಡ ಪಕ್ಷಗಳಿಗೆ ಬಿಜೆಪಿ-ಎನ್.ಡಿ.ಎ.ಯನ್ನು ಎದುರಿಸಲು ಒಂದು ಸಾಮಾನ್ಯ ಚುನಾವಣಾ ರಾಜಕೀಯ ತಂತ್ರ, ಸ್ಥಾನ ಹೊಂದಾಣಿಕೆ ಇತ್ಯಾದಿಗಳ ಬಗ್ಗೆ ವಿಭಿನ್ನ ಅಭಿಪ್ರಾಯಗಳು ಇರಬಹುದಾಗಿದ್ದು ಪರಸ್ಪರ ಚರ್ಚೆ ನಡೆಯಬೇಕಷ್ಟೇ.

ಕರ್ನಾಟಕದ ಮಟ್ಟಿಗೆ ಸ್ಪರ್ದೆ ಎನ್.ಡಿ.ಎ. ವರ್ಸಸ್ ಇಂಡಿಯಾ ಮೈತ್ರಿ ಕೂಟದ ನಡುವೆಯೇ. ಎನ್.ಡಿ.ಎ. ಯಲ್ಲಿ ಮೈತ್ರಿ ಬಿಜೆಪಿ ಮತ್ತು ಜೆ.ಡಿ.ಎಸ್. ನಡುವೆ ಏರ್ಪಟ್ಟಿದೆ. ಆದರೆ ಅಂತಹ ಮೈತ್ರಿ ಇರಲಿ, ಸೀಟು ಹೊಂದಾಣಿಕೆ ಅಥವಾ ಪರಸ್ಪರ ಸಹಕಾರ, ಸ್ಪರ್ದಿಸದಿರುವೆಡೆ ಬೆಂಬಲವಾದರೂ ನೀಡಲು ಅನುವಾಗುವಂತೆ ಕನಿಷ್ಠ ಒಂದು ರಾಜಕೀಯ ಸಂದೇಶ ಹೋಗುವಂತಹ ಕ್ರಮವನ್ನು 'ಇಂಡಿಯಾ' ಕೂಟದ ಸಹಭಾಗಿಗಳಿಂದ ಇನ್ನೂ ಆಗಿಲ್ಲ. ಸಂವಿಧಾನ ದಿನಾಚರಣೆ ಸಂದರ್ಭಕ್ಕೆ ಅಖಿಲ ಭಾರತ ನಾಯಕರನ್ನು ಸರಕಾರ ಆಹ್ವಾನಿಸಿದ್ದು ಬಿಟ್ಟರೆ ಒಗ್ಗಟ್ಟಿನಿಂದ ಜನದ್ರೋಹಿ, ಕಡು ಭ್ರಷ್ಟ ಬಿಜೆಪಿಯನ್ನು ತೊಲಗಿಸುವ ಸಂಕಲ್ಪದ ರಾಜಕೀಯ ಹೋರಾಟದ ಸಂದೇಶ ಜನರ ನಡುವೆ ಹೋಗಬೇಕಿದೆ. ಈಗಲಾದರೂ ಅಂತಹ ಹೆಜ್ಜೆ ಅಗತ್ಯ.

* * *

ಬಿಜೆಪಿ: ಬಣಗಳ ಬಡಿದಾಟವೋ, ಹೈಕಮಾಂಡಿನ ರಾಜಕೀಯ ಕು-ತಂತ್ರವೋ?

ಈ ಚುನಾವಣೆಯ ಕಾವು ಅತೀ ಹೆಚ್ಚಿರುವುದು ಬಿಜೆಪಿಯೊಳಗೆ. ಘಟಾನುಘಟಿ ನಾಯಕರಿಗೆ ಈ ಬಾರಿ ಸ್ಪರ್ದೆಯ ಅವಕಾಶವನ್ನು ನಿರಾಕರಿಸಿ ಹೊಸಬರಿಗೆ ಅವಕಾಶ ಕಲ್ಪಿಸಿರುವುದು ಅತೃಪ್ತಿ, ಆಕ್ರೋಶಗಳನ್ನು ಸ್ಫೋಟಿಸಿದೆ. ಬಹಿರಂಗ ವಾಗ್ದಾಳಿಗಳಿಗೂ ಎಡೆ ಮಾಡಿದೆ. ಕೆಲವರಂತೂ ಅಧಿಕೃತ ಅಭ್ಯರ್ಥಿಯ ವಿರುದ್ಧ ಸ್ಪರ್ದಿಸುವ ಬೆದರಿಕೆ ಹಾಕಿದ್ದಾರೆ. ಹಿರಿಯ ನಾಯಕರನ್ನು ವಾಚಾಮಗೋಚರವಾಗಿ ಬೈಯ್ಯುತ್ತಿದ್ದಾರೆ. ಮಾಜಿ ಸಚಿವ ಕೆ.ಎಸ್.ಈಶ್ವರಪ್ಪನವರು ತಮಗೆ ಅಲ್ಲದಿದ್ದರೂ ಮಗನಿಗೆ ಈ ಬಾರಿ ಲೋಕಸಭೆಗೆ ಅವಕಾಶ ಕಲ್ಪಿಸುವ ಭರವಸೆ ಇಟ್ಟುಕೊಂಡಿದ್ದರು. ಹಾಗೆಂದೇ ಹಿಂದೆ ಅಸಮಬ್ಲಿಗೆ ಇವರ ಸ್ಪರ್ದೆಗೆ ಅವಕಾಶ ನಿರಾಕರಿಸಿದಾಗ ರಾಷ್ಟ್ರೀಯ ನಾಯಕರು ಮಗನಿಗಾದರೂ ಅವಕಾಶ ಕಲ್ಪಿಸುವ ಭರವಸೆ ನೀಡಿದ್ದರೆಂದು ಭಾವಿಸಿದ್ದರು. ಅದನ್ನು ಪಡೆಯಬೇಕೆಂದೇ ಸಿದ್ದರಾಮಯ್ಯ, ಡಿಕೆಶಿ, ಮುಸ್ಲಿಂ ರ ವಿರುದ್ಧ ಅಸಹ್ಯಕರವಾಗಿ ನಾಲಿಗೆ ಹರಿ ಬಿಡುತ್ತಾ 'ಸಂಘ ನಿಷ್ಠೆ' ತೋರಿಸುತ್ತಿದ್ದರು! ಇದೀಗ ಮಗನಿಗೆ ಹಾವೇರಿ ಲೋಕಸಭಾ ಸ್ಥಾನ ನಿರಾಕರಿಸಿರುವುದು ಅವರ ಸಿಟ್ಟು ಭುಗಿಲೇಳುವಂತೆ ಮಾಡಿದೆ. ಆರಂಭದಲ್ಲಿ 'ಯಡ್ಯೂರಪ್ಪನವರು ಅವರ ಮಗನಿಗೆ ಟಿಕೇಟ್ ಪಡೆಯುವಲ್ಲಿ, ಶೋಭಾ ಕರಂದ್ಲಾಜೆಗೂ ಕೊಡಿಸುವಲ್ಲಿ, ತಮ್ಮ ಮಗನಿಗೆ ಟಿಕೆಟ್ ತಪ್ಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ' ಎಂದು ಆರೋಪಿಸಿದರಲ್ಲದೇ 'ಕೊಟ್ಟ ಮಾತನ್ನು ತಪ್ಪಿದ್ದಾರೆ' ಎಂದು ಟೀಕಿಸಿದ್ದಾರೆ. ಈಗ ಬಿ.ವೈ.ರಾಘವೇಂದ್ರನ ವಿರುದ್ಧ ಶಿವಮೊಗ್ಗದಲ್ಲಿ ತಾವೇ ಕಣಕ್ಕೆ ಇಳಿಯುವುದಾಗಿ ಬೆದರಿಕೆ ಹಾಕಿದ್ದಾರೆ.

ಮೈಸೂರು-ಕೊಡಗು ಕ್ಷೇತ್ರದಿಂದ ಮೂರನೆಯ ಬಾರಿ ಸ್ಪರ್ದಾಕಾಂಕ್ಷಿಯಾಗಿದ್ದ ಪ್ರತಾಪಸಿಂಹರಿಗೆ ಟಿಕೇಟ್ ನಿರಾಕರಿಸಿರುವುದು, ಯದುವೀರ ಒಡೆಯರ್ ಗೆ ಕೊಟ್ಟಿರುವುದು ಪೇಪರ್ 'ಸಿಂಹ'ವನ್ನು ಕೆರಳಿಸಿದೆ. ಬಹಿರಂಗವಾಗಿಯೇ ಯದುವೀರನ ವಿರುದ್ಧ, ನಾಯಕರ ವಿರುದ್ಧ ಗುಡುಗಿದ್ದಾರೆ. ತಾವು 'ಹಿಂದುತ್ವ'ಕ್ಕೆ ಕಟಿಬದ್ಧವಾಗಿದ್ದಕ್ಕೆ ಬೆಲೆ ಇಲ್ಲವೇ? ಎಂದೂ ಕೇಳಿದ್ದಾರೆ. ಅಂದರೆ ಇವರ ದ್ವೇಷ ಕಾರುವ ಮಾತುಗಳು, ಕಿಚ್ಚು ಹೊತ್ತಿಸುವುದು, ನಾಲಿಗೆ ಕತ್ತರಿಸುವ, ಕೈ ಕತ್ತರಿಸುವ, ಗುಂಡಿಟ್ಟು ಕೊಲ್ಲಬೇಕು ಎಂದು ಅಬ್ಬರಿಸುವುದು, ಪಾಕಿಸ್ತಾನದ ಜಪ, ದೇಶ್ರೇಮದ ಉಬ್ಬರ, ಎಲ್ಲವೂ ಸ್ಟೇಜ್ ಮ್ಯಾನೇಜ್ಡ್, ಸಂಘವನ್ನು ಮೆಚ್ಚಿಸುವ ಲಾಭದಾಯಕ ನಿರೀಕ್ಷೆಯಲ್ಲಿ ಎನ್ನುವುದೂ ಸ್ಪಷ್ಟವಾಯಿತು. ಈಶ್ವರಪ್ಪ, ಪ್ರತಾಪಸಿಂಹ, ಮುಂತಾದವರ ಬಂಡಾಯದ ಕಿಡಿಗಳು ಹಾರುತ್ತವೆಯೋ, ಕುಂಯ್ಯಿಗುಡುತ್ತೋ ಇನ್ನೂ ಸ್ಪಷ್ಟವಿಲ್ಲ. ಶೋಭಾ ಕರಂದ್ಲಾಜೆ ಕಾರಣದಿಂದ ಸದಾನಂದಗೌಡ, ಮುಂತಾದವರು ಸ್ಥಾನಹೀನರಾಗಿದ್ದಾರೆ. ಸೋಮಣ್ಣನವರಿಗೆ ಹೊಸ ಕ್ಷೇತ್ರದಲ್ಲಿ ಮತ್ತೊಂದು ಸತ್ವ ಪರೀಕ್ಷೆಗೆ ಅವಕಾಶ.. ಅಂತೂ ರಾಜ್ಯದ ಉದ್ದಗಲಕ್ಕೂ ಬಿಜೆಪಿ ನಾಯಕರ ಬಾಯಿಯಲ್ಲಿ ಬಿರು ಮಾತುಗಳ ಬಿಸಿ ಕಿಡಿ ಹಾರುತ್ತಲೆ ಇವೆ.

ಇಲ್ಲಿ ಗಮನಿಸ ಬೇಕಾದೊಂದು ವಿಷಯ ಎಂದರೆ ಈ ಬಾರಿ ಟಿಕೇಟ್ ಗಳ ಹಂಚಿಕೆಯಲ್ಲಿ ಬಿಜೆಪಿ ಯಾವ ಸೂತ್ರವನ್ನು ರೂಪಿಸಿದೆ? ಎನ್ನುವುದು. ದೇಶದ ಇತರೆ ಕಡೆಗಳಲ್ಲಿಯೂ ಇದೇ ರೀತಿ ಹಿರಿಯ ನಾಯಕರನ್ನು ಪಕ್ಕಕ್ಕೆ ತಳ್ಳುವ ಖಚಿತ ನಿರ್ದಾರವನ್ನು ತಳೆದಿದೆ. ಈ ಬಗ್ಗೆ ಕಳೆದ ವರ್ಷವೇ ಕರ್ನಾಟಕ ಒಳಗೊಂಡು ಹಲವು ವಿಧಾನಸಭಾ ಚುನಾವಣೆಗಳಲ್ಲಿಯೂ ಇದೇ ಕಾರ್ಯತಂತ್ರ ಅನುಸರಿಸಿತ್ತು. ಆ ಕಾರಣದಲ್ಲಿಯೇ ಯಡ್ಯೂರಪ್ಪನವರನ್ನು ಮೂಲೆಗುಂಪು ಮಾಡಲು ಯತ್ನಿಸಿ, ಪೆಟ್ಟೂ ತಿಂದಿತ್ತು. ಅದನ್ನು ಲಕ್ಷಿಸಿಯೇ ಪುನಃ ಯಡ್ಯೂರಪ್ಪನವರಿಗೆ ಮತ್ತೇ ಪ್ರಾಮುಖ್ಯತೆ ನೀಡಿದೆ. ಈಗಲೂ ಟಿಕೆಟ್ ಹಂಚಿಕೆಯ ಪ್ರಹಸನದಲ್ಲಿ ಇದು ಬಿ.ಎಲ್. ಸಂತೋಷ್ ಬಣದ ಮೇಲೆ ಯಡ್ಯೂರಪ್ಪನವರ ಬಣದ ಮೇಲುಗೈ ಎಂದೆಲ್ಲಾ ವ್ಯಾಖ್ಯಾನಿಸಲಾಗುತ್ತಿದೆ. ಮೇಲ್ನೋಟದಲ್ಲಿ ಹಾಗೆ ಕಂಡರೂ ಬಿಜೆಪಿ-ಆರ್.ಎಸ್.ಎಸ್. ಗಳಿಗೆ ದೂರದ ಕಾರ್ಯತಂತ್ರದ ದೃಷ್ಟಿ ಇರುವುದನ್ನು ನಿರ್ಲಕ್ಷಿಸಬಾರದು.



ಮುಂದಿನ ಲೋಕಸಭೆಯಲ್ಲಿ ಅನುಭವಿ, ಜನ ಸಮೂಹದ ನಾಯಕರನ್ನು ಹೊರತು ಪಡಿಸಿ ತೀರಾ ಹೊಸಬರನ್ನು ತುಂಬಿಸವಂತಾದರೆ ಅವರ ಸರ್ವಾಧಿಕಾರಿ ಫ್ಯಾಶಿಸ್ಟ್ ಮಾದರಿ ಹೊಸ ವ್ಯವಸ್ಥೆಯನ್ನು ತರಲು, ಕ್ರೋನಿ ಕ್ಯಾಪಿಟಲಿಸಂ ಸ್ಥಾಪಿಸಲು ಸುಲಲಿತ ಎನ್ನುವ ಲೆಕ್ಕಾಚಾರ ಇದ್ದೇ ಇದೆ ಎನ್ನುವುದು. 370 ಸ್ಥಾನ ಗಳಿಕೆಯ ಅದರ ಗುರಿಯೂ ಕೂಡ ಈಗಿನ ಭಾರತದ ಸಂವಿಧಾನವನ್ನು ಬದಲಿಸುವ, ಅರ್ಥಹೀನಗೊಳಿಸುವ ನಿಖರ ಗುರಿ ಹೊಂದಿದೆ. ಅದಕ್ಕಾಗಿಯೇ ಈ ಹೊಸ ಸಾಹಸಕ್ಕೆ ಕೈ ಹಾಕಿದೆ.

ಇದು ಏನಾಗುತ್ತದೆ? ಗೊತ್ತಿಲ್ಲ.

ಕಳೆದ ಅಸೆಂಬ್ಲಿಯಲ್ಲಿ ಮಿಸ್ ಫೈರ್ ಆದಂತೆ ಬಿಜೆಪಿಗೆ ಆಗುವುದೋ, ಅಥವಾ ಫ್ಯಾಶಿಸ್ಟ್ ಮಾದರಿ ಆಡಳಿತಕ್ಕೆ ಮುಕ್ತ ಅವಕಾಶ ಕಲ್ಪಸಲಿದೆಯೋ?

ಹೀಗಿರುವಾಗ, ಎಲ್ಲಾ ಶಕ್ತಿ ಕ್ರೋಢೀಕರಿಸಿ ಭಾರತವನ್ನು, ಭಾರತದ ಜನತೆ, ಪ್ರಜಾಸತ್ತಾತ್ಮಕ ಸಂವಿಧಾನದ ಉಳಿಗಾಗಿ ನಿರ್ಣಾಯಕ ಹೋರಾಟಕ್ಕೆ ಸೆಕ್ಯುಲರ್ ಶಕ್ತಿಗಳು ಇಳಿಯ ಬೇಕು. ಬಿಜೆಪಿಯೇತರ, ಸೆಕ್ಯುಲರ್ ಪಕ್ಷಗಳೂ ಆಳವಾಗಿ ಚಿಂತಿಸಿ, ಅಗತ್ಯ ರಾಜಕೀಯ, ಸಂಘಟನಾ ಕ್ರಮ ವಹಿಸಬೇಕು. ಆತ್ಮ ಲೋಲುಪತೆ, ಸ್ವಕೇಂದ್ರಿತ ಏಕಮುಖ ನಡೆಗಳು ಅಪಾಯಕಾರಿ, ಮಾತ್ರವಲ್ಲ ಇಡೀ ದೇಶಕ್ಕೆ ಗಂಡಾಂತರವನ್ನು ತಂದೊಡ್ಡಬಲ್ಲವು.

●

ತಿದ್ದುಪಡಿ

ಸಂಪುಟ 18 ಸಂಚಿಕೆ 11 (ಮಾರ್ಚ್ 11 24 2024 ಜನಶಕ್ತಿ ಕನ್ನಡ ವಾರಪತ್ರಿಕೆ) ಯ ಪುಟ 7 ರಲ್ಲಿ ಚುನಾವಣಾ ಬಾಂಡ್. . ಲೇಖನದ ತಲೆಬರಹದಲ್ಲಿ 'ಸ್ಟೇಟ್ ಬ್ಯಾಂಕ್. . .' ಬದಲಿಗೆ 'ರಿಸರ್ವ್ ಬ್ಯಾಂಕ್ . .' ಅಂತ ಆಗಿದೆ. ತಪ್ಪಿಗೆ ವಿಷಾದಿಸುತ್ತಾ ತಿದ್ದಿ ಓದಿಕೊಳ್ಳಬೇಕಾಗಿ ವಿನಂತಿ.

-ಸಂ

ಸಂವಿಧಾನ ಮತ್ತು ಮಹಿಳೆ.......

ಪುಟ 2 ರಿಂದ

ಅರ್ಧ ಎಕರೆ ಹಿಡುವಳಿ ಇರುವವರಿಂದ ಹತ್ತು, ನೂರು, ಸಾವಿರ ಎಕರೆ ಹಿಡುವಳಿ ಇರುವವರಿಗೂ– ಎಲ್ಲ ಸವಲತ್ತುಗಳನ್ನು ಅವರ ಭೂಹಿಡುವಳಿ ನೆಲೆಯಲ್ಲಿ ಹಂಚುತ್ತಿವೆ. ಇದರಿಂದ ಸಾರ್ವಜನಿಕ ಸಂಪನ್ಮೂಲದ ಬಹುಪಾಲನ್ನು ದೊಡ್ಡ ಹಿಡುವಳಿದಾರರು ಪಡೆದು ಸಣ್ಣ ಮತ್ತು ಅತೀ ಸಣ್ಣ ಹಿಡುವಳಿದಾರರು ಏನೇನೂ ಪಡೆಯದಿರುವ ಸಾಧ್ಯತೆಯೂ ಇದೆ. ಇಲ್ಲಿ ಕೇವಲ ಹಿಡುವಳಿ ಪ್ರಶ್ನೆ ಮಾತ್ರ ಒಳಗೊಂಡಿರುವುದಲ್ಲ; ಲಿಂಗ ಪ್ರಶ್ನೆ ಕೂಡ ಒಳಗೊಂಡಿದೆ.

ಆಕ್ಸ್‌ಫಾಮ್ ಅಧ್ಯಯನದ ಪ್ರಕಾರ 17 ಕೋಟಿಯಷ್ಟು ಮಹಿಳೆಯರು ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳಲ್ಲಿ ದುಡಿದು ನಮ್ಮ ಆಹಾರದ ಶೇ.60–80ರಷ್ಟನ್ನು ಬೆಳೆಯುತ್ತಿದ್ದಾರೆ ಮತ್ತು ಶೇ.90ರಷ್ಟು ಡೈರಿ ಉತ್ಪನ್ನಗಳನ್ನು ಉತ್ಪಾದಿಸುತ್ತಿದ್ದಾರೆ. ಆದರೆ ಇವರಲ್ಲಿ ಕೇವಲ ಶೇ.13ರಷ್ಟು ಮಹಿಳೆಯರು ಮಾತ್ರ ಆಸ್ತಿ ಹಕ್ಕು ಹೊಂದಿದ್ದಾರೆ. ಬೀಜ ಬಿತ್ತಿ ನಾಟಿ ಮಾಡಿ ಫಸಲು ತೆಗೆಯುವ ಇಡೀ ಅವಧಿಯಲ್ಲಿ ಮಹಿಳೆ 3,300 ಗಂಟೆ ದುಡಿದರೆ ಪುರುಷ 1,860 ಗಂಟೆ ಮಾತ್ರ ದುಡಿಯುವುದು. ಹಾಗೆಂದು ಎಲ್ಲೂ ದೇಶದ ಬೆನ್ನೆಲುಬು ಹೆಚ್ಚು ಕೃಷಿ ದುಡಿಮೆ ಮಾಡುವ ಮಹಿಳೆ ಎಂದು ಗುರುತಿಸಲ್ಪಡುವುದಿಲ್ಲ. ಎಲ್ಲ ಕಡೆ ರೈತ, ಕೃಷಿಕ ಅಂದರೆ ಪುರುಷ ಎಂದೇ ಇರುವುದು. ಇದಕ್ಕೆ ಕಾರಣ ಭೂಹಿಡುವಳಿ ಪುರುಷರ ಸ್ವಾಧೀನ ಇರುವುದು. ಶೇ.80ರಷ್ಟು ಮಹಿಳೆಯರು ಗ್ರಾಮೀಣ ಪ್ರದೇಶದಲ್ಲಿ ಕೃಷಿಯನ್ನು ನೇರ ಅಥವಾ ಪರೋಕ್ಷವಾಗಿ ಅವಲಂಬಿತರಾಗಿದ್ದಾರೆ. ಅವರಲ್ಲಿ ಭೂಮಿ ಇದ್ದವರು ಅತ್ಯಲ್ಪ ಸಂಖ್ಯೆಯಲ್ಲಿದ್ದಾರೆ. ದೇಶದ ಬಹುತೇಕ ರಾಜ್ಯಗಳಲ್ಲಿ ಶೇ.5ರಷ್ಟು ಮಹಿಳೆಯರು ಭೂಮಿ ಹೊಂದಿದ್ದಾರೆ. ಕೇರಳದಲ್ಲಿ ಮಾತ್ರ ಶೇ.14ರಷ್ಟು ಮಹಿಳೆಯರು ಭೂಮಿ ಹೊಂದಿದ್ದಾರೆ. ಅಂದರೆ ಕೃಷಿ ಅಭಿವೃದ್ಧಿಗಾಗಿ ಸರಕಾರ ವಿನಿಯೋಜಿಸುತ್ತಿರುವ ಕೋಟಿಗಟ್ಟಲೆ ಸಂಪನ್ಮೂಲದಲ್ಲಿ ಮಹಿಳೆಯ ಪಾಲು ಅತ್ಯಲ್ಪ.

ಮಹಿಳೆಯರಿಗೆ ಉದ್ಯೋಗದಲ್ಲಿ ಮೀಸಲಾತಿ, ಶಿಕ್ಷಣದಲ್ಲಿ ಮೀಸಲಾತಿ, ವರದಕ್ಷಿಣೆ ನಿಷೇಧ ಕಾಯಿದೆ, ಲೈಂಗಿಕ ದೌರ್ಜನ್ಯ ತಡೆ ಕಾಯಿದೆ, ಭ್ರೂಣ ಹತ್ಯೆ ನಿಷೇಧ ಕಾಯಿದೆ ಇವೆಲ್ಲವೂ ಬಂದಿರುವುದು ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಸಮಾನತೆಯನ್ನು ನೋಡುವುದರಿಂದ. ಆದರೆ ಈ ಕಾಯಿದೆಗಳು ಅವುಗಳ ಉದ್ದೇಶಿತ ರೂಪದಲ್ಲಿ ಕಾರ್ಯಗತಗೊಳ್ಳುತ್ತಿಲ್ಲ. ಇದಕ್ಕೆ ಬಹುಮುಖ್ಯ ಕಾರಣ ಇವುಗಳಿಗೆ ಸಾಮಾಜಿಕ ಹಾಗು ರಾಜಕೀಯ ಒಪ್ಪಿಗೆ ಇಲ್ಲದಿರುವುದು. ಈ ಕಾಯಿದೆ ಅಥವಾ ಮಹಿಳೆಗೆ ಸಂಬಂಧಿಸಿದ ಯಾವುದೇ ಕಾಯಿದೆ ಉಲ್ಲಂಘನೆಯಾದಾಗ ಸಮಾಜದ ಬಹುತೇಕರು ಡಿಸ್ಟರ್ಬ್ ಆಗಬೇಕು. ಕಾಯಿದೆಯ ಉಲ್ಲಂಘನೆ ಮಹಿಳೆಯ ಹಕ್ಕಿನ ಉಲ್ಲಂಘನೆಯಾಗುತ್ತದೆ ಮತ್ತು ಇದು ಬಹುತೇಕರಲ್ಲಿ ಅತೃಪ್ತಿ ಸೃಷ್ಟಿಸಬೇಕು. ಮಹಿಳೆಯ ಹಕ್ಕಿನ ಉಲ್ಲಂಘನೆಯಾದಾಗ ಬಹುತೇಕರಲ್ಲಿ ತಳಮಳ ಉಂಟಾಗಬೇಕು. ಇವೆಲ್ಲವೂ ನಡೆಯಬೇಕಾದರೆ ಮಹಿಳೆಯ ಹಕ್ಕಿನ ಮಹತ್ವ ಮತ್ತು ಅವುಗಳನ್ನು ರಕ್ಷಿಸಿಕೊಳ್ಳುವ ಅನಿವಾರ್ಯತೆಯ ಅರಿವಿರಬೇಕು. ಇವತ್ತು ಮಹಿಳೆಯರಿಗೆ ಆಗಿರುವುದು ನಾಳೆ ನಮಗೂ ಆಗಬಹುದೆಂದು ತಿಳಿಯುವುದು ಒಂದು ಕ್ರಮ. ನೆರೆಯವರಿಗೆ ಆದ ಅನ್ಯಾಯ ನನಗೇ ಆಗಿದೆಯೆಂದು ತಿಳಿಯುವುದು ಮತ್ತೊಂದು ಕ್ರಮ.

ಈ ಎರಡೂ ಸಂದರ್ಭಗಳಲ್ಲೂ ಹಕ್ಕಿನ ಉಲ್ಲಂಘನೆಯಾದಾಗ ಅವುಗಳ ರಕ್ಷಣೆಗೆ ಹೋರಾಟಗಳನ್ನು ಕಾಣಬಹುದು. ಇವೆಲ್ಲ ಸಾಧ್ಯವಾಗಬೇಕಾದರೆ ಮಹಿಳೆ ಮತ್ತು ಪುರುಷರು ಸಮಾನರು ಎನ್ನುವ ಕಲ್ಪನೆ ಜಾಗ್ರತವಾಗಬೇಕು. ಊಟಕ್ಕಿಲ್ಲದ ಮಹಿಳೆ, ವಸತಿ ಹೀನ ಮಹಿಳೆ, ಆರೋಗ್ಯ ಇಲ್ಲದ ಮಹಿಳೆಯ ಸಮಸ್ಯೆ ಕೇವಲ ಮಹಿಳೆಯ ಸಮಸ್ಯೆಯಲ್ಲ. ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಮಹಿಳೆಯರು ಇವೆಲ್ಲವನ್ನು ಕೊರತೆ ರೂಪದಲ್ಲಿ ಅನುಭವಿಸುತ್ತಾರೆಂದರೆ ಇನ್ಯಾರೋ ಇವೆಲ್ಲವನ್ನು ಹೆಚ್ಚಿನ ಪ್ರಮಾಣದಲ್ಲಿ ಅನುಭವಿಸುತ್ತಿದ್ದಾರೆಂದೇ ಅರ್ಥ. ಇಂತಹ ಸ್ಥಿತಿಗೆ ಲಿಂಗ ಸಂಬಂಧಗಳನ್ನು, ಅಧಿಕಾರ ಸಂಬಂಧಗಳನ್ನು ಅಸಮಾನತೆಯ ನೆಲೆಯಲ್ಲಿ ಕಟ್ಟಿಕೊಂಡಿರುವುದು ಕಾರಣ. ಈ ಅಸಮಾನತೆಯನ್ನು ಪರಿಹರಿಸಲು ಪ್ರಥಮ ಆದ್ಯತೆ ಕೊಡದಿದ್ದರೆ ಮಹಿಳೆಯರ ಜೀವನಮಟ್ಟ ಸುಧಾರಿಸಲು ಸಾಧ್ಯವೇ ಇಲ್ಲ. ಏಕೆಂದರೆ ಅತ್ಯಂತ ಬಡತನ ಇರುವ ಪರಿಸರದಲ್ಲಿ ಮಹಿಳೆಯ ಶಾರೀರಿಕ ಹಾಗು ಮಾನಸಿಕ ಆರೋಗ್ಯ ಕೂಡ ಅಸ್ಥಿರತೆಯಿಂದ ಕೂಡಿರುತ್ತದೆ. ಮಹಿಳೆಯ ಆರೋಗ್ಯ ಅವಳ ಮಕ್ಕಳ ಮತ್ತು ಕುಟುಂಬದ ಆರೋಗ್ಯವನ್ನು ಗಾಢವಾಗಿ ಕಾಡುತ್ತದೆ. ಇಂತಹ ಅಸ್ಥಿರ ಕುಟುಂಬಗಳ ನೆಲೆಗಟ್ಟಲ್ಲಿ ಬಲವಾದ ಸಮುದಾಯ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಿಲ್ಲ. ಇವೆಲ್ಲವನ್ನು ಮನಗಂಡೇ ಸಂವಿಧಾನ ಮಹಿಳಾ ಸಮಾನತೆಗೆ ಒತ್ತು ನೀಡಿದೆ.

ಎಲ್ಲ ಕಡೆ ರೈತ, ಕೃಷಿಕ ಅಂದರೆ ಪುರುಷ ಎಂದೇ ಇರುವುದು. ಇದಕ್ಕೆ ಕಾರಣ ಭೂಹಿಡುವಳಿ ಪುರುಷರ ಸ್ವಾಧೀನ ಇರುವುದು. ಶೇ.80ರಷ್ಟು ಮಹಿಳೆಯರು ಗ್ರಾಮೀಣ ಪ್ರದೇಶದಲ್ಲಿ ಕೃಷಿಯನ್ನು ನೇರ ಅಥವಾ ಪರೋಕ್ಷವಾಗಿ ಅವಲಂಬಿತರಾಗಿದ್ದಾರೆ. ಅವರಲ್ಲಿ ಭೂಮಿ ಇದ್ದವರು ಅತ್ಯಲ್ಪ ಸಂಖ್ಯೆಯಲ್ಲಿದ್ದಾರೆ. ದೇಶದ ಬಹುತೇಕ ರಾಜ್ಯಗಳಲ್ಲಿ ಶೇ.5ರಷ್ಟು ಮಹಿಳೆಯರು ಭೂಮಿ ಹೊಂದಿದ್ದಾರೆ. ಕೇರಳದಲ್ಲಿ ಮಾತ್ರ ಶೇ.14ರಷ್ಟು ಮಹಿಳೆಯರು ಭೂಮಿ ಹೊಂದಿದ್ದಾರೆ. ಅಂದರೆ ಕೃಷಿ ಅಭಿವೃದ್ಧಿಗಾಗಿ ಸರಕಾರ ವಿನಿಯೋಜಿಸುತ್ತಿರುವ ಕೋಟಿಗಟ್ಟಲೆ ಸಂಪನ್ಮೂಲದಲ್ಲಿ ಮಹಿಳೆಯ ಪಾಲು ಅತ್ಯಲ್ಪ.





ಸ್ವಾತಂತ್ರ್ಯ

ಸಂವಿಧಾನ ರಾಜಕೀಯ ಸ್ವಾತಂತ್ರ್ಯ ನೀಡಿದೆ. ಭಾರತದ ಎಲ್ಲ ಪ್ರಜೆಗಳಿಗೆ ವಾಕ್, ಅಭಿವ್ಯಕ್ತಿ, ಸಂಘಟನಾ ಸ್ವಾತಂತ್ರ್ಯಗಳಿವೆ. ಈ ಸ್ವಾತಂತ್ರ್ಯಗಳನ್ನು ಸಮಾಜದ ಎಲ್ಲರ ಆರ್ಥಿಕ, ಸಾಂಸ್ಕೃತಿಕ ಸ್ವಾತ್ರಂತ್ರ್ಯವನ್ನು ಹೆಚ್ಚಿಸಲು ಅಥವಾ ಅಸಾತಂತ್ರ್ಯಗಳನ್ನು ಕಡಿಮೆ ಮಾಡಲು ಬಳಸಬೇಕೆನ್ನುವುದು ಸಂವಿಧಾನದ ಆಶಯ. ಸಂವಿಧಾನ ನೀಡಿರುವ ವಾಕ್, ಅಭಿವ್ಯಕ್ತಿ ಸ್ವಾತಂತ್ರ್ಯಗಳು ಅನಿರ್ಬಂಧಿತ ಸ್ವಾತಂತ್ರ್ಯಗಳಲ್ಲ. ದೇಶದ ಭದ್ರತೆಗೆ ಧಕ್ಕೆ ತರುವ ರೀತಿಯಲ್ಲಿ, ಕೋಮು ಸೌಹಾರ್ದತೆಯನ್ನು ಕದಡುವ ರೀತಿಯಲ್ಲಿ, ಮತ್ತೊಬ್ಬರ ಮಾನಸಮ್ಮಾನಕ್ಕೆ ಚ್ಯುತಿ ತರುವ ರೀತಿಯಲ್ಲಿ ಈ ಸ್ವಾತಂತ್ರ್ಯವನ್ನು ಬಳಸಬಾರದೆನ್ನುವ ನಿರ್ಬಂಧವಿದೆ. ಇದರೊಂದಿಗೆ ಪರಿಗಣಿಸಬೇಕಾದ ಮತ್ತೊಂದು ಮಹತ್ವದ ಸಂಗತಿಯೆಂದರೆ ಸ್ವಾತಂತ್ರ್ಯವೊಂದು ರಾಜಕೀಯ ಹಕ್ಕು. ಸಂವಿಧಾನದಲ್ಲಿ ರಾಜಕೀಯ ಸಮಾನತೆಗೆ ನೀಡಿದಷ್ಟೇ ಮಹತ್ವವನ್ನು ರಾಜಕೀಯ ಸ್ವಾತಂತ್ರ್ಯಕ್ಕೂ ನೀಡಲಾಗಿದೆ. ಸಮಾನತೆ ಮತ್ತು ಸ್ವಾತಂತ್ರ್ಯಗಳಿಗೆ ನೀಡಿರುವ ಮಹತ್ವದ ಹಿಂದೆ ಕೆಲಸ ಮಾಡುತ್ತಿರುವ ಗ್ರಹಿಕೆಗಳು ಒಂದೇ. ಅದೇನೆಂದರೆ ನಮ್ಮ ಸಮಾಜದಲ್ಲಿ ಅಗಾಧ ಪ್ರಮಾಣದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಅಸ್ವಾತಂತ್ರ್ಯಗಳಿವೆ. ಬಡತನ, ನಿರುದ್ಯೋಗ, ಸಂಪನ್ಮೂಲಗಳ ಅಸಮಾನ ಒಡೆತನ ಇತ್ಯಾದಿಗಳು ಆರ್ಥಿಕ ಸ್ವಾತಂತ್ರ್ಯದ ಆಚರಣೆಗೆ ದೊಡ್ಡ ತೊಡಕಾಗಿವೆ. ಲಿಂಗ, ಜಾತಿ, ಧರ್ಮ ಭೇದಗಳು, ಶಿಕ್ಷಣ, ಆರೋಗ್ಯ, ವಸತಿ, ನೈರ್ಮಲ್ಯದ ಕೊರತೆಗಳು ಸಾಮಾಜಿಕ ಸಾಂಸ್ಕೃತಿಕ ಸ್ವಾತಂತ್ರ್ಯಗಳ ಆಚರಣೆಗೆ ದೊಡ್ಡ ಅಡ್ಡಿಯಾಗಿವೆ. ರಾಜಕೀಯ ಸ್ವಾತಂತ್ರ್ಯವನ್ನು ಬಳಸಿಕೊಂಡು ಈ ಎಲ್ಲ ಅಸ್ವಾತಂತ್ರ್ಯಗಳನ್ನು ಕಡಿಮೆಗೊಳಿಸಬೇಕೆನ್ನುವುದು ಸಾಂವಿಧಾನದ ಆಶಯ.

ಸಂವಿಧಾನ ಆಶಿಸುವ ಸ್ವಾತಂತ್ರ್ಯದ ಆಚರಣೆಗೂ ದಿನನಿತ್ಯ ಬದುಕಿನಲ್ಲಿ ಆಚರಣೆಗೂ ಆಕಾಶಭೂಮಿ ಅಂತರವಿದೆ. ದಿನನಿತ್ಯದ ಬದುಕಿನಲ್ಲಿ ಸಮಷ್ಠಿಯ ಸ್ವಾತಂತ್ರ್ಯ ಹೆಚ್ಚಿಸುವ ಸ್ವಾತಂತ್ರ್ಯದ ಪ್ರಶ್ನೆಗಳಿಗಿಂತ ಹೆಚ್ಚು ಬಲಾಢ್ಯ ವ್ಯಕ್ತಿಗಳ ಅಥವಾ ಗುಂಪುಗಳ ಸ್ವಾತಂತ್ರ್ಯದ ಪ್ರಶ್ನೆಗಳು ಹೆಚ್ಚು ಸುದ್ದಿಯಲ್ಲಿರುತ್ತವೆ. ಉದಾಹರಣೆಗೆ ಇತ್ತೀಚಿನ ಪದ್ಮಾವತಿ ಚಲನಚಿತ್ರದ ಪ್ರಹಸನವನ್ನೇ ಪರಿಶೀಲಿಸಬಹುದು. ಈ ಚಲನಚಿತ್ರದಲ್ಲಿ ರಾಜಸ್ತಾನದ ರಜಪೂತ ವಂಶದ ರಾಣಿಯನ್ನು ಕೆಟ್ಟದಾಗಿ ಬಿಂಬಿಸಿದ್ದಾರೆ, ಇದು ತಮ್ಮ ಸಮುದಾಯದ ಮಾನಸಮ್ಮಾನಕ್ಕೆ ಅಡ್ಡಿಯಾಗಿದೆ. ಆದುದರಿಂದ ಇದನ್ನು ನಿಷೇಧಿಸಬೇಕೆಂದು ರಜಪೂತ ಸಮುದಾಯಕ್ಕೆ ಸೇರಿದ ಕೆಲವರು ಪ್ರತಿಭಟಿಸುತ್ತಿದ್ದಾರೆ. ಚಲನಚಿತ್ರವನ್ನು ಬೆಂಬಲಿಸುವವರು ನಿರ್ದೇಶಕರಿಗೆ ಅಭಿವ್ಯಕ್ತಿ ಸ್ವಾತಂತ್ರ್ಯ ಇದೆ, ಆ ಸ್ವಾತಂತ್ರ್ಯ ಬಳಸಿಕೊಂಡು ಅವರು ಚಲಚಿತ್ರ ಮಾಡಿದ್ದಾರೆ. ಆದುದರಿಂದ ಚಲನಚಿತ್ರವನ್ನು ನಿಷೇಧಿಸುವುದು ಚಲನ ಚಿತ್ರ ಮಾಡುವವರ ಸೃಜನಶೀಲತೆಯನ್ನೇ ಕಿತ್ತುಕೊಂಡಂತೆ ಎಂದು ವಾದಿಸುತ್ತಾರೆ. ಮೇಲ್ನೋಟಕ್ಕೆ ಎರಡೂ ವಾದಗಳು ಸರಿ ಇದ್ದಂತೆ ತೋರುತ್ತವೆ. ಆದರೆ ಇದೇ ಪ್ರಕರಣವನ್ನು ಆಳವಾಗಿ ಪರಿಶೀಲಿಸಿದರೆ ಇನ್ನು ಹಲವು ಸಂಗತಿಗಳು ಗೋಚರವಾಗುತ್ತವೆ. ವ್ಯಕ್ತಿ ಮತ್ತು ರಾಷ್ಟ್ರ ಈ ಎರಡು ಗುರುತುಗಳನ್ನು ಮಾತ್ರ ಸಂವಿಧಾನ ಎತ್ತಿ ಹಿಡಿಯುತ್ತಿದೆ. ಸಂವಿಧಾನದ ದೃಷ್ಟಿಯಿಂದ ನೋಡಿದರೆ ಸಿನಿಮಾ ಮಹಿಳೆಯ ವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುತ್ತಿದೆ. ಜಾತಿ, ಧರ್ಮಗಳ ಚೌಕಟ್ಟನ್ನು ಮೀರಿ ತಾನು ಇಚ್ಚಿಸಿದ ವ್ಯಕ್ತಿಯನ್ನು ಪ್ರೇಮಿಸುವ ರಾಣಿಯ ತೀರ್ಮಾನ ವ್ಯಕ್ತಿ ಸ್ವಾತಂತ್ರ್ಯದ ದೃಷ್ಟಿಯಿಂದ ಮಹತ್ವದ ತೀರ್ಮಾನ.

(ಮುಂದುವರಿಯುವುದು)

ಶ್ರಮ ಬಂಧುಗಳ ಸಾರ್ಥಕತೆ

ಕುಂದಾಪುರದಲ್ಲಿ "ಬೆವರು" ಎಂಬ ಕಟ್ಟಡ ಕಾರ್ಮಿಕರ ಸ್ವಂತ ಕಛೇರಿ ಉದ್ಘಾಟನೆ

ಸುರೇಶ್ ಕಲ್ಲಾಗರ

ಕುಂದಾಪುರ ತಾಲೂಕು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘ (ರಿ.) (**CWFI-CITU**) ಸಂಘವು ಕಳೆದ 17 ವರ್ಷಗಳಿಂದ ಉಡುಪಿ ಜಿಲ್ಲೆಯಲ್ಲಿ ಕಟ್ಟಡ ಕಾರ್ಮಿಕರ ಮಧ್ಯೆ ಕೆಲಸ ಮಾಡುತ್ತಿದೆ. ಸಂಘವು 61 ಗ್ರಾಮ ಮಟ್ಟದ ಘಟಕಗಳನ್ನು ಹೊಂದಿ ರಾಜ್ಯದಲ್ಲಿ ಒಂದು ಮಾದರಿಯಾಗಿ ಕೆಲಸವನ್ನು ಮಾಡುತ್ತಿದೆ.

ಇತ್ತೀಚೆಗೆ ಸಿಐಟಿಯು ರಾಜ್ಯ ಹಾಗೂ ಕೇಂದ್ರ ಸಮಿತಿಗಳು ಮೋದಿ ಸರಕಾರದ ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ಹೋರಾಟಕ್ಕೆ ಕರೆ ನೀಡಿದಾಗ ಗ್ರಾಮ ಮಟ್ಟದಲ್ಲಿ ಈ ನೀತಿಗಳ ವಿರುದ್ಧ ನೂರಾರು ಮನೆಗಳಿಗೆ ಕರಪತ್ರ ಹಂಚಿ ಪ್ರಚಾರ ಹಾಗೂ ಗ್ರಾಮ ಪಂಚಾಯತ್ ಎದುರುಗಡೆ ಕೆಂಬಾವುಟ ಹಿಡಿದು ಪ್ರತಿಭಟನೆಗಳನ್ನೂ ನಡೆಸಿದ್ದಾರೆ.

ಸಿಐಟಿಯು ರಾಜ್ಯ ಸಮ್ಮೇಳನ ಸಂದರ್ಭಗಳಲ್ಲಿ ಮನೆ ಮನೆ ಪ್ರಚಾರ ಹಾಗೂ ಮನೆ ಮನೆಗಳಿಂದ ನಿಧಿ ಸಂಗ್ರಹ ಮಾಡಿರುವುದು ಐತಿಹಾಸಿಕ ದಾಖಲೆಯಾಗಿದೆ.

ಸಂಘಟನಾತ್ಮಕವಾಗಿ ಅತ್ಯಂತ ಶಿಸ್ತುಬದ್ಧವಾಗಿ ಪ್ರತಿ ವರ್ಷ ಮಹಾಸಭೆಗಳು, ಕಮಿಟಿಯಿಂದ ಕಮಿಟಿಗೆ ನಿರಂತರವಾದ ಲೆಕ್ಕ ಪತ್ರ ಮಂಡಿಸಿ ಚರ್ಚೆ, ಸಂಘದ ಆರಂಭದಿಂದಲೂ ಬ್ಯಾಂಕ್ ಮೂಲಕ ವ್ಯವಹಾರ ಅತ್ಯಂತ ಪಾರದರ್ಶಕವಾಗಿ ಸಂಘವನ್ನು ನಡೆಸಿದರ ಪರಿಣಾಮವಾಗಿ ಸಂಘವನ್ನು ಮಾದರಿಯಾಗಿಸಲು ಸಾಧ್ಯವಾಯಿತು.

ಕಟ್ಟಡ ಕಾರ್ಮಿಕರ "ಬೆವರು"

2007 ಸಂಘ ಸ್ಥಾಪನೆ ಆದ 5 ವರ್ಷಗಳ ನಂತರ ಸಂಘಕ್ಕೆ ಹೊಸ ಕಛೇರಿ ಹೊಂದುವ ಚರ್ಚೆಗಳು ಆರಂಭಗೊಂಡಿತು. ಕಾರ್ಯಕಾರಿ ಸಮಿತಿ, ಮಹಾಸಭೆಗಳಲ್ಲಿ ಈ ನಿಟ್ಟಿನಲ್ಲಿ ಚರ್ಚೆ ನಡೆದು 2012 ರಲ್ಲಿ ಕರಾವಳಿಯ ಪ್ರಸಿದ್ಧ ಕಲೆ ಯಕ್ಷಗಾನ ಪ್ರದರ್ಶಿಸಿ ಸ್ವಂತ ಕಛೇರಿ ನಿಧಿ ಸಂಗ್ರಹಿಸುವ ಗುರಿ ಆರಂಭಿಸಲಾಯಿತು. ಅನಂತರ ಮತ್ತೆ ಚರ್ಚೆ ನಡೆದು ಪ್ರತಿ ವರ್ಷ ಪ್ರತಿಯೊಬ್ಬ ಸಂಘದ ಸದಸ್ಯ ತನ್ನ ಸದಸ್ಯತ್ವ ಜೊತೆಗೆ ಕಟ್ಟಡ ನಿಧಿ ರೂ. 100/– ನೀಡಬೇಕು ಎಂದು ಮಹಾಸಭೆಯಲ್ಲಿ ನಿರ್ಣಯ ಕೈಗೊಂಡು 11 ವರ್ಷಗಳಿಂದ ಸಂಗ್ರಹಿಸಿ ಬ್ಯಾಂಕ್‌ನಲ್ಲಿ ಪ್ರತ್ಯೇಕ ಠೇವಣಿ ಇಟ್ಟು 2018 ಇಸವಿಯಲ್ಲಿ 10 ಸೆಂಟ್ಸ್ ಭೂಮಿಯನ್ನು ಪುರಸಭಾ ವ್ಯಾಪ್ತಿಯಲ್ಲಿ ಖರೀದಿಸಲಾಯಿತು.

ಕಟ್ಟಡವು 9114.935 ಚದರ ಅಡಿಯಲ್ಲಿ ರೂ. 1,20,01,324/– (ಕೋಟಿಗಳಲ್ಲಿ) ನಿರ್ಮಾಣಕ್ಕೆ ಅಂದಾಜಿಸಲಾಗಿದೆ.

ಹಂತ ಹಂತವಾಗಿ ಕಟ್ಟಡ ನಿರ್ಮಾಣ ನಡೆಸಿ ಕಳೆದ 5 ವರ್ಷಗಳಿಂದ ಸಂಘದ ಸದಸ್ಯರಾದ ಗಾರೆ ಮೇಸ್ತ್ರಿಗಳು, ಗಾರೆ ಹೆಲ್ಪರ್‌ಗಳು, ಪೈಂಟರುಗಳು ಸೇರಿದಂತೆ ಸುಮಾರು 677 ಮಂದಿ ಈ ಅವಧಿಯಲ್ಲಿ ಸಂಘದ ಸ್ವಂತ ಕಟ್ಟಡಕ್ಕೆ ಒಂದು ದಿನದ ಬೆವರು ಹರಿಸಿ ಶ್ರಮವನ್ನು ಧಾರೆ ಎರೆದಿದ್ದಾರೆ. ಇದರಲ್ಲಿ ಸುಮಾರು 200ಕ್ಕೂ ಅಧಿಕ ಮಹಿಳೆಯರು ಶ್ರಮದಾನ ಮಾಡಿರುವುದು ಗಮನಿಸಬೇಕಾದ ಅಂಶವಾಗಿದೆ.

ಬೆವರು ಕಟ್ಟಡವನ್ನು ಮೊದಲ ಮಹಡಿ ಪೂರ್ಣಗೊಳಿಸುವ ಹಂತದಲ್ಲಿ ಸಂಘಕ್ಕೆ ಬಾರಿ ಆರ್ಥಿಕ ಅಡಚಣೆ ಬಂದೆರಗಿತು. ಆ ಸಂದರ್ಭಗಳಲ್ಲಿ ಮಹಾಸಭೆಯಲ್ಲಿ ಚರ್ಚೆ ಮಾಡಲಾಯಿತು. ಚರ್ಚೆಯಲ್ಲಿ ಪ್ರತಿಯೊಬ್ಬ ಸಂಘದ ಸದಸ್ಯನೂ ತಮ್ಮ ಒಂದು ದಿನದ ವೇತನ ರೂ. 1,000/– ನೀಡಲು ಹಾಗೂ ಕೊನೆಗಳಿಗೆಯಲ್ಲಿ ಶೈಕ್ಷಣಿಕ ಧನಸಹಾಯ ಮಂಜೂರು ಆಗದ ಸಂಕಷ್ಟದ ದಿನಗಳಲ್ಲಿ ನಿರ್ಣಯ ಕೈಗೊಂಡಿತು. ಇದು ಅತ್ಯಂತ ಸವಾಲಿನದ್ದಾಗಿತ್ತು. ಆದಾಗ್ಯೂ ಸಂಘದ ಸುಮಾರು 3 ಸಾವಿರರಷ್ಟು ಮಂದಿ ಪ್ರಾಮಾಣಿಕವಾಗಿ ನೀಡಿದರು.

ಸಿಮೆಂಟು, ಕಿಟಕಿ ಬಾಗಿಲು, ಕುರ್ಚಿಗಳು, ಮಂಚ, ಗಡಿಯಾರ, ಫ್ಯಾನ್‌ಗಳನ್ನು ಕೊಡುಗೆ ನೀಡಿದ ಕಾರ್ಮಿಕರು

ಕಟ್‌ಬೇಲ್ತೂರು ರತ್ನಾಕರ ಆಚಾರ್ಯ, ಕಟ್‌ಬೇಲ್ತೂರು ಶ್ರೀಧರ ಗಾಣಿಗ, ರಮೇಶ್ ಗಾಣಿಗ, ರವಿ ಬಳೆಗಾರ, ಮಂಜುನಾಥ ಆಚರ್ಯ, ಹೊಸೂರು ರತ್ನಾಕರ ಆಚಾರ್ಯ, ಬಸ್ರೂರು ಘಟಕದ ಉದಯ ಗಾಣಿಗ, ಬಸ್ರೂರು ಘಟಕದಿಂದ 8 ಫ್ಯಾನುಗಳು, ಗೌರವಾಧ್ಯಕ್ಷ ಚಿಕ್ಕಮೊಗವೀರ ಅವರಿಂದ 3 ಫ್ಯಾನುಗಳು, ಚಂದ್ರಶೇಖರ ಮೊಗವೀರ ಹಕ್ಲಾಡಿ, ಗಂಗಾಧರ ಗುಜ್ಜಾಡಿ, ಗಣೇಶ್ ಆಚಾರ್, ಹರೀಶ್ ಭಂಡಾರಿ, ಅರುಣ್ ಪೂಜಾರಿ, ರಾಮಚಂದ್ರ ನಾವಡ, ಉದಯ ಆಚಾರ್ಯ, ಶ್ರೀಕಾಂತ್ ಆಚಾರ್ ಶಂಕರನಾರಾಯಣ, ಸುಬ್ರಹ್ಮಣ್ಯ ಶೇರಿಗಾರ್, ಲಾರೆನ್ಸ್ ಬೆರೆಟ್ಟೋ, ಮಥಾಯಿಸ್ ಬೆರೆಟ್ಟೋ, ಮಹೇಶ್ ಜಾಲಾಡಿ, ಸಲಿಂ, ಬಸ್ರೂರು ಘಟಕದ ನಾಗರಾಜ್ ಶೇರಿಗಾರ್, ಸುನೀಲ್ ಬಂಗೇರ, ಇಡೂರು ರಾಜು ನಾಯ್ಕ್, ಗಣಪತಿ, ಶೇಖರ ಪೂಜಾರಿ, ಹಳ್ನಾಡಿ ಕೋಲಾರ ಕಟ್ಟಡ ಕಾರ್ಮಿಕರ ಆಶಾ ಅವರು ಗಡಿಯಾರ, ಅಕ್ಷರದಾಸೋಹ ನೌಕರರ ಸಂಘದ ಮಂಚ ಸೇರಿದಂತೆ ತಮ್ಮ ಗರಿಷ್ಠ ಆರ್ಥಿಕ ಸಹಾಯಗಳು, ಕೊಡುಗೆಗಳನ್ನು ನೀಡಿರುವುದು ಅವರು ಸಂಘದ ಮೇಲಿರುವ ವಿಶ್ವಾಸ ತೋರಿಸಿದೆ.



ಒಟ್ಟಾರೆ ಎಲ್ಲಾ ಸದಸ್ಯರು ಒಂದಲ್ಲ ಒಂದು ರೀತಿಯಲ್ಲಿ ಜಿಲ್ಲೆಯ ಕಾರ್ಮಿಕ ಚಳುವಳಿಗೆ ದಾರಿ ದೀಪವಾಗಿಸಿದ್ದಾರೆ ಈ ಕರ್ತವ್ಯ ಚಳುವಳಿ ಮುನ್ನೆಡೆಸಲು ಹೋರಾಟದ ಹಾದಿಯಲ್ಲಿರುವ ಸಾವಿರಾರು ಕಾರ್ಮಿಕರಿಗೆ ಸ್ಪೂರ್ತಿದಾಯಕವಾಗಿದೆ.

ಮೋದಿಯವರ ಕಾರ್ಮಿಕ ಸಂಹಿತೆ ಹಾಗೂ ಕಟ್ಟಡ ಕಾರ್ಮಿಕರ ಬೆವರು

ಮೋದಿಯವರ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಕಾರ್ಮಿಕ ಕಾನೂನುಗಳನ್ನು ರದ್ದುಪಡಿಸಿ ಹೊಸ ಕಾರ್ಮಿಕ ಸಂಹಿತೆ ತಂದಿದೆ. ಹೊಸ ಸಂಹಿತೆ ಜಾರಿ ಮಾಡಲು ನಮ್ಮ ಹೋರಾಟಗಳಿಂದ ತಡೆಯಲು ಸಾಧ್ಯವಾಗಿದೆ. ಆದರೆ ಮುಂಬರುವ 2024 ಲೋಕಸಭಾ ಚುನಾವಣೆಯು ಮೋದಿಯವರು ಅಧಿಕಾರಕ್ಕೆ ಬಂದರೆ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿ ಕಾನೂನು ಸೆಸ್ ಕಾನೂನು ರದ್ದು ಆಗುವ ಅಪಾಯಗಳಿವೆ. ಇದುವರೆಗೂ ಕಟ್ಟಡ ಕಾರ್ಮಿಕರನ್ನು ಸೌಲಭ್ಯಗಳ ಆಧಾರದ ಮೇಲೆ ಸಂಘಟನೆಗೆ ನೋಂದಾಯಿಸುತ್ತಿರುವುದರಿಂದ ಕಾರ್ಮಿಕರಿಗೆ ಸೌಲಭ್ಯಗಳ ಪ್ರಜ್ಞೆಯಿಂದ ವರ್ಗ ಪ್ರಜ್ಞೆಗೆ ತರಬೇಕಾಗಿದೆ. ಅವರ ಮೇಲಾಗುತ್ತಿರುವ ಕೂಲಿಯ ಶೋಷಣೆ, ಮಹಿಳೆಯರಿಗೆ ಕೆಲಸದ ಸ್ಥಳಗಳಲ್ಲಿ ಲೈಂಗಿಕ ಶೋಷಣೆ, ಅಪಘಾತಗಳಾದರೆ ಸಂಘಟನೆ ಮಧ್ಯೆ ಪ್ರವೇಶ ಅವರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ಹಾಗೂ ಸೌಲಭ್ಯಗಳು ಹೀಗೆ ಹತ್ತಾರು ರಕ್ಷಣೆ ಒದಗಿಸುವ ಕೆಲಸಗಳನ್ನು ಸಂಘಟನೆ ಮಾಡಿದರೆ ಸರಕಾರದ ಕಲ್ಯಾಣ ಮಂಡಳಿಯ ಸೌಲಭ್ಯಗಳಿಗಾಗಿ ಕಾರ್ಮಿಕರು ಸಂಘ ಎಂಬ ಬದಲಾಗಿ ಕಾರ್ಮಿಕ ವರ್ಗಕ್ಕಾಗಿ ಸಂಘ ಎಂಬ ಅರಿವು ಮೂಡಿಸಿ ಸಮಾಜ ಬದಲಾವಣೆಗಾಗಿ ಹೋರಾಟಗಳನ್ನು ಕಟ್ಟಿ ಬೆಳೆಸಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಸ್ವಂತ ಕಛೇರಿಯ ಒಂದು ಭಾಗದಲ್ಲಿ ಕಟ್ಟಡ ಕಾರ್ಮಿಕರ ಸಹಕಾರಿ ಸಂಘ ತೆರೆಯಲು ಭವಿಷ್ಯದ ಕಣ್ಣೋಟ ಅತ್ಯಂತ ಮಹತ್ವದ್ದಾಗುತ್ತದೆ.

"ಬೆವರು" ಶ್ರಮ ಸಂಸ್ಕೃತಿಯ ಪ್ರತೀಕ: ಕೆ. ಮಹಾಂತೇಶ್

ಮಾರ್ಚ್ 10 ರಂದು ಕುಂದಾಪುರ ತಾಲೂಕು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘದ ಸ್ವಂತ ಕಛೇರಿ ಕಟ್ಟಡ ಕಾರ್ಮಿಕರ ರಾಜ್ಯ ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಕೆ. ಮಹಾಂತೇಶ್ ಅವರು ನೂತನ ಕಛೇರಿ ಉದ್ಘಾಟಿಸಿ ಮಾತನಾಡುತ್ತಾ :

ದುಡಿಮೆಯು ಮನುಷ್ಯನನ್ನು ನಿಸ್ವಾರ್ಥಿಯನ್ನಾಗಿ ಮಾಡುತ್ತದೆ. ಬೆವರು ಎಂದರೆ ಅದು ಶ್ರಮ ಸಂಸ್ಕೃತಿಯ ಪ್ರತೀಕ ಹೀಗಾಗಿ ಬೆವರು ಅತ್ಯಂತ ಶ್ರೇಷ್ಠವಾದುದು. ಆದರೆ ಬೆವರನ್ನು ನಿಕೃಷ್ಟವಾಗಿ ನೋಡುವ ಮನಸ್ಥಿತಿಯಿಂದ ನಮ್ಮ ಸಮಾಜ ಹೊರಗೆ ಬರಬೇಕಾಗಿದೆ ಎಂದರು.

ಅವರು ಇಂದು ಕುಂದಾಪುರ ತಾಲೂಕು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘದ ಸ್ವಂತ ಕಛೇರಿ "ಬೆವರು" ಉದ್ಘಾಟಿಸಿ ಮಾತನಾಡಿದರು.

ಬೆವರಿನ ಮಹತ್ವವನ್ನು ಅರಿತಿದ್ದ ಮಹಮ್ಮದ್ ಪೈಗಂಬರ್ ಕಾರ್ಮಿಕನ ಬೆವರು ಆರಿಹೋಗುವ ಮುನ್ನ ಅವರ ಕೂಲಿಯನ್ನು ನೀಡಬೇಕು ಎಂದು ಪ್ರತಿಪಾದಿಸಿದ್ದರು. ಸುಮಾರು 4 ಸಾವಿರ ಮಂದಿ ನಿರ್ಮಾಣ ಕಾರ್ಮಿಕರು ತಮ್ಮ ಬೆವರು ಹಾಗೂ ಶ್ರಮದಿಂದ ಕಟ್ಟಿರುವ ಈ ಕಾರ್ಮಿಕ ಕಛೇರಿಯು ಭವಿಷ್ಯದಲ್ಲಿ ಕಾರ್ಮಿಕರ ವರ್ಗದ ಅರಿವು ಹಾಗೂ ಜಾಗೃತಿ ಕೇಂದ್ರವಾಗಿ ರೂಪಗೊಳ್ಳಲಿ ಎಂದು ಅವರು ಹಾರೈಸಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಜಿಲ್ಲಾ ಕಾರ್ಮಿಕ ಅಧಿಕಾರಿ ಕುಮಾರ್ ಬಿ.ಆರ್. ಮಾತನಾಡಿ; ಸರ್ಕಾರದಿಂದ ಸಿಗುವ ವಿವಿಧ ಸೌಲಭ್ಯಗಳನ್ನು ಪಡೆಯಬೇಕು. ನಕಲಿ ಕಾರ್ಮಿಕರು ನೋಂದಣಿ ಆಗದಂತೆ ನೈಜ ಕಾರ್ಮಿಕರು ತಡೆಯಲು ಇಲಾಖೆ ಜೊತೆ ಸಹಕರಿಸಬೇಕು ಎಂದು ಹೇಳಿದರು.


ಸಭೆಯಲ್ಲಿ ಕಾರ್ಮಿಕ ನಿರೀಕ್ಷಕ ವಿಜೇಂದ್ರ ಮಾತನಾಡಿದರು. ಸಿಐಟಿಯು ಜಿಲ್ಲಾ ಅಧ್ಯಕ್ಷ ಕೆ. ಶಂಕರ್, ಕಟ್ಟಡ ಕಾರ್ಮಿಕರ ಫೆಡರೇಷನ್ ರಾಜ್ಯ ಅಧ್ಯಕ್ಷ ಬಾಲಕೃಷ್ಣ ಶೆಟ್ಟಿ, ಹಂಚು ಕಾರ್ಮಿಕರ ಸಂಘದ ಪ್ರಧಾನ ಕಾರ್ಯದರ್ಶಿ ಎಚ್. ನರಸಿಂಹ, ಉಡುಪಿ ಜಿಲ್ಲಾ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಸಂಘದ ಶೇಖರ ಬಂಗೇರ, ಬೈಂದೂರು ಕಟ್ಟಡ ಕಾರ್ಮಿಕರ ಸಂಘದ ಪ್ರಧಾನ ಕಾರ್ಯದರ್ಶಿ ರೊನಾಲ್ಡ್ ರಾಜೇಶ್ ಕ್ವಾಡ್ರಸ್, ಮಾತನಾಡಿದರು.

ವೇದಿಕೆಯಲ್ಲಿ ಸಂಘದ ಉಪಾಧ್ಯಕ್ಷ ಚಂದ್ರಶೇಖರ ವಿ. ಪದಾಧಿಕಾರಿಗಳಾದ ರೇಣುಕಾ, ಮಧುಶ್ರೀ ಮೊದಲಾದವರಿದ್ದರು.

ಸಂಘದ ಪ್ರಧಾನ ಕಾರ್ಯದರ್ಶಿ ಸಂತೋಷ್ ಹೆಮ್ಮಾಡಿ ಸ್ವಾಗತಿಸಿದರು. ಶಶಿಕಾಂತ್ ಅತಿಥಿಗಳನ್ನು ಗೌರವಿಸಿದರು. ಸಂಘದ ಅಧ್ಯಕ್ಷರಾದ ಸುರೇಶ್ ಕಲ್ಲಾಗರ ಪ್ರಸ್ತಾವಿಕ ಮಾತನಾಡಿದರು. ಗೌರವಾಧ್ಯಕ್ಷ ಚಿಕ್ಕ ಮೊಗವೀರ ಅಧ್ಯಕ್ಷತೆ ವಹಿಸಿದ್ದರು.









ಮಹಿಳಾ ದಿನಾಚರಣೆಯ ವಿಶೇಷ ಲೇಖನ

ಹೆಣ್ಣೆಂದರೆ ಬರೀ ತ್ಯಾಗ, ಹೆಣ್ಣೆಂದರೆ ಅರೆಹೊಟ್ಟೆ ಇತ್ಯಾದಿ ಎಂಬ ಬೂಸಲು ಕತೆಗಳು..

ಮಹಿಳಾ ದಿನಾಚರಣೆ' ಬರುವ ಮಾರ್ಚ್ 8 ರ ಹಿಂದೆ ಮುಂದೆ ಇಂತಹ ಮಾತುಗಳೂ ಜಾಸ್ತಿ ಆಗುತ್ತವೆಯಾದರೂ 'ಮಹಿಳೆ' ಎಂದ ಕೂಡಲೇ ಒಂದು ಬಗೆಯ 'ಸ್ಟಿರಿಯೋ ಟೈಪ್' ಚಿತ್ರವನ್ನು ನಮ್ಮ ಸಮಾಜದಲ್ಲಿ ವರ್ಷದ 365.1/4 ದಿನವೂ ಬಿಂಬಿಸುತ್ತಲೆ ಬರಲಾಗಿದೆ. ಇದರಲ್ಲಿ ಹೆಣ್ಣು ಒಂದು ತ್ಯಾಗ ಮೂರ್ತಿ. ಅಷ್ಟೆ. ಅದು ಬಿಟ್ಟು ಬೇರೆನೂ ಅಲ್ಲ. ಈ ಕುರಿತು ಬರೆದಿದ್ದಾರೆ, ಲೇಖಕಿ ಭಾರತಿ. ಬಿ.ವಿ.ಯವರು.




ಭಾರತಿ ಬಿ.ವಿ.
ಲೇಖಕಿ, ಬೆಂಗಳೂರು.

ಪ್ರತಿ ವರ್ಷ ಮಾರ್ಚ್ 8 'ಮಹಿಳಾ ದಿನಾಚರಣೆ' ಬಂದಾಗ ಬಹಳಷ್ಟು ಗಂಡಸರು ಮತ್ತು ಗಂಡು ಮಕ್ಕಳು ನಮಗೆ ಪ್ರೀತಿಯಿಂದ ವಿಷ್ ಮಾಡುತ್ತಾರೆ ಅನ್ನುವುದೇನೋ ಸತ್ಯ. ಆದರೆ ಅವರ ನಾಸ್ಟಾಲ್ಜಿಯಾ ಎನ್ನುವ ಬಾಲ್ಯದ 'ಸವಿ ನೆನಪು'ಗಳಲ್ಲಿ ಅರೆಹೊಟ್ಟೆ ಉಂಡು ಮಕ್ಕಳಿಗೆ ಉಣಿಸಿದ ತಾಯಿ ಇರುತ್ತಾಳೆ, ತಮ್ಮಂದಿರ ತಿ– ತೊಳೆದ ಅಕ್ಕ ಇರುತ್ತಾಳೆ, ಪ್ರೀತಿ ತೋರಿಸಿದ ಹೆಂಡತಿ ಇರುತ್ತಾಳೆ, ಪ್ರೀತಿಸಿದ ಮಗಳು ಇರುತ್ತಾಳೆ, ಆದರಿಸಿದ ಗೆಳತಿ ಇರುತ್ತಾಳೆ, ಕತೆ ಹೇಳಿದ ಅಜ್ಜಿ ಇರುತ್ತಾಳೆ ಅಷ್ಟೇ. ಮಹಿಳಾ ದಿನದಂದು ಮಹಿಳೆ ತನಗಾಗಿ ಏನಾದರೂ ಮಾಡಿಕೊಂಡಳಾ, ತನಗಾಗಿ ಯಾವುದಾದರೂ ಆಸಕ್ತಿ ಬೆಳೆಸಿಕೊಂಡಳಾ, ತನ್ನ ಇಚ್ಛೆಯಂತೆ ಅರೆ ಘಳಿಯಾದರೂ ಬದುಕಿದಳಾ ಅನ್ನುವ ಯಾವ ವಿಷಯವನ್ನೂ ಯೋಚಿಸದೆ ಹೆಣ್ಣು 'ತಮಗೇನು ಮಾಡಿದಳು' ಅನ್ನುವ ಎಂದಿನ ಗಂಡು ನೋಟವಿರುತ್ತದೆ ಅಷ್ಟೇ.

ಹೆಣ್ಣೆಂದರೆ ತ್ಯಾಗ, ಹೆಣ್ಣೆಂದರೆ ಅರೆಹೊಟ್ಟೆ, ಹೆಣ್ಣೆಂದರೆ ಜೀವನ ಸಂಸಾರಕ್ಕಾಗಿ ಮುಡುಪಿಟ್ಟವಳು ಎಂಬೆಲ್ಲ ಕತೆಗಳು ಕೇಳಲು ಹೃದಯ ತುಂಬಿ ಬರುವಂತೆ, ಮೆಲೋಡ್ರಾಮಾಟಿಕ್ ಆಗಿ ಇರುತ್ತದೆ ನಿಜ. ಸುಮಾರು ಹೆಣ್ಣು ಮಕ್ಕಳೂ ಇದನ್ನು ಕೇಳಿ ಆನಂದ ಭಾಷ್ಪ ಸುರಿಸಿ ತ್ಯಾಗದ ಕಂಬಳಿ ಹೊದ್ದು ಬೆಚ್ಚಗಾಗುತ್ತಾರೆ ಅನ್ನುವುದೂ ನಿಜ. ಆದರೆ ಆ ಸಮಯಕ್ಕೆ ಇಷ್ಟೆಲ್ಲ ಮಾಡಿದ ಅವಳಿಗೆ, ಮುಂದೆ ಬದುಕು ಸ್ವಲ್ಪ ಹಸನಾದಾಗ ನೀವು 'ನಿಮಗೇನಾದರೂ ಬದುಕಿನ ಕನಸುಗಳಿವೆಯಾ' ಎಂದು ಕೇಳಿದ್ದೀರಾ..? ಕೇಳಿಲ್ಲದಿದ್ದರೆ ಈಗಲಾದರೂ ಕೇಳಿ. ಯಾರಿಗೋ ಚಿತ್ರಕಲೆ ಕಲಿಯುವ ಮನಸ್ಸಿರಬಹುದು, ಮತ್ಯಾರಿಗೋ ಒಬ್ಬಳೇ ಎಲ್ಲಿಯಾದರೂ ನಾಲ್ಕು ದಿನ ಹೋಗುವ ಕನಸಿರಬಹುದು, ವೀಣೆ, ನೃತ್ಯ, ಹಾಡು, ಬರಹ, ನಟನೆ...ಡ್ರೈವಿಂಗ್, ಈಜು, ವ್ಯಾಪಾರ ಹೀಗೆ ಯಾವುದೋ ಕೈಗೂಡದ ಆಸೆಯನ್ನು ಮತ್ತೆ ತಮ್ಮದಾಗಿಸಿಕೊಳ್ಳುವ ಹುಮ್ಮಸ್ಸಿರಬಹುದು.

ಹೊರಡು, ಅದನ್ನು ಪೂರೈಸಿಕೋ
ಈ ಮನೆ ಎಲ್ಲೂ ಓಡಿ ಹೋಗುವುದಿಲ್ಲ,
ನಾನು ಇಲ್ಲಿ ಸಂಭಾಳಿಸುತ್ತೇನೆ ಯೋಚಿಸಬೇಡ.
ನೀನು ಅಕ್ಕ, ಅಮ್ಮ, ತಂಗಿ ಅಷ್ಟೇ ಅಲ್ಲ... ನೀನೊಬ್ಬಳು 'ವ್ಯಕ್ತಿಯೂ' ಹೌದು ಎಂದು ಹೇಳಿದರೆ ಹೇಗಿರಬಹುದು ಆಕೆಯ ಪ್ರತಿಕ್ರಿಯೆ?

ವಿಜಯಕ್ಕ ಅಜ್ಜಮನೆ ನಿರ್ದೇಶಿಸಿದ 'ಒಂದು ಮುಷ್ಟಿ ಆಕಾಶ' ಕಿರುಚಿತ್ರವನ್ನು ಸಾಧ್ಯವಾದರೊಮ್ಮೆ ನೋಡಿ. ಮಗನೆಂಬ ಕೇಂದ್ರ ಬಿಂದುವಿನ ಸುತ್ತಲೇ ಸುತ್ತಿದ ತಾಯಿಯೊಬ್ಬಳಿಗೆ, ಮಗ ವಿದೇಶಕ್ಕೆ ಹೋದ ನಂತರ ಉಂಟಾಗುವ ಆ ಶೂನ್ಯದ ಕತೆಯಿದೆ ಅಲ್ಲಿ. ಗೆಳತಿಯರು ಎಲ್ಲಿಗೇ ಕರೆದರೂ ಹೋಗದ ಮಗನಿಗಾಗೇ ಬದುಕಿದ ಆ ಅಮ್ಮ ಮಗ ಒಂದು ಕರೆ ಸ್ವೀಕರಿಸದೇ ಹೋದರೂ ತಲ್ಲಣಿಸಿ ಬಿಡುತ್ತಾಳೆ. ಅವಳಿಗೆ ಮಗನನ್ನು ಬಿಟ್ಟು ಬೇರೆ ಬದುಕೇ ಇಲ್ಲ. ಆದರೆ ಮಗನಿಗೆ ಬೇರೆ ಬದುಕಿದೆ. ಇಂಥ ಸ್ಥಿತಿಯಲ್ಲಿ ಹತಾಶಳಾದ ಅವಳು ಆತ್ಮಹತ್ಯೆಯ ತಯಾರಿಯನ್ನೂ ನಡೆಸುತ್ತಾಳೆ. ಪುಣ್ಯಕ್ಕೆ ಅಷ್ಟರಲ್ಲಿ ಕರೆ ಮಾಡುವ ಗೆಳತಿ ಅವಳಿಗೆ ಸಾಂತ್ವನ ಹೇಳುತ್ತಾ 'ಮಗನನ್ನೇ ಇಡೀ ಆಕಾಶ ಎಂಬಂತೆ ಬದುಕಿದವಳಿಗೆ, ಒಂದು ಮುಷ್ಟಿಯಷ್ಟಾದರೂ ಆಕಾಶ ತನ್ನದೂ ಆಗಿಸಿಕೊಳ್ಳಬೇಕು ಅಂತ ಯಾಕೆ ಅನ್ನಿಸಲಿಲ್ಲ.' ಎಂದೆಲ್ಲ ಹೇಳುವಾಗ ಮೊದಲ ಬಾರಿಗೆ ಅವಳು ಆ ದಿಕ್ಕಿನಲ್ಲಿ ಯೋಚಿಸಲು ಶುರು ಮಾಡುತ್ತಾಳೆ. ಸುತ್ತಮುತ್ತಲಿನವರಿಗೆ ಪ್ರೀತಿ ಕೊಡಬೇಕು ನಿಜ. ಆದರೆ ನಮ್ಮನ್ನು ಕೂಡಾ ನಾವು ಪ್ರೀತಿಸಿಕೊಳ್ಳಬೇಕಲ್ಲವೇ?




ಇಲ್ಲ.... ಅವಳು ಕೆಲಸ ಮಾಡುತ್ತಿಲ್ಲ, ಅವಳು ಗೃಹಿಣಿ ಅಷ್ಟೇ...

ನಾನು ಪ್ರವಾಸಗಳಿಗೆ ಆಗೀಗ ಹೋಗಿ ಬರುತ್ತೇನೆ ಅಂತ ಬರೆದಾಗ ಒಬ್ಬಾಕೆ 'ನಾವು ಜವಾಬ್ದಾರಿ ನಿರ್ವಹಿಸುವುದರಲ್ಲೇ ಸುಖ ಕಾಣುತ್ತೇವೆ. ನಿಮ್ಮ ಹಾಗಲ್ಲ' ಎಂದಿದ್ದರು. ಆ ಮಾತಿನಲ್ಲಿ ಅವರು ನನಗಿಂತ ಎತ್ತರದ ಸ್ಥಾನ ಆಕ್ರಮಿಸಿಕೊಂಡ ಪೊಳ್ಳು ಹೆಮ್ಮೆಯೂ, ಇಲ್ಲಸಲ್ಲದ್ದನ್ನು ಹೇಳುವ ಗಂಡುಬೀರಿಯಾದ ನನ್ನೆಡೆಗೆ ತಾತ್ಸಾರವೂ ಇತ್ತು.

ಹೀಗೆ... ಪ್ರತಿಯೊಂದು ಹೊಸತು ಏನಾದರೂ ಎದುರಾಗುವಾಗ ಸಮಾಜ ವಿಚಿತ್ರವಾಗಿ ಪ್ರತಿಕ್ರಿಯಿಸುತ್ತದೆ. ಹೆಂಗಸರೇ ಹೀಗೆ ಹೇಳುವಾಗ, ಇಂಥದ್ದಕ್ಕೆ ಒಗ್ಗಿಹೋದ ಗಂಡು ಕುಲಕ್ಕೆ ಆ ರೀತಿ ತ್ಯಾಗಮಯಿಯಾಗುವ ಹೆಣ್ಣು ಆದರ್ಶವೆನ್ನಿಸುತ್ತಾಳೆ ಮತ್ತು ನನ್ನಂತೆ ಮಾತನಾಡುವವಳು ಕಟುಕಿಯಂತೆ ಕಾಣಲಾರಂಭಿಸುತ್ತೇನೆ.

ನನ್ನ ಅಜ್ಜಿ ಅದೇ ಸಾಲಿನಲ್ಲಿದ್ದ ಗೆಳತಿಯ ಮನೆಗೂ ಹೋಗುತ್ತಿರಲಿಲ್ಲ. ಯಾಕೆಂದರೆ ಅದು ನನ್ನ ಅಜ್ಜನಿಗೆ ಇಷ್ಟವಿರಲಿಲ್ಲ. ಅಜ್ಜಿ ಎಂದೂ ಅಜ್ಜನ ಮಾತು ಮೀರಿ ನಡೆಯಲಿಲ್ಲ. ಆದರೆ ನಾವೂ ಅದನ್ನು ತುಂಬ ಸರಳವಾಗಿ 'ಅದಿರುವುದೇ ಹಾಗೆ' ಎಂಬಂತೆ ಉಳಿದುಬಿಟ್ಟೆವಲ್ಲ, ಆ ವಿಷಯಕ್ಕೆ ನನಗೀಗಲೂ ದುಃಖವಿದೆ.

ಹೀಗೆಲ್ಲ ಆಲೋಚನೆಗಳು ಬರುವುದರಿಂದಲೇ ಮಹಿಳಾ ದಿನದಂದು ಹರಿದು ಬರುವ ಈ ಅಕ್ಕ, ಅಮ್ಮ, ತಂಗಿ, ಮಗಳು ಅನ್ನುವ ಶುಭಾಶಯಗಳಿಗೆ ನಾನು ಯಾವ ಪ್ರತಿಕ್ರಿಯೆ ತೋರಿಸದೇ ಉಳಿದುಬಿಡುತ್ತೇನೆ. ಅದರಿಂದ ಹಲವರು ನೊಂದಿದ್ದಾರೆ. ಆದರೇನು ಮಾಡಲಿ ನನಗೇಕೋ ಥ್ಯಾಂಕ್ಸ್ ಅನ್ನಲು ಬಾಯೇ ಬರುವುದಿಲ್ಲ. ಮಹಿಳಾ ದಿನಾಚರಣೆಯಂದು ಅದದದದದೇ ಅಮ್ಮ, ತಂಗಿ, ಮಾತೆ, ದೇವತೆ ಅಂತ ಬೋರ್ ಹೊಡೆಸದೇ, 'ಮಹಿಳೆಗೆ' ವಿಷ್ ಮಾಡಿ. ಆ ಶುಭಾಶಯವನ್ನು ನಿಮ್ಮ ಮನೆಯಲ್ಲಿರುವ ಹೆಣ್ಣು ಮಕ್ಕಳಿಗೂ ಮಾಡಿ ಅವರಿಗೇನು ಬೇಕು ಅಂತ ಒಮ್ಮೆಯಾದರೂ ಕೇಳಬೇಕು ಎಂದು ನಾನಂತೂ ಬಯಸುತ್ತೇನೆ.



ತಿಳಿದಂತೆ ಮಾಡು...

ಎಷ್ಟು ತಗ್ಗಬೇಕು ಎಷ್ಟು ಬಗ್ಗಬೇಕು
ಅವರೇ ಹೇಳುತ್ತಾರೆ. ..

ಎಷ್ಟು ಕುಗ್ಗಬೇಕು ಎಷ್ಟು ಹಿಗ್ಗಬೇಕು
ಅವರೇ ಹೇಳುತ್ತಾರೇ...

ಏನು ನೋಡಬೇಕು ಏನು ನುಡಿಯಬೇಕು
ಅವರೇ ಹೇಳುತ್ತಾರೆ....

ಏನು ಉಣ್ಣಬೇಕು ಏನು ತೊಡಬೇಕು?
ಅವರೇ ಹೇಳುತ್ತಾರೆ....

ಯಾರ ಕೂಡಬೇಕು ಎಷ್ಟು ಹಡೆಯಬೇಕು
ಅವರೇ ಹೇಳುತ್ತಾರೆ...

ಹೇಗೆ ಬೊಗಳಬೇಕು ಯಾರ ಸಿಗಿಯಬೇಕು
ಅವರೇ ಹೇಳುತ್ತಾರೆ...

ಏನ ಪೂಜಿಸಬೇಕು ಏನ ಭಂಜಿಸಬೇಕು?
ಅವರೇ ಹೇಳುತ್ತಾರೆ....

ಏನ ಖಂಡಿಸಬೇಕು?
ಯಾರ ದಂಡಿಸಬೇಕು?
ಅವರೇ ಹೇಳುತ್ತಾರೆ

ನೀನೊಂದು ಗೊಂಬೆ....
ಒಪ್ಪಿದರೆ ದೇವತೆ ಸಿಡಿದರೆ ರಕ್ಕಸಿ!
ಪಾಲಿಸಿದರೆ ಪಾಲು
ಸೋಲಿಸಿದರೆ ಕೋಲು!

ತಂಗಿ...
ತಿಳಿದಂತೆ ಮಾಡು....
ಹೊಳೆದಂತೆ ಹಾಡು....
ನಡೆದಂತೆ ಜಾಡು ...
ಇರದಿರಲಿ ಸೇಡು–ಕೇಡು !

–ಸವಿತಾ ನಾಗಭೂಷಣ
ಕವಯಿತ್ರಿ, ಶಿವಮೊಗ್ಗ.



ಚುನಾವಣಾ ಸಮಯದ ಕುತಂತ್ರಗಳು

ಪ್ರಕಾಶ್ ಕಾರತ್

ಲೋಕಸಭೆ ಚುನಾವಣೆಯ ಹೊಸ್ತಿಲಲ್ಲಿ ಕಳೆದ ವಾರ ಮೂರು ಪ್ರಮುಖ ಬೆಳವಣಿಗೆಗಳು ನಡೆದಿವೆ. ಅವುಗಳಲ್ಲಿ ಒಂದು ಧನಾತ್ಮಕವಾದುದು, ಇನ್ನೆರಡು ಬೆಳವಣಿಗೆ ಋಣಾತ್ಮಕವಾದುದು.

ಚುನಾವಣಾ ಬಾಂಡ್‌ಗಳ ವಿವರವನ್ನು ಮಾರ್ಚ್ 12ರೊಳಗೆ ಚುನಾವಣಾ ಆಯೋಗಕ್ಕೆ ಸಲ್ಲಿಸುವಂತೆ ಭಾರತೀಯ ಸ್ಟೇಟ್ ಬ್ಯಾಂಕ್‌ಗೆ (ಎಸ್‌ಬಿಐ) ಹಾಗೂ ಆ ವಿವರಗಳನ್ನು ಮಾರ್ಚ್ 15ರೊಳಗೆ ತನ್ನ ವೆಬ್‌ಸೈಟ್‌ನಲ್ಲಿ ಬಹಿರಂಗಪಡಿಸುವಂತೆ ಆಯೋಗಕ್ಕೆ ಸುಪ್ರೀಂ ಕೋರ್ಟ್ ನಿರ್ದೇಶಿಸಿದ್ದು ಮೊದಲ ವಿಚಾರವಾಗಿದೆ. ಬಾಂಡ್ ವಿವರ ಸಲ್ಲಿಕೆಯ ಗಡುವನ್ನು ನಾಲ್ಕು ತಿಂಗಳು, ಅಂದರೆ ಜೂನ್ 30ರ ವರೆಗೆ ವಿಸ್ತರಿಸಬೇಕೆಂಬ ಎಸ್‌ಬಿಐ ಮನವಿ ಹಿನ್ನೆಲೆಯಲ್ಲಿ ಕೋರ್ಟ್ ಈ ಆದೇಶ ಹೊರಡಿಸಿದೆ. ಎಸ್‌ಬಿಐ ಮನವಿಯನ್ನು ಸರ್ವೋನ್ನತ ನ್ಯಾಯಾಲಯ ದೃಢವಾಗಿ ತಿರಸ್ಕರಿಸಿದೆ. ಇದರ ಪರಿಣಾಮವಾಗಿ, ಬಿಜೆಪಿಗೆ ಯಾರು ಎಷ್ಟು ದೇಣಿಗೆ ನೀಡಿದ್ದಾರೆ ಮತ್ತು ಯಾವ ಸಂದರ್ಭದಲ್ಲಿ ಅದನ್ನು ಕೊಟ್ಟಿದ್ದಾರೆ ಎನ್ನುವುದನ್ನು ತಿಳಿಯಲು ಜನರಿಗೆ ಸಾಧ್ಯವಾಗಲಿದೆ.

ದೇಣಿಗೆಗೆ ಪ್ರತಿಫಲವಾಗಿ ದಾನಿಗಳಿಗೆ ಯಾವುದಾದರೂ ಅನುಕೂಲ ಮಾಡಿಕೊಡಲಾಗಿದೆಯೇ ಅಥವಾ ದೇಣಿಗೆ ಕೊಟ್ಟ ಕಂಪನಿಗಳಲ್ಲಿ ಯಾವುದಾದರೂ ಕಂಪನಿಯು ಐಟಿ, ಇ.ಡಿ. ಅಥವಾ ಸಿಬಿಐ ಮುಂತಾದ ಕೇಂದ್ರೀಯ ತನಿಖಾ ಸಂಸ್ಥೆಗಳಿಂದ ಕ್ರಮವನ್ನು ಎದುರಿಸುತ್ತಿತ್ತೇ ಎನ್ನುವುದನ್ನು ತಿಳಿಯಲು ಈ ವಿವರಗಳ ವಿಶ್ಲೇಷಣೆ ನೆರವಾಗಲಿದೆ. ಚುನಾವಣೆಗಳ ಸಂದರ್ಭದಲ್ಲಿ, ದೇಶದ ಆಳುವ ಪಕ್ಷದ ಮತ್ತು ಹಿಂದೂತ್ವ–ಕಾರ್ಪೊರೇಟ್‌ನ ಭ್ರಷ್ಟ ಮೈತ್ರಿಯನ್ನು ತಿಳಿದುಕೊಳ್ಳಲು ಜನರಿಗೆ ಇದರಿಂದ ಸಾಧ್ಯವಾಗಲಿದೆ.

ಸಿಎಎ ಅಧಿಸೂಚನೆ

ಪೌರತ್ವ ತಿದ್ದುಪಡಿ ಕಾನೂನು (ಸಿಎಎ) ಅನ್ವಯ ನಿಯಮಗಳ ಅಧಿಸೂಚನೆ ಹೊರಡಿಸಿದ ನರೇಂದ್ರ ಮೋದಿ ಸರ್ಕಾರದ ಪ್ರತಿಗಾಮಿ ಹೆಜ್ಜೆ ಎರಡನೇ ಬೆಳವಣಿಗೆಯಾಗಿದೆ. 2019ರ ಡಿಸೆಂಬರ್‌ನಲ್ಲಿ ಕಾನೂನನ್ನು ಅಂಗೀಕರಿಸಿದ ನಾಲ್ಕು ವರ್ಷಕ್ಕೂ ಹೆಚ್ಚು ಸಮಯದ ನಂತರ ಲೋಕಸಭೆ ಚುನಾವಣೆಗಳ ದಿನಾಂಕ ಪ್ರಕಟಣೆಯ ಕೆಲವೇ ದಿನಗಳ ಮುನ್ನ ಈಗ ಅಧಿಸೂಚನೆಯನ್ನು ಪ್ರಕಟಿಸಲಾಗಿದೆ.

ನಿರ್ದಿಷ್ಟ ಧಾರ್ಮಿಕ ಅಸ್ಮಿತೆಯ ಜನರು ಮಾತ್ರವೇ ತ್ವರಿತವಾಗಿ ಭಾರತದ ಪೌರತ್ವ ಗಳಿಸಬಹುದು ಎನ್ನುವುದನ್ನು ಸಿಎಎ ಆಧಾರದ ಈ ನಿಯಮಗಳು ದೃಢಪಡಿಸುತ್ತವೆ. ಮುಸ್ಲಿಮರನ್ನು ಹೊರಗಿಡಲಾಗಿದೆ. ಸಿಎಎಗೆ ಇರುವಂಥ ಎಲ್ಲಾ ಪ್ರಮುಖ ಸಾಂವಿಧಾನಿಕ ಮತ್ತು ಕಾನೂನಾತ್ಮಕ ಆಕ್ಷೇಪಗಳನ್ನು ಚರ್ಚಿಸುವ ಅಗತ್ಯವಿಲ್ಲ ಎನಿಸುತ್ತದೆ. ಹೀಗಾಗಿ, ಈ ಕಾನೂನನ್ನು ಕಾರ್ಯಗತಗೊಳಿಸುವಂಥ ಈ ನಿಯಮಗಳನ್ನು ಉಗ್ರವಾಗಿ ವಿರೋಧಿಸಬೇಕಾಗಿದೆ.

ನಿಯಮ ನಿಗದಿಪಡಿಸಿರುವ 2014ರ ಡಿಸೆಂಬರ್ 31ರ ಕಟ್–ಆಫ್ ದಿನಾಂಕವು ಅಸ್ಸಾಂ ಒಪ್ಪಂದದ ನಿಯಮವನ್ನು ಉಲ್ಲಂಘಿಸುತ್ತದೆ. ಅಸ್ಸಾಂ ಒಡಂಬಡಿಕೆ ಪ್ರಕಾರ 1971 ಕಟ್–ಆಫ್ ದಿನಾಂಕವಾಗಿದೆ. ಈ ಕಾರಣದಿಂದಲೇ ಸಿಎಎ ಅಂಗೀಕಾರಾವಾದಾಗ ಅಸ್ಸಾಮ್‌ನಲ್ಲಿ ವ್ಯಾಪಕ ಪ್ರತಿರೋಧ ವ್ಯಕ್ತವಾಗಿತ್ತು.

ರಾಜ್ಯಗಳಿಗೆ ಹಕ್ಕಿಲ್ಲ

ಪೌರತ್ವಕ್ಕೆ ಸಲ್ಲಿಸುವ ಅರ್ಜಿಗಳನ್ನು ಸಂಸ್ಕರಿಸುವಲ್ಲಿ ರಾಜ್ಯ ಸರಕಾರಗಳಿಗೆ ಯಾವುದೇ ಹಕ್ಕಿಲ್ಲ ಎಂದು ಕೂಡ ನಿಯಮ ಹೇಳುತ್ತದೆ. ಅರ್ಜಿಗಳ ಸಂಸ್ಕರಣೆಗೆ ರಚಿಸಲಾದ ರಾಜ್ಯ ಮಟ್ಟದ ಉನ್ನತಾಧಿಕಾರದ ಸಮಿತಿ ಮತ್ತು ಜಿಲ್ಲಾ ಮಟ್ಟದ ಸಮಿತಿಗಳು ಕೇಂದ್ರ ಸರಕಾರದ ಇಲಾಖೆಗಳ ಪ್ರತಿನಿಧಿಗಳಿಂದಲೇ ತುಂಬಿ ಹೋಗಿದೆ. ರಾಜ್ಯ ಮತ್ತು ಜಿಲ್ಲಾ ಸಮಿತಿಯಲ್ಲಿ ರಾಜ್ಯ ಸರಕಾರದ ಕೇವಲ ಒಬ್ಬ ಪ್ರತಿನಿಧಿ ಇರುತ್ತಾರೆ. ತಮ್ಮ ರಾಜ್ಯಗಳಲ್ಲಿ ನೆಲೆಸಿರುವ, ಪೌರತ್ವಕ್ಕೆ ಅರ್ಹವಾದ ಜನರನ್ನು ಗುರುತಿಸುವ ಪ್ರಕ್ರಿಯೆಯಲ್ಲಿ ರಾಜ್ಯ ಸರಕಾರಗಳನ್ನು ಹೊರಗಿಡುವುದೇ ಇದರ ಉದ್ದೇಶವೆನ್ನುವುದು ಸ್ಪಷ್ಟವಾಗುತ್ತದೆ. ಪೌರತ್ವಕ್ಕೆ ಅರ್ಹರನ್ನು ಗುರುತಿಸಲು ಅಂಚೆ ಇಲಾಖೆ ಮತ್ತು ರೈಲ್ವೆ ಇಲಾಖೆ ಅಧಿಕಾರಿಗಳು ಸೂಕ್ತ ಎಂದು ಮೋದಿ ಸರಕಾರ ಭಾವಿಸಿರುವುದು ಒಂದು ವಿಚಿತ್ರ ತರ್ಕವಾಗಿದೆ.

ಸುಪ್ರೀಂ ಕೋರ್ಟ್ ವಿಫಲ

ಸಿಎಎ ಅಸಾಂವಿಧಾನಿಕ ಎಂದು ಅದನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಸುಮಾರು 200 ಅರ್ಜಿಗಳನ್ನು ವಿಚಾರಣೆಗೆ ಎತ್ತಿಕೊಂಡು ನಿರ್ಧರಿಸುವಲ್ಲಿ ಸುಪ್ರೀಂ ಕೋರ್ಟ್ ವಿಫಲವಾಗಿದೆ. ಚುನಾವಣಾ ಬಾಂಡ್ ಮತ್ತು 370ನೇ ವಿಧಿ ರದ್ದತಿ ವಿಚಾರದಲ್ಲಿನ ಸುಪ್ರೀಂ ಕೋರ್ಟ್‌ನ ವಿಳಂಬ ಹಾಗೂ ವೈಫಲ್ಯದಂತೆಯೇ ಸಿಎಎ ಪ್ರಕರಣದಲ್ಲಿ ತೀರ್ಪು ನೀಡಲು ವಿಫಲವಾಗಿರುವುದು ಮೋದಿ ಸರಕಾರವು ಅಸಾಂವಿಧಾನಿಕ ಹಾಗೂ ಅಪ್ರಜಾಸತ್ತಾತ್ಮಕ ರೀತಿಯಲ್ಲಿ ಮುಂದುವರಿಯಲು ನೆರವಾಗಿದೆ.

ದೇಣಿಗೆಗೆ ಪ್ರತಿಫಲವಾಗಿ ದಾನಿಗಳಿಗೆ ಯಾವುದಾದರೂ ಅನುಕೂಲ ಮಾಡಿಕೊಡಲಾಗಿದೆಯೇ ಅಥವಾ ದೇಣಿಗೆ ಕೊಟ್ಟ ಕಂಪನಿಗಳಲ್ಲಿ ಯಾವುದಾದರೂ ಕಂಪನಿಯು ಐಟಿ, ಇ.ಡಿ. ಅಥವಾ ಸಿಬಿಐ ಮುಂತಾದ ಕೇಂದ್ರೀಯ ತನಿಖಾ ಸಂಸ್ಥೆಗಳಿಂದ ಕ್ರಮವನ್ನು ಎದುರಿಸುತ್ತಿತ್ತೇ ಎನ್ನುವುದನ್ನು ತಿಳಿಯಲು ಈ ವಿವರಗಳ ವಿಶ್ಲೇಷಣೆ ನೆರವಾಗಲಿದೆ.

ಮೂರನೇ ಬೆಳವಣಿಗೆ, ಮುಂಬರುವ ಲೋಕಸಭೆ ಚುನಾವಣೆ ನಡೆಸುವ ಮೇಲೆ ನೇರ ಪರಿಣಾಮ ಬೀರುವಂಥ ವಿದ್ಯಮಾನ. ಅದು ಭಾರತ ಚುನಾವಣೆ ಆಯೋಗಕ್ಕೆ (ಇಸಿಐ) ಸಂಬಂಧಿಸಿದ್ದಾಗಿದೆ.

ಚುನಾವಣಾ ಆಯುಕ್ತರಲ್ಲಿ ಒಬ್ಬರಾಗಿದ್ದ ಅರುಣ್ ಗೋಯಲ್ ಕಳೆದ ವಾರ ಹಠಾತ್ತನೆ ರಾಜಿನಾಮೆ ನೀಡಿದರು. ಇವರ ರಾಜಿನಾಮೆಯಿಂದಾಗಿ ಆಯೋಗದಲ್ಲಿ ಮುಖ್ಯ ಚುನಾವಣಾ ಕಮಿಷನರ್ (ಸಿಇಸಿ) ರಾಜೀವ್ ಕುಮಾರ್ ಮಾತ್ರವೇ ಉಳಿದಂತಾಯಿತು.

ವಾಸ್ತವವಾಗಿ, ಅರುಣ್ ಗೋಯಲ್‌ರನ್ನು 2022ರ ನವೆಂಬರ್‌ನಲ್ಲಿ ತರಾತುರಿಯಲ್ಲಿ ಚುನಾವಣಾ ಕಮಿಷನರ್ ಆಗಿ ನೇಮಕ ಮಾಡಿದ್ದೇ ವಿವಾದಾತ್ಮಕವಾಗಿತ್ತು. ಸುಪ್ರೀಂ ಕೋರ್ಟ್‌ನ ಸಾಂವಿಧಾನಿಕ ಪೀಠವೇ ಈ ನೇಮಕದ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿತ್ತು. ಆ ಸಾಂವಿಧಾನಿಕ ಪೀಠ, ಒಂದು ತಟಸ್ಥ ಸ್ವತಂತ್ರ ಸಂಸ್ಥೆಯಿಂದ ಚುನಾವಣಾ ಕಮಿಷನರ್‌ಗಳ ನೇಮಕವಾಗಬೇಕೆಂಬ ವಿಚಾರದಲ್ಲಿ ನಿಯಮಾವಳಿಗಳನ್ನು ರೂಪಿಸಬೇಕೆಂಬ ಅರ್ಜಿಯ ವಿಚಾರಣೆಯನ್ನು ನಡೆಸುತ್ತಿತ್ತು.

ಗೋಯಲ್‌ರ ರಾಜೀನಾಮೆಯ ನಿಜವಾದ ಕಾರಣವೇನೆಂದು ಗೊತ್ತಿಲ್ಲ. ಆದರೆ, ಇದರಿಂದ ಆಯೋಗದಲ್ಲಿ ಎರಡು ಹುದ್ದೆಗಳು ಖಾಲಿಯಾಗಿವೆ. (ಈ ಲೇಖನ ಸಿದ್ಧವಾಗುವ ಹೊತ್ತಿಗೆ, ಇಬ್ಬರು ಹೊಸ ಕಮಿಷನರ್‌ಗಳನ್ನು ನೇಮಕ ಮಾಡಲಾಗಿದ್ದು ಮೂರೂ ಸ್ಥಾನಗಳು ಭರ್ತಿಯಾಗಿವೆ). ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ), ಪ್ರಧಾನ ಮಂತ್ರಿ ಹಾಗೂ ಪ್ರತಿಪಕ್ಷ ನಾಯಕರನ್ನು ಒಳಗೊಂಡ ಸಮಿತಿಯೊಂದರ ಶಿಫಾರಸಿನ ಆಧಾರದಲ್ಲಿ ಸಿಇಸಿ ಮತ್ತು ಇಸಿಗಳ ನೇಮಕ ಆಗಬೇಕೆಂದು ಸಾಂವಿಧಾನಿಕ ಪೀಠ ಕಳೆದ ವರ್ಷ ಮಾರ್ಚ್‌ನಲ್ಲಿ ಹೇಳಿತ್ತು. ಕಾರ್ಯಾಂಗದ ಯಾವುದೇ ಒತ್ತಡ ಮತ್ತು ಮಧ್ಯ ಪ್ರವೇಶದಿಂದ ದೂರವುಳಿಯುವ ಮೂಲಕ ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆ ನಡೆಸಲು ಇದು ಅಗತ್ಯ ಎಂದು ಕೋರ್ಟ್ ಅಭಿಪ್ರಾಯಪಟ್ಟಿತ್ತು. ಏನಿದ್ದರೂ ಸುಪ್ರೀಂ ಕೋರ್ಟ್‌ನ ಈ ತೀರ್ಪಿನ ನಂತರ, ಸಿಇಸಿ ಮತ್ತು ಇತರ ಕಮಿಷನರ್‌ಗಳ ನೇಮಕ ಮತ್ತು ಸೇವಾ ಪರಿಸ್ಥಿತಿ ಕುರಿತಂತೆ ಮೋದಿ ಸರಕಾರ ಸಂಸತ್ತಿನಲ್ಲಿ ಒಂದು ಕಾನೂನನ್ನು ರೂಪಿಸಿತು. ಈ ಕಾನೂನು, ಆಯ್ಕೆ ಸಮಿತಿಯಿಂದ ಸಿಜೆಐ ಅವರನ್ನು ಹೊರಗಿಟ್ಟಿತು. ಅದರ ಬದಲು, ಪ್ರಧಾನಿ ನೇಮಿಸುವ ಕೇಂದ್ರದ ಸಂಪುಟ ದರ್ಜೆಯ ಸಚಿವರೊಬ್ಬರಿಗೆ ಅವಕಾಶ ಕಲ್ಪಿಸಿತು. ಈ ರೀತಿಯಾಗಿ, ಮೂರು ಸದಸ್ಯರ ಸಮಿತಿಯಲ್ಲಿ ಕಾರ್ಯಾಂಗವೇ ಬಹುಮತ ಹೊಂದಲು ಅವಕಾಶವಾಗಿ ಸುಪ್ರೀಂ ಕೋರ್ಟ್‌ನ ಶಿಫಾರಸಿನ ಉದ್ದೇಶವೇ ವಿಫಲಗೊಂಡಂತಾಯಿತು.

ಇಬ್ಬರು ಚುನಾವಣಾ ಆಯುಕ್ತರನ್ನು ಆಯ್ಕೆಗೆ ಮೂರು ಸದ್ಯರ ಸಮಿತಿ ಮಾರ್ಚ್ 14ರಂದು ಸಭೆ ನಡೆಸಿತು. ನಿರೀಕ್ಷಿಸಿದಂತೆ, ಸರಕಾರ ಸೂಚಿಸಿದ ಸುಖಬೀರ್ ಸಿಂಗ್ ಸಂಧು ಮತ್ತು ಜ್ಞಾನೇಶ್ ಕುಮಾರ್‌ರನ್ನು ಹೊಸ ಆಯುಕ್ತರಾಗಿ ಆಯ್ಕೆ ಮಾಡಲಾಯಿತು. ಇವರು ಸಿಇಸಿ ಜೊತೆ ಸೇರಿ ಸದ್ಯವೇ ಘೋಷಣೆಯಾಗಲಿರುವ ಚುನಾವಣೆಯನ್ನು ನಡೆಸಲಿದ್ದಾರೆ.

ಸಾಂವಿಧಾನಿಕ ಸಂಸ್ಥೆಗಳ ಸ್ವಾತಂತ್ರ್ಯ ವ್ಯವಸ್ಥಿತವಾಗಿ ನಾಶವಾಗುತ್ತಿರುವ ಹಿನ್ನೆಲೆಯಲ್ಲಿ ಒಂದು ಸ್ವತಂತ್ರ ಸಂಸ್ಥೆಯಾಗಿ ಚುನಾವಣಾ ಆಯೋಗದ ಬುಡಮೇಲು ಕೃತ್ಯವು ಸಂಸದೀಯ ಪ್ರಜಾಪ್ರಭುತ್ವಕ್ಕೇ ಒಂದು ಗಂಭೀರ ಅಪಾಯವಾಗಿದೆ.

ಅನು: ವಿಶ್ವ



ಚುನಾವಣಾ ಬಾಂಡ್ ಮೂಲಕ ಉದ್ಯಮಿಗಳಿಂದ ರಾಜಕೀಯ ಪಕ್ಷಗಳು ಪಡೆದ ಹಣದ ಕಳ್ಳ ವ್ಯವಹಾರ ಈಗ ಬಯಲುಗೊಂಡಿದೆ. ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್, Common Cause ಹಾಗೂ –ಕಮ್ಯೂನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾರ್ಕ್ಸ್‌ವಾದಿ) (ಸಿಪಿಐ(ಎಂ))–ಇವರ ಆರು ವರ್ಷಗಳ ಸುದೀರ್ಘ ಕಾನೂನು ಹೋರಾಟದ ನಂತರ, ಚುನಾವಣಾ ಬಾಂಡ್‌ಗಳ ಮಾಹಿತಿಯು ಅಂತಿಮವಾಗಿ ಸಾರ್ವಜನಿಕ ಡೊಮೇನ್‌ನಲ್ಲಿ ಹೊರಬಂದಿದೆ. ಇದರ ಜೊತೆಗೆ ಬಿಜೆಪಿ ಮತ್ತು ಉದ್ಯಮಿಗಳ ನಡುವಿನ ಅಪವಿತ್ರ ಹೊಂದಾಣಿಕೆ ಬಯಲುಗೊಂಡಿದೆ.

ಬಿಜೆಪಿ ಹಾಗೂ ಉದ್ಯಮಿಗಳ ನಡುವಿನ ಅಪವಿತ್ರ ಹೊಂದಾಣಿಕೆ

ಬಯಲುಗೊಳಿಸಿದ ಚುನಾವಣಾ ಬಾಂಡ್

ಸಿ. ಸಿದ್ದಯ್ಯ

ಫೆಬ್ರುವರಿ 15 ರಂದು ಮುಖ್ಯ ನ್ಯಾಯಮೂರ್ತಿ ಚಂದ್ರಚೂಡ್ ನೇತೃತ್ವದ ಪೀಠವು ಒಂದು ಮಹತ್ವದ ತೀರ್ಪಿನಲ್ಲಿ, ಅನಾಮಧೇಯ ಚುನಾವಣಾ ಬಾಂಡ್‌ಗಳು ಸಂವಿಧಾನದ 19(1)(ಎ) ವಿಧಿಯ ಅಡಿಯಲ್ಲಿ ಮಾಹಿತಿಯ ಹಕ್ಕನ್ನು ಉಲ್ಲಂಘಿಸುತ್ತದೆ, ಚುನಾವಣಾ ಬಾಂಡ್‌ಗಳ ಯೋಜನೆಯು ಅಸಂವಿಧಾನಿಕ ಎಂದು ಹೇಳುವ ಮೂಲಕ ಚುನಾವಣಾ ಬಾಂಡ್‌ಗಳ ಯೋಜನೆಯನ್ನೇ ರದ್ದುಗೊಳಿಸಿತು.





ಅಷ್ಟೇ ಅಲ್ಲ, ಏಪ್ರಿಲ್ 1, 2019 ಮತ್ತು ಫೆಬ್ರವರಿ 15, 2024 ರ ನಡುವೆ ಚುನಾವಣಾ ಬಾಂಡ್‌ಗಳನ್ನು ಯಾರು ಖರೀದಿಸಿದರು, ಅವರು ಬಾಂಡ್ ಗಳನ್ನು ಯಾವ ಪಕ್ಷಕ್ಕೆ ನೀಡಿದರು ಮತ್ತು ಪ್ರತಿ ಬಾಂಡ್ ಖರೀದಿಸಿದ ದಿನಾಂಕ ಸೇರಿದಂತೆ, ವಿವರಗಳನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮಾರ್ಚ್ 6 ರೊಳಗೆ ಚುನಾವಣಾ ಆಯೋಗಕ್ಕೆ ನೀಡಬೇಕು, ಮಾರ್ಚ್ 13ರೊಳಗೆ ಚುನಾವಣಾ ಆಯೋಗ ಪ್ರಕಟಿಸಬೇಕು ಎಂಬುದು ಸುಪ್ರೀಂ ಕೋರ್ಟ್ ಸಾಂವಿಧಾನಿಕ ಪೀಠವು ನಿರ್ದೇಶಿಸಿತು.

6 ವರ್ಷಗಳಿಂದ ಸುಪ್ರೀಂ ಕೋರ್ಟ್ ನಲ್ಲಿ ವಿಚಾರಣೆ ನಡೆಯುತ್ತಿದ್ದ ಪ್ರಕರಣವನ್ನು ಇತ್ತೀಚೆಗಷ್ಟೇ ವಿಚಾರಣೆಗೆ ಕೈಗೆತ್ತಿಕೊಳ್ಳಲಾಗಿತ್ತು. ಆ ಪ್ರಕರಣವನ್ನು ಕೈಗೆತ್ತಿಕೊಳ್ಳುವುದನ್ನು 'ಮರೆತ' ಅಂದಿನ ಮುಖ್ಯ ನ್ಯಾಯಮೂರ್ತಿ ರಂಜನ್ ಗೊಗೊಯ್ ಅವರು ಈಗ ಬಿಜೆಪಿಯ ರಾಜ್ಯಸಭಾ ಸದಸ್ಯರಾಗಿರುವುದು ಕಾಕತಾಳೀಯವೇನಲ್ಲ. ಈ ಕುರಿತ ಮಾಧ್ಯಮದವರ ಪ್ರಶ್ನೆಗೆ ಅದು ನನ್ನ ಗಮನಕ್ಕೆ ಬಂದಿಲ್ಲ ಎಂದು ಅವರು ಉತ್ತರಿಸಿದರು.

ಎಸ್.ಬಿ.ಐ. ಕಳ್ಳಾಟ: ಸುಪ್ರೀಂ ನಿಂದ ತರಾಟೆ

ಚುನಾವಣಾ ಬಾಂಡ್ ಮೂಲಕ ಯಾವ ರಾಜಕೀಯ ಪಕ್ಷಗಳಿಗೆ ಯಾರಿಂದ ಎಷ್ಟು ಹಣ ಸಂದಾಯವಾಗಿದೆ ಎಂಬುದನ್ನು ಚುನಾವಣೆಗೆ ಮುನ್ನ ಬಹಿರಂಗ ಪಡಿಸಬಾರದು ಎಂಬ ದೃಷ್ಟಿಯಿಂದ, ಈ ವಿವರಗಳನ್ನು ಬಹಿರಂಗ ಪಡಿಸುವುದನ್ನು ತಪ್ಪಿಸುವ ಪ್ರಯತ್ನ ಮಾಡಿದರು. ಇದರ ಭಾಗವಾಗಿ, ಎಸ್.ಬಿ.ಐ. ಅಧಿಕಾರಿಗಳು ಸುಪ್ರೀಂ ಕೋರ್ಟ್ ನೀಡಿದ ಗಡುವು ಮುಗಿಯುವ ದಿನದ ಹಿಂದಷ್ಟೇ, ದೇಶಾದ್ಯಂತ ಇರುವ ಬ್ಯಾಂಕ್ ಶಾಖೆಗಳಿಂದ ಇವುಗಳ ಮಾಹಿತಿ ಸಂಗ್ರಹಿಸಲು ಮತ್ತೆ ಮೂರು ತಿಂಗಳ (ಜೂನ್ 30 ರವರೆಗೆ) ಕಾಲಾವಕಾಶ ಬೇಕೆಂದು ಕೇಳಿತ್ತು. ಬ್ಯಾಂಕ್ ವ್ಯವಹಾರವೆಲ್ಲವೂ ಕಂಪ್ಯೂಟೀಕರಣಗೊಂಡಿರುವ ಈ ಕಾಲದಲ್ಲಿಯೂ, ಕ್ಷಣ ಮಾತ್ರದಲ್ಲಿ ಸಿಗುವ ಚುನಾವಣಾ ಬಾಂಡ್ ಗಳ ಮಾಹಿತಿ ಕಲೆಹಾಕಲು ಮೂರು ತಿಂಗಳು ಕಾಲಾವಕಾಶಕ್ಕೆ ಎಸ್.ಬಿ.ಐ. ಕೊಟ್ಟ ಕಾರಣ ಇಡೀ ದೇಶದಲ್ಲಿ ನಗೆಪಾಟಲಿಗೆ ಈಡಾಗಿತ್ತು ಮಾತ್ರವಲ್ಲ, ಬ್ಯಾಂಕ್ ಅಧಿಕಾರಿಗಳ ಮೇಲೆ ಬಿಜೆಪಿ ಸರ್ಕಾರ ಹೇಗೆಲ್ಲಾ ಒತ್ತಡ ತರುತ್ತಿದೆ ಮತ್ತು ಅಧಿಕಾರಿಗಳು ಬಿಜೆಪಿಯವರ ಒತ್ತಡಕ್ಕೆ ಹೇಗೆಲ್ಲಾ ಮಣಿಯುತ್ತಾರೆ ಎಂಬುದನ್ನು ಜನತೆ ನೋಡುವಂತಾಯ್ತು.

ಇದರ ನಂತರ, ಅಸೋಸಿಯೇಶನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್), ಕಾಮನ್ ಕಾಸ್ ಮತ್ತು ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾರ್ಕ್ಸ್‌ವಾದಿ) ಸೇರಿದಂತೆ ವಿವಿಧ ಪಕ್ಷಗಳು ಚುನಾವಣಾ ಬಾಂಡ್‌ಗಳಿಗೆ ಸಂಬಂಧಿಸಿದ ಪ್ರಮುಖ ವಿವರಗಳನ್ನು ಬಹಿರಂಗಪಡಿಸದಿದ್ದಕ್ಕಾಗಿ ಅದರ ವಿರುದ್ಧ ನ್ಯಾಯಾಂಗ ನಿಂದನೆ ಅರ್ಜಿಗಳನ್ನು ಸಲ್ಲಿಸಿದವು.

ಈ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಚಂದ್ರಚೂಡ್ ನೇತೃತ್ವದ ಐವರು ನ್ಯಾಯಾಧೀಶರ ಪೀಠವು ವಜಾಗೊಳಿಸಿತು, ಅಗತ್ಯವಿರುವ ಮಾಹಿತಿಯು ಬ್ಯಾಂಕ್‌ನಲ್ಲಿ ಸುಲಭವಾಗಿ ಲಭ್ಯವಿದೆ ಎಂದು ತೀರ್ಮಾನಿಸಿತು ಮತ್ತು ಡೇಟಾ ಕಂಪೈಲ್ ಮಾಡುವ ಸಂಕೀರ್ಣತೆಯ ಆಧಾರದ ಮೇಲೆ ಗಡುವನ್ನು ವಿಸ್ತರಿಸುವ ಬ್ಯಾಂಕ್‌ನ ಪ್ರಯತ್ನಗಳನ್ನು ತಿರಸ್ಕರಿಸಿತು. .

ನ್ಯಾಯಾಲಯವು ತನ್ನ ತೀರ್ಪಿನಲ್ಲಿ, ಅಗತ್ಯವಿರುವ ಮಾಹಿತಿಯು ಈಗಾಗಲೇ ಬ್ಯಾಂಕ್‌ನಲ್ಲಿ ಲಭ್ಯವಿದೆ ಮತ್ತು ಮಾರ್ಚ್ 12, 2024 ರಂದು ವ್ಯವಹಾರದ ಸಮಯದ ಮುಕ್ತಾಯದೊಳಗೆ ಈ ವಿವರಗಳನ್ನು ಬಹಿರಂಗಪಡಿಸುವುದನ್ನು ಕಡ್ಡಾಯಗೊಳಿಸಿದೆ ಎಂದು ಒತ್ತಿಹೇಳಿತು. ಚುನಾವಣಾ ಬಾಂಡ್ ಗಳ ವಿವರಗಳನ್ನು ಚುನಾವಣಾ ಆಯೋಗಕ್ಕೆ ನೀಡುವಂತೆ ಮತ್ತು ಚುನಾವಣಾ ಆಯೋಗವು ಮಾರ್ಚ್ 15ರ ಒಳಗೆ ತನ್ನ ವೆಬ್ ಸೈಟ್ ನಲ್ಲಿ ಪ್ರಕಟಿಸಬೇಕೆಂದು ಆದೇಶ ನೀಡಿತು.

ಕೋರ್ಟ್ ಆದೇಶದ ನಂತರ ಎಸ್.ಬಿ.ಐ. ಎರಡು ಪ್ರತ್ಯೇಕ ಪ್ಯಾಕೆಟ್‌ಗಳಲ್ಲಿ ಮಾಹಿತಿಯನ್ನು ಒದಗಿಸಿದೆ. ಒಂದು ಬಾಂಡ್ ಖರೀದಿದಾರರ ವಿವರಗಳನ್ನು ಹೊಂದಿದೆ ಮತ್ತು ಇನ್ನೊಂದು ಈ ಬಾಂಡ್‌ಗಳನ್ನು ರಿಡೀಮ್ ಮಾಡುವ ರಾಜಕೀಯ ಪಕ್ಷಗಳ ಮಾಹಿತಿಯನ್ನು ಒಳಗೊಂಡಿದೆ. ಇದರಲ್ಲಿ, ಏಪ್ರಿಲ್ 1, 2019 ಮತ್ತು ಫೆಬ್ರವರಿ 15, 2024 ರ ನಡುವೆ ಒಟ್ಟು 22,217 ಬಾಂಡ್‌ಗಳನ್ನು ಖರೀದಿಸಲಾಗಿದೆ ಮತ್ತು ಈ ಅವಧಿಯಲ್ಲಿ 22,030 ಬಾಂಡ್‌ಗಳನ್ನು ರಿಡೀಮ್ ಮಾಡಲಾಗಿದೆ ಎಂದು ಎಸ್‌ಬಿಐ ಸ್ಪಷ್ಟಪಡಿಸಿದೆ.

ನಂತರದ ಕ್ರಮದಲ್ಲಿ, ಮಾರ್ಚ್ 14 ರಂದು, ಭಾರತೀಯ ಚುನಾವಣಾ ಆಯೋಗವು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಒದಗಿಸಿದ ಚುನಾವಣಾ ಬಾಂಡ್‌ಗಳ ಡೇಟಾವನ್ನು ತನ್ನ ಅಧಿಕೃತ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿದೆ.

ಬಿಜೆಪಿಗೆ 6060 ಕೋಟಿ ರೂ.

ಎಸ್.ಬಿ.ಐ. ಒದಗಿಸಿದ ಮಾಹಿತಿಯಂತೆ; ಭಾರತೀಯ ಜನತಾ ಪಕ್ಷ (ಬಿಜೆಪಿ), ತೃಣಮೂಲ ಕಾಂಗ್ರೆಸ್ ಮತ್ತು ಕಾಂಗ್ರೆಸ್ ಪಕ್ಷಗಳು ಚುನಾವಣಾ ಬಾಂಡ್‌ಗಳಿಂದ ಸಿಂಹಪಾಲು ಹಣವನ್ನು ಪಡೆದ ಪ್ರಮುಖ ರಾಜಕೀಯ ಪಕ್ಷಗಳಲ್ಲಿ ಸೇರಿವೆ. ಬಿಜೆಪಿಗೆ ಅತಿ ಹೆಚ್ಚು ಹಣ ಸಂದಾಯವಾಗಿದೆ. ಅದು 5 ವರ್ಷಗಳಲ್ಲಿ 6061 ಕೋಟಿ ರೂ,ಗಳನ್ನು ಪಡೆದಿದೆ. ದೊಡ್ಡ ಮೊತ್ತದ ದೇಣಿಗೆ ಪಡೆದ ಪಟ್ಟಿಯಲ್ಲಿ ಮಮತಾ ಬ್ಯಾನರ್ಜಿಯವರ ತೃಣಮೂಲ ಕಾಂಗ್ರೆಸ್ ಎರಡನೆಯ ಸ್ಥಾನದಲ್ಲಿದೆ. ಈ ಪಕ್ಷ ಪಡೆದಿರುವ ದೇಣಿಗೆ 1,610 ಕೋಟಿ ರೂ.ಗಳು ಕಾಂಗ್ರೆಸ್ ರೂ. 1,422 (ಶೇ. 11) ಕೋಟಿ ಪಡೆದಿದೆ.

ಕೆ. ಚಂದ್ರಶೇಖರ ರಾವ್ ನೇತೃತ್ವದ ಭಾರತ್ ರಾಷ್ಟ್ರ ಸಮಿತಿ (BRS) ರೂ.1,215 ಕೋಟಿ, ನವೀನ್ ಪಟ್ನಾಯಕ್ ನೇತೃತ್ವದ ಬಿಜೆಡಿ–ರೂ. 776 ಕೋಟಿ ದೇಣಿಗೆ ಪಡೆದಿವೆ.

ತೃಣಮೂಲ ಕಾಂಗ್ರೆಸ್ ಗೇಕೆ ಇಷ್ಟು ದೊಡ್ಡ ಮೊತ್ತ?

ಒಂದು ರಾಜ್ಯದಲ್ಲಿ ಮಾತ್ರ ಆಳ್ವಿಕೆ ಮಾಡುತ್ತಿರುವ ತೃಣಮೂಲ ಕಾಂಗ್ರೆಸ್ ಪಕ್ಷಕ್ಕೆ ಉದ್ಯಮಿಗಳಿಂದ ಇಷ್ಟೊಂದು ದೊಡ್ಡ ಪ್ರಮಾಣದ ದೇಣಿಗೆ ಬಂದಿರುವುದರ ಹಿಂದೆ, ಪಶ್ಚಿಮ ಬಂಗಾಳದಲ್ಲಿ ಕಮ್ಯೂನಿಸ್ಟರನ್ನು ಅಧಿಕಾರದಿಂದ ದೂರ ಇಡುವ ಬಂಡವಾಳಗಾರರ ಮತ್ತು ಮಮತಾ ಬ್ಯಾನರ್ಜಿಯವರ ನಂಟು ಎಷ್ಟರ ಮಟ್ಟಿಗೆ ಬೃಹದಾಕಾರವಾಗಿದೆ ಎಂಬುದನ್ನು ↗

ಇಡಿ ದಾಳಿಗೆ ಒಳಗಾದ ಲಾಟರಿ ಕಂಪನಿಯಿಂದ ರೂ.1,368 ಕೋಟಿ!!

ಚುನಾವಣಾ ಆಯೋಗದ ವೆಬ್ ಸೈಟ್ ಪ್ರಕಾರ, ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡಲು ಲಾಟರಿ ಕಂಪನಿ ಫ್ಯೂಚರ್ ಗೇಮಿಂಗ್ ಮತ್ತು ಹೋಟೆಲ್ ಸರ್ವಿಸಸ್ ರೂ. 1,368 ಕೋಟಿ ಮೌಲ್ಯದ ಬಾಂಡ್‌ಗಳನ್ನು ಖರೀದಿಸಿದೆ. ದೇಶದಲ್ಲಿ ಯುವಜನರನ್ನು ಜೂಜಿನ ಜಾಲಕ್ಕೆ ಬೀಳಿಸುವಲ್ಲಿ, ಜೂಜಿನಲ್ಲಿ ಹಣ ಕಳೆದುಕೊಂಡು ಹಲವರನ್ನು ಸಾಲದ ಸುಳಿಗೆ ಸಿಲುಕಿಸುವಲ್ಲಿ ಆಳುವ ಬಿಜೆಪಿ ಪಕ್ಷದ ಪಾತ್ರ ಎಷ್ಟಿದೆ ಎಂಬುದು ಇದರಿಂದ ತಿಳಿಯುತ್ತದೆ.

ಫ್ಯೂಚರ್ ಗೇಮಿಂಗ್ ಮತ್ತು ಹೋಟೆಲ್ ಸೇವೆಗಳನ್ನು "ಲಾಟರಿ ಕಿಂಗ್" ಸ್ಯಾಂಟಿಯಾಗೊ ಮಾರ್ಟಿನ್ ನಿರ್ದೇಶಿಸಿದ್ದಾರೆ. ಮ್ಯಾನ್ಮಾರ್‌ನ ಯಾಂಗೋನ್‌ನಲ್ಲಿ ಕಾರ್ಮಿಕನಾಗಿದ್ದ ಮಾರ್ಟಿನ್ 1988 ರಲ್ಲಿ ಭಾರತಕ್ಕೆ ಮರಳಿದರು. ಅದೇ ವರ್ಷದಲ್ಲಿ ಅವರು ತಮಿಳುನಾಡಿನಲ್ಲಿ ಲಾಟರಿ ಉದ್ಯಮವನ್ನು ಸ್ಥಾಪಿಸಿದರು. ಕಾಲಾನಂತರದಲ್ಲಿ, ಅವರು ತಮ್ಮ ವ್ಯವಹಾರವನ್ನು ಕರ್ನಾಟಕ, ಕೇರಳ, ಹಾಗೆಯೇ ಭೂತಾನ್ ಮತ್ತು ನೇಪಾಳದಲ್ಲಿ ವಿಸ್ತರಿಸಿದರು. ಮಾರ್ಟಿನ್ ಆಲ್ ಇಂಡಿಯಾ ಫೆಡರೇಶನ್ ಆಫ್ ಲಾಟರಿ ಟ್ರೇಡ್ ಅಂಡ್ ಅಲೈಡ್ ಇಂಡಸ್ಟ್ರೀಸ್ ನ ಅಧ್ಯಕ್ಷರೂ ಆದರು. ಅವರ ಫ್ಯೂಚರ್ ಗೇಮಿಂಗ್ ಸೊಲ್ಯೂಷನ್ಸ್ ಇಂಡಿಯಾ, ಪ್ರಖ್ಯಾತ ವಿಶ್ವ ಲಾಟರಿ ಅಸೋಸಿಯೇಷನ್‌ನಲ್ಲಿ ಸದಸ್ಯತ್ವವನ್ನು ಪಡೆದುಕೊಂಡಿದೆ.

ಈ ಕಂಪನಿಯ ಮೇಲೆ ಜಾರಿ ನಿರ್ದೇಶನಾಲಯವು ಹಲವಾರು ಬಾರಿ ದಾಳಿ ನಡೆಸಿದೆ. ಡಿಸೆಂಬರ್ 2021 ರಲ್ಲಿ, ಹಣ ವರ್ಗಾವಣೆ ತಡೆ ಕಾಯ್ದೆಯಡಿ ರೂ. 19.5 ಕೋಟಿ ಮೌಲ್ಯದ ಆಸ್ತಿಯನ್ನು ಇಡಿ ಜಪ್ತಿ ಮಾಡಿದೆ. 2015ರಲ್ಲಿ ಇಡಿ ಅಧಿಕಾರಿಗಳು ಪಶ್ಚಿಮ ಬಂಗಾಳದ ಸಿಲಿಗುರಿಯಲ್ಲಿ ರೂ. 100 ಕೋಟಿ ಹಣವನ್ನು ವಶಪಡಿಸಿಕೊಂಡಿದ್ದರು. 2023 ರಲ್ಲಿ, ಪಂಜಾಬ್‌ನ ಲಾಟರಿ ವಿತರಕ ಅರುಣ್ ಜೋತ್ ಸಿಂಗ್ ಸೋಧಿ ರೂ. 900 ಕೋಟಿ ಲಾಟರಿ ಹಗರಣವನ್ನು ಆರೋಪಿಸಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದರು. ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಈ ವಿಷಯದ ಬಗ್ಗೆ ತನಿಖೆ ನಡೆಸುತ್ತಿದ್ದಾರೆ ಎಂದು ಪಂಜಾಬ್ ಸರ್ಕಾರ ಈ ವರ್ಷದ ಜನವರಿಯಲ್ಲಿ ಹೈಕೋರ್ಟ್‌ಗೆ ತಿಳಿಸಿದೆ.

ಅನಿಲ್ ಅಗರ್ವಾಲ್ ಅವರ ವೇದಾಂತ ಗ್ರೂಪ್ (ರೂ. 376 ಕೋಟಿ), ಜಿಂದಾಲ್ ಸ್ಟೀಲ್ ಮತ್ತು ಪವರ್ (ರೂ. 123 ಕೋಟಿ) ಕೂಡ ಕೇಂದ್ರ ಏಜೆನ್ಸಿಗಳ ತನಿಖೆಯನ್ನು ಎದುರಿಸುತ್ತಿವೆ. ದೆಹಲಿ ಮದ್ಯ ಪ್ರಕರಣದಲ್ಲಿ ಸಿಲುಕಿರುವ ಅರಬಿಂದೋ ಫಾರ್ಮಾ ರೂ. 49 ಕೋಟಿ ದೇಣಿಗೆ ನೀಡಿದೆ.

ಅದೇ ರೀತಿ, ರಶ್ಮಿ ಸಿಮೆಂಟ್ ಮತ್ತು ಶಿರಡಿ ಸಾಯಿ ಎಲೆಕ್ಟ್ರಿಕಲ್ಸ್ ಎಲೆಕ್ಟೋರಲ್ ಬಾಂಡ್ ಗಳನ್ನು ಖರೀದಿಸಿದ ಕಂಪನಿಗಳ ಪಟ್ಟಿಯಲ್ಲಿವೆ ಮತ್ತು ಇಡಿ ಮತ್ತು ಐ.ಟಿ. ಸ್ಕ್ಯಾನ್ ಗಳ ಅಡಿಯಲ್ಲಿವೆ.

ದಾನಿ ಕಂಪನಿಗಳು ಮತ್ತು ಮೊತ್ತ

ಚುನಾವಣಾ ಆಯೋಗದ ದಾಖಲೆಗಳ ಪ್ರಕಾರ ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡಿದ ಪ್ರಮುಖ ದಾನಿಗಳಲ್ಲಿ ಅನಿಲ್ ಅಗರ್ವಾಲ್ ನೇತೃತ್ವದ ವೇದಾಂತ, ಸುನಿಲ್ ಮಿತ್ತಲ್ ನೇತೃತ್ವದ ಭಾರ್ತಿ ಏರ್ಟೆಲ್ ಸೇರಿವೆ. ಮೇಘಾ ಎಂಜಿನಿಯರಿಂಗ್ ಮತ್ತು ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ ರೂ. 966 ಕೋಟಿ ಮೌಲ್ಯದ ಬಾಂಡ್ ಗಳನ್ನು ಖರೀದಿಸಿದೆ.

ರಿಲಯನ್ಸ್‌ಗೆ ಸಂಪರ್ಕ ಹೊಂದಿರುವ ಕ್ವಿಕ್ ಸಪ್ಲೈ ಚೈನ್ ಪ್ರೈವೇಟ್ ಲಿಮಿಟೆಡ್; ರೂ. 410 ಕೋಟಿ, ಹಲ್ದಿಯಾ ಎನರ್ಜಿ ಲಿಮಿಟೆಡ್: ರೂ. 377 ಕೋಟಿ, ಎಸ್ಸೆಲ್ ಮೈನಿಂಗ್ ಮತ್ತು ಇಂಡಸ್ಟ್ರೀಸ್ ಲಿಮಿಟೆಡ್: ರೂ. 225 ಕೋಟಿ, ಪಶ್ಚಿಮ ಯುಪಿ ವಿದ್ಯುತ್ ಪ್ರಸರಣ: ರೂ. 220 ಕೋಟಿ, ಭಾರ್ತಿ ಏರ್‌ಟೆಲ್ ಲಿಮಿಟೆಡ್: ರೂ. 198 ಕೋಟಿ, ಕೆವೆಂಟರ್ ಫುಡ್ ಪಾರ್ಕ್ ಇನ್ಫ್ರಾ ಲಿಮಿಟೆಡ್: ರೂ. 195 ಕೋಟಿ, ಎಂಕೆಜೆ ಎಂಟರ್‌ಪ್ರೈಸಸ್ ಲಿಮಿಟೆಡ್: ರೂ. 192 ಕೋಟಿ, ಮದನ್‌ಲಾಲ್ ಲಿಮಿಟೆಡ್: ರೂ. 186 ಕೋಟಿ, ಯಶೋದಾ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ: ರೂ. 162 ಕೋಟಿ, ಉತ್ಕಲ್ ಅಲ್ಯುಮಿನಾ ಇಂಟರ್‌ನ್ಯಾಶನಲ್ ಲಿಮಿಟೆಡ್: ರೂ. 145 ಕೋಟಿ, DLF ಕಮರ್ಷಿಯಲ್ ಡೆವಲಪರ್ಸ್ ಲಿಮಿಟೆಡ್: ರೂ. 130 ಕೋಟಿ, ಬಿಜಿ ಶಿರ್ಕೆ ಕನ್ಸ್ಟ್ರಕ್ಷನ್ ಟೆಕ್ನಾಲಜಿ ಪ್ರೈವೇಟ್ ಲಿಮಿಟೆಡ್: ರೂ. 119 ಕೋಟಿ, ಧರಿವಾಲ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್: ರೂ.115 ಕೋಟಿ, ಏವೀಸ್ ಟ್ರೇಡಿಂಗ್ ಫೈನಾನ್ಸ್ ಪ್ರೈವೇಟ್ ಲಿಮಿಟೆಡ್: ರೂ. 113 ಕೋಟಿ, ಟೊರೆಂಟ್ ಪವರ್ ಲಿಮಿಟೆಡ್: ರೂ.107 ಕೋಟಿ, ಬಿರ್ಲಾ ಕಾರ್ಬನ್ ಇಂಡಿಯಾ ಪ್ರೈವೇಟ್ ಲಿಮಿಟೆಡ್: ರೂ.105 ಕೋಟಿ.

ಅಲ್ಟ್ರಾಟೆಕ್ ಸಿಮೆಂಟ್–ರೂ.35 ಕೋಟಿ, ಆನಂದ್ ಮಹೀಂದ್ರಾ ನೇತೃತ್ವದ ಮಹೀಂದ್ರ ಮತ್ತು ಮಹೀಂದ್ರಾ – ರೂ.25 ಕೋಟಿ, ಬಜಾಜ್ ಫೈನಾನ್ಸ್– ರೂ.20 ಕೋಟಿ, ಮಾರುತಿ ಸುಜುಕಿ – ರೂ.20 ಕೋಟಿ, ಐಟಿಸಿ– ರೂ.6.6 ಕೋಟಿ, ಟೆಕ್ ಮಹೀಂದ್ರಾ–ರೂ.1 ಕೋಟಿ. ರುಂಗ್ಟಾ ಸನ್ಸ್– ರೂ.100 ಕೋಟಿ, ಎಸ್.ಎನ್.ಮೋಹಂತಿ ರೂ. 45 ಕೋಟಿ, ಸಾಸ್ಮಲ್ ಇನ್ಫ್ರಾಸ್ಟ್ರಕ್ಚರ್ ಪ್ರೈವೇಟ್ ಲಿಮಿಟೆಡ್–ರೂ.44 ಕೋಟಿ, ಏವೀಸ್ ಟ್ರೇಡಿಂಗ್ ಫೈನಾನ್ಸ್ ರೂ. 85.5 ಕೋಟಿ, NEXG ಡಿವೈಸಸ್ ಪ್ರೈವೇಟ್ ಲಿಮಿಟೆಡ್– ರೂ. 35 ಕೋಟಿ, SAFAL ಗೋಯಲ್ ರಿಯಾಲ್ಟಿ LLP – ರೂ. 35 ಕೋಟಿ, ಪೆಂಗ್ವಿನ್ ಟ್ರೇಡಿಂಗ್ & ಏಜೆನ್ಸಿ ಲಿಮಿಟೆಡ್– ರೂ. 27.5 ಕೋಟಿ, ಟ್ರಾನ್ಸ್‌ವೇಸ್ ಎಕ್ಸಿಮ್ ಪ್ರೈವೇಟ್ ಲಿಮಿಟೆಡ್ – ರೂ. 41.5 ಕೋಟಿ ಮೌಲ್ಯದ ಬಾಂಡ್ ಗಳನ್ನು ಖರೀದಿಸಿ ರಾಜಕೀಯ ಪಕ್ಷಗಳಿಗೆ ನೀಡಿವೆ.

ಇತರ ದಾನಿಗಳೆಂದರೆ–ಫಿನೋಲೆಕ್ಸ್ ಕೇಬಲ್ಸ್ ಲಿಮಿಟೆಡ್, ಲಕ್ಷ್ಮಿ ನಿವಾಸ್ ಮಿತ್ತಲ್, ಎಡೆಲ್ವೀಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್, ಜೆಹೆಚ್ಚಿಎಲ್ ಲಿಮಿಟೆಡ್, ಜಿಂದಾಲ್ ಪಾಲಿ ಫಿಲ್ಮ್ ಲಿಮಿಟೆಡ್, ಐಟಿಸಿ ಲಿಮಿಟೆಡ್, ಗ್ರಾಸಿಮ್ ಇಂಡಸ್ಟ್ರೀಸ್ ಲಿಮಿಟೆಡ್ ಪಿಆರ್, ಪಿರಮಲ್ ಕ್ಯಾಪಿಟಲ್ ಮತ್ತು ಹೌಸಿಂಗ್ ಫೈನಾನ್ಸ್ ಲಿಮಿಟೆಡ್, ಪಿರಮಲ್ ಎಂಟರ್ಪ್ರೈಸಸ್ ಲಿಮಿಟೆಡ್, ಪ್ರಾಪರ್ಟೀಸ್ ಪ್ರೈವೇಟ್ ಲಿಮಿಟೆಡ್, ಬಜಾಜ್ ಫೈನಾನ್ಸ್ ಲಿಮಿಟೆಡ್, ಅಪೋಲೋ ಟೈರ್ಸ್ ಲಿಮಿಟೆಡ್ ಮತ್ತು ಸ್ಪೈಸ್ ಜೆಟ್ ಲಿಮಿಟೆಡ್. JK ಸಿಮೆಂಟ್ ಲಿಮಿಟೆಡ್, DLF ಕಮರ್ಷಿಯಲ್ ಡೆವಲಪರ್ಸ್ ಲಿಮಿಟೆಡ್, ಏವನ್ ಸೈಕಲ್ಸ್ ಲಿಮಿಟೆಡ್, ಝೈಡಸ್ ಹೆಲ್ತ್‌ಕೇರ್ ಲಿಮಿಟೆಡ್, ಸಿಪ್ಲಾ ಲಿಮಿಟೆಡ್, ಡಾ. ರೆಡ್ಡೀಸ್ ಲ್ಯಾಬೋರೇಟರೀಸ್ ಲಿಮಿಟೆಡ್, ಮ್ಯಾನ್‌ಕೈಂಡ್ ಫಾರ್ಮಾ ಲಿಮಿಟೆಡ್, ಹಲ್ದಿಟೆಡಿಯ ಪವರ್ ಲಿಮಿಟೆಡ್ ಕೂಡ ದಾನಿಗಳಲ್ಲಿ ಸೇರಿವೆ ಎಂದು ಡೇಟಾ ತಿಳಿಸಿದೆ.

ಚುನಾವಣಾ ಬಾಂಡ್‌ಗಳ ಟಾಪ್–100 ದಾನಿಗಳ ಪಟ್ಟಿಯಲ್ಲಿ, ಕಂಪನಿಗಳ ಹಲವು ವೆಬ್‌ಸೈಟ್‌ಗಳು 'ನಿಷ್ಕ್ರಿಯ'ವಾಗಿಯೇ ಉಳಿದಿವೆ, ಆದ್ದರಿಂದ ಘಟಕಗಳ ವಿವರಗಳನ್ನು ಕಂಡುಹಿಡಿಯಲಾಗಲಿಲ್ಲ ಎಂದು ಮಿಂಟ್‌ನ ವಿಶ್ಲೇಷಣೆಯಲ್ಲಿ ಹೇಳಲಾಗಿದೆ.

ಚುನಾವಣಾ ಬಾಂಡ್ ಎಂಬ ಮಹಾ ಭ್ರಷ್ಟಾಚಾರದ ಕಣ್ಕಟ್ಟು

ನರೇಂದ್ರ ಮೋದಿ ಸರ್ಕಾರ ಜನವರಿ 2018 ರಲ್ಲಿ ಚುನಾವಣಾ ಬಾಂಡ್‌ಗಳನ್ನು ಜಾರಿಗೆ ತಂದಿತು. ಈ ಬಾಂಡ್‌ಗಳ ಹಿಂದಿನ ಪರಿಕಲ್ಪನೆಯು ರಾಜಕೀಯದಲ್ಲಿ ಕಪ್ಪು ಹಣದ ಪ್ರಭಾವವನ್ನು ಕಡಿಮೆ ಮಾಡುವುದು ಮತ್ತು ರಾಜಕೀಯ ಪಕ್ಷಗಳಿಗೆ ಕೊಡುಗೆ ನೀಡಲು ವ್ಯಕ್ತಿಗಳು ಮತ್ತು ಸಂಸ್ಥೆಗಳಿಗೆ ಕಾನೂನು ಮತ್ತು ಪಾರದರ್ಶಕ ಕಾರ್ಯವಿಧಾನವನ್ನು ಒದಗಿಸುವುದು. ಒಟ್ಟಾರೆಯಾಗಿ, ದೇಶದಲ್ಲಿ ರಾಜಕೀಯ ನಿಧಿ ವ್ಯವಸ್ಥೆಯನ್ನು ಶುದ್ಧೀಕರಿಸಲು ಎಲೆಕ್ಟೋರಲ್



ಬಾಂಡ್‌ಗಳ ಯೋಜನೆಯನ್ನು ಸರ್ಕಾರವು ಅಧಿಸೂಚಿಸಿದೆ ಎಂದು ಹೇಳಲಾಗಿದೆ.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ನಿರ್ದಿಷ್ಟ ಶಾಖೆಗಳಲ್ಲಿ ಈ ಬಾಂಡ್‌ಗಳನ್ನು 1,000, 10,000, 1 ಲಕ್ಷ, 10 ಲಕ್ಷ ಮತ್ತು 1 ಕೋಟಿ ರೂಪಾಯಿ ಗುಣಕಗಳಲ್ಲಿ ಮಾರಾಟ ಮಾಡಲಾಗುತ್ತದೆ. ಬ್ಯಾಂಕ್ ಖಾತೆಯಿಂದ ಪಾವತಿ ಮಾಡುವ ಮೂಲಕ ಮಾತ್ರ ಚುನಾವಣಾ ಬಾಂಡ್ ಗಳನ್ನು ಖರೀದಿಸಬಹುದು. ಆದರೆ, ದಾನಿಗಳ ಹೆಸರು, ಯಾರಿಗೆ ದೇಣಿಗೆ ನೀಡಲಾಗುತ್ತದೆ ಎಂಬ ಮಾಹಿತಿಯನ್ನು ಬಾಂಡ್ ಗಳಲ್ಲಿ ನಮೂದಿಸಬೇಕಾಗಿಲ್ಲ. ಒಬ್ಬ ವ್ಯಕ್ತಿ ಅಥವಾ ಕಂಪನಿಯು ಖರೀದಿಸಬಹುದಾದ ಚುನಾವಣಾ ಬಾಂಡ್ ಗಳ ಸಂಖ್ಯೆಗೆ ಯಾವುದೇ ಮಿತಿಯೂ ಇಲ್ಲ ಎಂದು ಹಣಕಾಸು ಸಚಿವಾಲಯದ ಪತ್ರಿಕಾ ಪ್ರಕಟಣೆ ತಿಳಿಸಿದೆ. ಹೀಗಾಗಿ ಚುನಾವಣಾ ಬಾಂಡ್‌ಗಳನ್ನು ಅನಾಮಧೇಯ ಎಂದು ಹೇಳಲಾಗುತ್ತದೆ. ಯಾರು ಮತ್ತು ಎಷ್ಟು ಹಣವನ್ನು ರಾಜಕೀಯ ಪಕ್ಷಗಳಿಗೆ ಕೊಟ್ಟಿದ್ದಾರೆ ಎಂದು ತಿಳಿಯುವ ಹಕ್ಕು ಸಾರ್ವಜನಿಕರಿಗಿಲ್ಲ!! ಆದರೆ, ಕೋಟ್ಯಾಂತರ ರೂಪಾಯಿ ದೇಣಿಗೆ ನೀಡುವ ಕಾರ್ಪೊರೇಟ್ ದಾನಿಗಳಿಗೆ ಅನಾಮಧೇಯತೆಯನ್ನು ನೀಡುವ ಈ ಯೋಜನೆಯು, 2000 ರೂಪಾಯಿಗಳನ್ನು ನಗದು ರೂಪದಲ್ಲಿ ನೀಡುವ ನಾಗರಿಕರು ತಮ್ಮ ಹೆಸರನ್ನು ಬಹಿರಂಗಪಡಿಸಬೇಕು ಎನ್ನುತ್ತದೆ!!

ಕಾರ್ಪೊರೇಟ್ ಗಳಿಂದ ರಾಜಕೀಯ ದೇಣಿಗೆ

2016 ಮತ್ತು 2017 ರ ಹಣಕಾಸು ಕಾಯ್ದೆಯ ಮೂಲಕ ಎಲೆಕ್ಟೋರಲ್ ಬಾಂಡ್ ಯೋಜನೆಯನ್ನು ಪರಿಚಯಿಸಲು ಸರ್ಕಾರವು ನಾಲ್ಕು ಕಾಯಿದೆಗಳಿಗೆ ತಿದ್ದುಪಡಿಗಳನ್ನು ತಂದಿತು. ಈ ಕಾಯಿದೆಗಳೆಂದರೆ 2016 ಮತ್ತು 2017 ರ ಹಣಕಾಸು ಕಾಯಿದೆಗಳ ಮೂಲಕ ಜನರ ಪ್ರಾತಿನಿಧ್ಯ ಕಾಯಿದೆ–1951 (RPA), ಕಂಪನಿಗಳ ಕಾಯಿದೆ–2013, ಆದಾಯ ತೆರಿಗೆ ಕಾಯಿದೆ–1961, ಮತ್ತು ವಿದೇಶಿ ಕೊಡುಗೆಗಳ ನಿಯಂತ್ರಣ ಕಾಯಿದೆ–2010 (FCRA).

ಯೋಜನೆಯನ್ನು ಪರಿಚಯಿಸುವ ಮೊದಲು ರಾಜಕೀಯ ಪಕ್ಷಗಳು 20,000 ರೂ.ಗಿಂತ ಹೆಚ್ಚಿನ ಎಲ್ಲಾ ದೇಣಿಗೆಗಳನ್ನು ಸಾರ್ವಜನಿಕವಾಗಿ ನೀಡಬೇಕಾಗಿತ್ತು. ಅಲ್ಲದೆ, ಯಾವುದೇ ಕಾರ್ಪೊರೇಟ್ ಕಂಪನಿಯು ತಮ್ಮ ಒಟ್ಟು ಲಾಭದ ಶೇ. 7.5 ಅಥವಾ ಆದಾಯದ ಶೇ. 10 ಕ್ಕಿಂತ ಹೆಚ್ಚಿನ ಮೊತ್ತವನ್ನು ದೇಣಿಗೆ ನೀಡಲು ಅನುಮತಿ ಇರಲಿಲ್ಲ.

ಸುಪ್ರೀಂ ಕೋರ್ಟ್ ನಲ್ಲಿ ರಿಟ್ ಅರ್ಜಿ

ಚುನಾವಣಾ ಬಾಂಡ್ **ಪುಟ 10 ಕ್ಕೆ**

ತಿಳಿಸುತ್ತದೆ. ಜನರಿಂದ ಆಯ್ಕೆಯಾಗಿ ಸತತ 34 ವರ್ಷಗಳ ಕಾಲ ಆಳಿದ ಕಮ್ಯೂನಿಸ್ಟರನ್ನು ಅಧಿಕಾರದಿಂದ ದೂರ ಇಡಲು ಮಮತಾಗೆ ಶಕ್ತಿ, ಹಣಕಾಸಿನ ನೆರವು ಬಂದದ್ದು ಎಲ್ಲಿಂದ ಎಂಬುದು ಇದರಿಂದ ತಿಳಿಯುತ್ತದೆ.

ರಕ್ಷಣಾ ಸಚಿವಾಲಯದಿಂದ ರೂ. 5,000 ಕೋಟಿ ಆದೇಶವನ್ನು ಸ್ವೀಕರಿಸಿದ MEIL

ತೆಲಂಗಾಣ ಮೂಲದ ಮೇಘಾ ಇಂಜಿನಿಯರಿಂಗ್ ಮತ್ತು ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ (MEIL) ನಿರ್ಮಾಣ ಕಂಪನಿಯು 2019 ಮತ್ತು 2023 ರ ನಡುವೆ ರೂ. 966 ಕೋಟಿ ಮೌಲ್ಯದ ಬಾಂಡ್‌ಗಳನ್ನು ಖರೀದಿಸಿದೆ. ಕೈಗಾರಿಕಾ ಸಮೂಹವನ್ನು 1989 ರಲ್ಲಿ ಪಾಮಿರೆಡ್ಡಿ ಪಿಚ್ಚಿ ರೆಡ್ಡಿ (ಪಿಪಿ ರೆಡ್ಡಿ) ಸ್ಥಾಪಿಸಿದರು. ಮೇಘಾ ಇಂಜಿನಿಯರಿಂಗ್ ನ ಇತರ ಕೆಲವು ಪ್ರಮುಖ ಯೋಜನೆಗಳೆಂದರೆ––ಜೋಜಿಲಾ ಸುರಂಗ, ತೆಲಂಗಾಣ ನೀರಾವರಿ ಯೋಜನೆ, ಥಾಣೆ–ಬೊರಿವಲಿ ಅವಳಿ ಸುರಂಗ ಯೋಜನೆ, ಇತ್ಯಾದಿ. MEIL 2023 ರಲ್ಲಿ ರಕ್ಷಣಾ ಸಚಿವಾಲಯದಿಂದ ರೂ. 5,000 ಕೋಟಿ ಆದೇಶವನ್ನು ಸ್ವೀಕರಿಸಿದೆ.

ಇಲ್ಲಿಯೂ ಮರೆಮಾಚುವ ಯತ್ನ

ಖರೀದಿ ದಿನಾಂಕ, ಖರೀದಿದಾರರ ಹೆಸರು ಮತ್ತು ಮುಖಬೆಲೆ ಸೇರಿದಂತೆ ಚುನಾವಣಾ ಬಾಂಡ್‌ಗಳ ಎಲ್ಲಾ ವಿವರಗಳನ್ನು ಲಭ್ಯವಾಗುವಂತೆ ಸುಪ್ರೀಂ ಕೋರ್ಟ್ ತನ್ನ ಹಿಂದಿನ ತೀರ್ಪಿನಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಆದಾಗ್ಯೂ, ಎಸ್‌ಬಿಐ ಚುನಾವಣಾ ಬಾಂಡ್‌ಗಳನ್ನು (ಅನನ್ಯ ಆಲ್ಫಾನ್ಯೂಮರಿಕ್ ಸಂಖ್ಯೆಗಳು) ಬಹಿರಂಗಪಡಿಸಿಲ್ಲ ಎಂದು ನ್ಯಾಯಾಲಯ ಹೇಳಿದೆ.

ಈ ಸಂಬಂಧ ಮಾರ್ಚ್ 15, 2024 ರಂದು ಮುಖ್ಯ ನ್ಯಾಯಮೂರ್ತಿ ಡಿವೈ ಚಂದ್ರಚೂಡ್, ನ್ಯಾಯಮೂರ್ತಿ ಸಂಜೀವ್ ಖನ್ನಾ, ನ್ಯಾಯಮೂರ್ತಿ ಬಿ.ಆರ್. ಗವಾಯಿ, ನ್ಯಾಯಮೂರ್ತಿ ಜೆ.ಬಿ. ಪರ್ದಿವಾಲಾ ಮತ್ತು ನ್ಯಾಯಮೂರ್ತಿ ಮನೋಜ್ ಮಿಶ್ರಾ ಅವರ ಪೀಠವು, ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಬಾಂಡ್‌ಗಳ ಖರೀದಿ ಮತ್ತು ವಿಮೋಚನೆಗೆ ಸಂಬಂಧಿಸಿದಂತೆ ಈಗಾಗಲೇ ಬಹಿರಂಗಪಡಿಸಿದ ವಿವರಗಳ ಜೊತೆಗೆ, ಚುನಾವಣಾ ಬಾಂಡ್‌ಗಳ ಸಂಖ್ಯೆಯನ್ನು ಸಹ ಬಹಿರಂಗಪಡಿಸಬೇಕು ಎಂದು ಸ್ಪಷ್ಟವಾಗಿ ಹೇಳಿದೆ. ಅಂದಿನ ವಿಚಾರಣೆಯ ಆರಂಭದಲ್ಲಿಯೇ ಮುಖ್ಯ ನ್ಯಾಯಮೂರ್ತಿ ಚಂದ್ರಚೂಡ್ ಅವರು, "ಒಂದು ವಿಷಯ. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಪರವಾಗಿ ಯಾರು ಹಾಜರಾಗುತ್ತಿದ್ದಾರೆ? ಅವರು ಬಾಂಡ್ ಸಂಖ್ಯೆಗಳನ್ನು ಬಹಿರಂಗಪಡಿಸಿಲ್ಲ, ಅದನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬಹಿರಂಗಪಡಿಸಬೇಕು" ಎಂದು ಸ್ಪಷ್ಟಪಡಿಸಿದರು.

ಚುನಾವಣಾ ಬಾಂಡ್‌ಗಳ ದತ್ತಾಂಶದಲ್ಲಿ ಅಪರಿಚಿತ ಮತ್ತು ನಿಗೂಢ ದಾನಿಗಳ ಪತ್ತೆಯೊಂದಿಗೆ, "ಶೆಲ್ ಕಂಪನಿಗಳ ಕಾರ್ಪೊರೇಟ್ ಮುಸುಕನ್ನು ತೆಗೆದುಹಾಕಲು" ಸುಪ್ರೀಂ ಕೋರ್ಟ್ ಆದೇಶಿಸಬೇಕು ಎಂದು ಕಾಂಗ್ರೆಸ್ ಸಂಸದ ಮನೀಶ್ ತಿವಾರಿ ಅವರು ಹೇಳಿದ್ದಾರೆ. ●



ಕೃಪೆ: ಸತೀಶ್ ಆಚಾರ್ಯ

ಚುನಾವಣಾ ಬಾಂಡ್ ಎಂಬ ಕಣ್ಕಟ್ಟು..... ಪುಟ 9 ರಿಂದ

ಯೋಜನೆಯ ಸಾಂವಿಧಾನಿಕತೆ ಮತ್ತು ಕಾನೂನುಬದ್ಧತೆ ಮತ್ತು ಭಾರತೀಯ ಪ್ರಜಾಪ್ರಭುತ್ವಕ್ಕೆ ಒಡ್ಡುವ ಅಪಾಯದ ವಿರುದ್ಧ, ಹಿರಿಯ ವಕೀಲರಾದ ಪ್ರಶಾಂತ್ ಭೂಷಣ್, ನಿಜಾಮ್ ಪಾಷಾ, ಕಪಿಲ್ ಸಿಬಲ್ ಅವರು ಸುಪ್ರೀಂ ಕೋರ್ಟ್ ನಲ್ಲಿ ವಾದ ಮಾಡಿದ್ದಾರೆ. ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್, Common Cause ಹಾಗೂ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾರ್ಕ್ಸ್‌ವಾದಿ) (CPIM) 2017ರಲ್ಲಿ ಸಲ್ಲಿಸಿದ ಅರ್ಜಿಗಳನ್ನು ನಾಲ್ಕು ವರ್ಷಗಳ ನಂತರ ಐವರು ನ್ಯಾಯಾಧೀಶರ ಸಾಂವಿಧಾನಿಕ ಪೀಠವು ವಿಚಾರಣೆಯನ್ನು ಆರಂಭಿಸಿತು.

ಸಿಪಿಐ(ಎಂ) ಪರ ವಾದ ಮಂಡಿಸಿದ ವಕೀಲ ಫರಸತ್ ಅವರು, ಚುನಾವಣಾ ಬಾಂಡ್‌ಗಳ ಯೋಜನೆಯು ಪ್ರಾಥಮಿಕವಾಗಿ ಕಪ್ಪುಹಣವನ್ನು ತಗ್ಗಿಸುವ ಗುರಿಯನ್ನು ಹೊಂದಿಲ್ಲ, ಬದಲಾಗಿ ಸಾಮಾನ್ಯ ಬ್ಯಾಂಕಿಂಗ್ ಚಾನೆಲ್‌ಗಳಿಂದ ಅನಾಮಧೇಯ ಧನಸಹಾಯವನ್ನು, ಅನಾಮಧೇಯ ಚುನಾವಣಾ ಬಾಂಡ್‌ಗಳಿಗೆ ಮರುಹೊಂದಿಸುವ ಗುರಿಯನ್ನು ಹೊಂದಿದೆ ಎಂದು ನ್ಯಾಯಾಲಯಕ್ಕೆ ಸಲ್ಲಿಸಿದರು. ಮುಂದುವರಿದು ಅವರು, ಈ ಯೋಜನೆಯನ್ನು "ಪರ್ಯಾಯ ಬಿಳಿ ಹಣದ ಚಾನಲ್" ಎಂದು ಕರೆದರು.

ಪಾರದರ್ಶಕತೆ ಹೊಂದಿರುವ ಚುನಾವಣಾ ಟ್ರಸ್ಟ್‌ಗಳು

2013 ರಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರವು ಪರಿಚಯಿಸಿದ ಚುನಾವಣಾ ಟ್ರಸ್ಟ್‌ಗಳು ಚುನಾವಣಾ ಬಾಂಡ್‌ಗಳ ಯೋಜನೆಯಂತೆಯೇ ಕಾರ್ಯನಿರ್ವಹಿಸುತ್ತವೆ. ಇದು ಕಾರ್ಪೋರೇಟ್‌ಗಳು ಮತ್ತು ವ್ಯಕ್ತಿಗಳಿಂದ ರಾಜಕೀಯ ದೇಣಿಗೆಗಳನ್ನು ಪಡೆಯುವ ದಾರಿಯನ್ನು ಸುಗಮಗೊಳಿಸುತ್ತವೆ. ಆದರೆ ಚುನಾವಣಾ ಬಾಂಡ್ ಗಳಿಗಿಂತ ಇದು ಭಿನ್ನವಾಗಿದ್ದು, ಚುನಾವಣಾ ಆಯೋಗಕ್ಕೆ ವಾರ್ಷಿಕ ವರದಿಗಳನ್ನು ಸಲ್ಲಿಸಲು ಚುನಾವಣಾ ಟ್ರಸ್ಟ್‌ಗಳಿಗೆ ಕಡ್ಡಾಯಗೊಳಿಸಲಾಗಿದೆ. ಇದು ವ್ಯಕ್ತಿಗಳು ಮತ್ತು ಕಂಪನಿಗಳು ನೀಡಿದ ದೇಣಿಗೆಗಳನ್ನು ವಿವರಿಸುತ್ತದೆ ಮತ್ತು ಧನಸಹಾಯ ಪ್ರಕ್ರಿಯೆಯಲ್ಲಿ ಪಾರದರ್ಶಕತೆಯನ್ನು ಖಚಿತಪಡಿಸುತ್ತದೆ. 2022-23ರ ಅವಧಿಯಲ್ಲಿ, ಸೆಂಟ್ರಲ್ ಬೋರ್ಡ್ ಆಫ್ ಡೈರೆಕ್ಟ್ ಟ್ಯಾಕ್ಸ್ (CBDT) ಯಲ್ಲಿ ನೋಂದಾಯಿಸಲಾದ 18 ಚುನಾವಣಾ ಟ್ರಸ್ಟ್‌ಗಳಲ್ಲಿ 13 ಟ್ರಸ್ಟ್‌ಗಳು ಚುನಾವಣಾ ಆಯೋಗಕ್ಕೆ ತಮ್ಮ ದೇಣಿಗೆಯ ವಿವರಗಳನ್ನು ಸಲ್ಲಿಸಿವೆ. ಐದು ಟ್ರಸ್ಟ್‌ಗಳು ವಿವಿಧ ಕಾರ್ಪೊರೇಟ್ ಸಂಸ್ಥೆಗಳಿಂದ ಕೊಡುಗೆಗಳನ್ನು ಪಡೆದಿವೆ ಎಂದು ಎಡಿಆರ್ ವರದಿ ಬಹಿರಂಗಪಡಿಸಿದೆ.

ರಾಜಕೀಯ ಪಕ್ಷಗಳ ಚುನಾವಣಾ ವೆಚ್ಚಕ್ಕೆ ಹಣ ಕೊಡುವವರ್ಯಾರು?

ರಾಜಕೀಯ ಪಕ್ಷಗಳಿಗೆ ಚುನಾವಣಾ ವೆಚ್ಚಕ್ಕೆಂದೇ ಉದ್ಯಮಿಗಳು, ಗುತ್ತಿಗೆದಾರರು, ಜನಸಾಮಾನ್ಯರು ಹಣ ಕೊಡುವ ಪರಿಪಾಠ ನಮ್ಮಲ್ಲಿದೆ. ಈಗ, ಚುನಾವಣಾ ಬಾಂಡ್ ಗಳ ಮೂಲಕ ವಿದೇಶಿ ಕಂಪನಿಗಳ ಭಾರತೀಯ ಅಂಗಸಂಸ್ಥೆಗಳಿಗೆ ದೇಣಿಗೆ ನೀಡಲು ಅನುಮತಿ ನೀಡಲಾಗಿದೆ. ಶೆಲ್ ಕಂಪನಿಗಳನ್ನು ದೇಣಿಗೆ ನೀಡಲು ಈಗ ಬಳಸಬಹುದು ಎಂಬ ಆರೋಪಕ್ಕೆ ಇದು ಗುರಿಯಾಗಿದೆ.

2017 ರಲ್ಲಿ, ಆಗಿನ ಆರ್‌ಬಿಐ ಗವರ್ನರ್ ಉರ್ಜಿತ್ ಪಟೇಲ್ ಅವರು ಚುನಾವಣಾ ಬಾಂಡ್ ಗಳ ದುರುಪಯೋಗದ ಸಾಧ್ಯತೆಯ ಬಗ್ಗೆ ಹೇಳಿದ್ದರು, ವಿಶೇಷವಾಗಿ ಶೆಲ್ ಕಂಪನಿಗಳ (ಬೇನಾಮಿ ಹೆಸರಿನಲ್ಲಿ ಶೆಲ್ ಕಂಪನಿಗಳನ್ನು ಹುಟ್ಟುಹಾಕಿರುತ್ತಾರೆ) ಬಳಕೆಯ ಮೂಲಕ. ಚುನಾವಣಾ ಬಾಂಡ್ ಗಳು ಭೌತಿಕ ರೂಪದಲ್ಲಿರದೆ ಡಿಜಿಟಲ್ ರೂಪದಲ್ಲಿರಬೇಕು ಎಂದು ಸಲಹೆ ನೀಡಿದ್ದರು.

ಈ ರೀತಿ ಬಂಡವಾಳಶಾಹಿ ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡುವಾಗಲೂ ಚುನಾವಣೆಯಲ್ಲಿ ಆಯ್ಕೆಗೊಂಡು ಅಧಿಕಾರದಲ್ಲಿ ಇರುವಾಗ ಅಥವಾ ಅಧಿಕಾರಕ್ಕೆ ಬಂದ ನಂತರ ತಮ್ಮ ಪರವಾದ ಮತ್ತು ತಮಗೆ ಹೆಚ್ಚು ಲಾಭ ತರುವ ನೀತಿಗಳನ್ನು, ಯೋಜನೆಗಳನ್ನು ಯಾವ ಪಕ್ಷ ಜಾರಿಗೆ ತರುತ್ತದೆ, ತಮ್ಮ ಸೈದ್ಧಾಂತಿಕ ವಿರೋಧಿಗಳ ಬೆಳವಣಿಗೆಗೆ ಹೇಗೆ ತಡೆ ಒಡ್ಡಬಹುದು ಎಂಬ ಲೆಕ್ಕಾಚಾರದಲ್ಲಿ ಅಂತಹ ರಾಜಕೀಯ ಪಕ್ಷಗಳಿಗೆ ಅತಿ ಹೆಚ್ಚು ದೇಣಿಗೆ ಕೊಡುತ್ತಾರೆ. ಅಧಿಕಾರಕ್ಕೆ ಬರುವಷ್ಟು ಸಂಸದರು/ಶಾಸಕರನ್ನು ಗೆಲ್ಲಲು ಸಾಧ್ಯವಾಗದ, ಆದರೂ ತಮ್ಮ ಪರವಾಗಿ ಶಾಸನಸಭೆಗಳಲ್ಲಿ ಕೆಲಸ ಮಾಡುವ ಪಕ್ಷಗಳಿಗೂ ಇವರು ದೇಣಿಗೆ ಕೊಡುತ್ತಾರಾದರೂ, ದೇಣಿಗೆಯ ಪ್ರಮಾಣ ಕಡಿಮೆ ಇರುತ್ತದೆ. ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ, ಬಂಡವಾಳಗಾರರು ಮಾಡುವ ಶೋಷಣೆ ವಿರುದ್ಧ ಧ್ವನಿ ಎತ್ತಿ ಹೋರಾಡುವ, ಕಮ್ಯೂನಿಸ್ಟ್ ಪಕ್ಷಗಳಿಗೆ ಇವರು ದೇಣಿಗೆ ಕೊಡುವುದಿಲ್ಲ ಮಾತ್ರವಲ್ಲ, ಕಮ್ಯೂನಿಸ್ಟರು ಇಂತಹ ಉದ್ಯಮಿಗಳ ಬಳಿ ದೇಣಿಗೆ ಕೇಳುವುದಿಲ್ಲ. ಕಮ್ಯೂನಿಸ್ಟರನ್ನು ಸೋಲಿಸಬಲ್ಲ ವಿರೋಧಿ ಪಕ್ಷಗಳು ಮತ್ತು ಅಭ್ಯರ್ಥಿಗಳಿಗೆ (ಉದಾ: ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ಪಕ್ಷಕ್ಕೆ) ಇವರು ಹೆಚ್ಚಿನ ದೇಣಿಗೆ ಕೊಡುತ್ತಾರೆ. ಸಿಪಿಎಂ ಪಕ್ಷ ಕಾರ್ಪೊರೇಟ್ ನಿಧಿಯನ್ನು ತೆಗೆದುಕೊಳ್ಳಲು ನಿರಾಕರಿಸುತ್ತದೆ. ಕಮ್ಯೂನಿಸ್ಟ್ ಪಕ್ಷಗಳು ಜನರಿಂದ ಪಕ್ಷಕ್ಕೆ ಮತ್ತು ಚುನಾವಣಾ ನಿಧಿಗೆ ಹಣ ಸಂಗ್ರಹಿಸುತ್ತವೆ. ಇದು ಸಂಪೂರ್ಣವಾಗಿ ಪಾರದರ್ಶಕವಾಗಿರುತ್ತದೆ.

ಮೋದಿ ಸರ್ಕಾರದ ಹಿಡನ್ ಅಜೆಂಡಾ

2018ರ ಜನವರಿಯಲ್ಲಿ ಚುನಾವಣಾ ಬಾಂಡ್‌ಗಳ ವಿಧಾನವನ್ನು ಪರಿಚಯಿಸಲಾಯಿತು. ಇದನ್ನು ಸಾಂವಿಧಾನಿಕ ತಿದ್ದುಪಡಿ ಅಥವಾ ವಿವರಣೆಯಿಲ್ಲದೆ ಹಣಕಾಸು ಮಸೂದೆಯಾಗಿ ತರಲಾಯಿತು. ದೇಶ, ವಿದೇಶಗಳ ದೊಡ್ಡ ಕಂಪನಿಗಳು ರಾಜಕೀಯ ಪಕ್ಷಗಳಿಗೆ ದೇಣಿಗೆ ರೂಪದಲ್ಲಿ ಹೂಡಿಕೆ ಮಾಡಲು ಈ ಮೂಲಕ ಬಾಗಿಲು ತೆರೆದಂತಾಗಿತ್ತು. ಇದಕ್ಕಾಗಿ ಹಣಕಾಸು ಕಾಯಿದೆಯು ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆಗೆ 2016ರಿಂದ ಅನ್ವಯವಾಗುವಂತೆ ತಿದ್ದುಪಡಿ ಮಾಡಿದೆ. ಹೀಗಾಗಿ ವಿದೇಶದಿಂದ ಹಣ ತೆಗೆದುಕೊಂಡರೂ ತಪ್ಪಾಗದಂತೆ ನೋಡಿಕೊಳ್ಳಲಾಗಿದೆ. ಜನರ ಪ್ರಾತಿನಿಧ್ಯ, ಕಂಪನಿಗಳ ಕಾಯಿದೆ, ಆದಾಯ ತೆರಿಗೆ ಕಾಯಿದೆ, ರಿಸರ್ವ್ ಬ್ಯಾಂಕ್ ಕಾಯಿದೆ...ಇವನ್ನೆಲ್ಲ ಹಣಕಾಸು ಕಾಯ್ದೆ ತಿದ್ದುಪಡಿ 2017ರಿಂದ ಬದಲಾಯಿಸಲಾಗಿದೆ. ಆರ್‌ಬಿಐ, ಚುನಾವಣಾ ಆಯೋಗ ಮತ್ತು ಪ್ರತಿಪಕ್ಷಗಳು ಟೀಕಾಕಾರರನ್ನು ನಿರ್ಲಕ್ಷಿಸಿ ಹಣಕಾಸು ಮಸೂದೆಯನ್ನು ಅಂಗೀಕರಿಸಿದವು. ಈ ಇಡೀ ಅಲೆ ಎಷ್ಟು ಶಸ್ತ್ರಸಜ್ಜಿತವಾಗಿದೆ ಎಂಬುದನ್ನು ನೋಡಿದರೆ ಮೋದಿ ಸರ್ಕಾರದ ಹಿಡನ್ ಅಜೆಂಡಾಗಳ ಅನುಷ್ಠಾನದ ಆಳ ಗೊತ್ತಾಗುತ್ತದೆ. ಸಿಪಿಎಂ ನಂತಹ ಎಡಪಕ್ಷಗಳು ಮೊದಲಿನಿಂದಲೂ ಈ ಯೋಜನೆ ನ್ಯಾಯಯುತವಲ್ಲ ಎಂದು ಟೀಕಿಸುತ್ತಾ ಬಂದಿವೆ. ಅವರು ಕಾರ್ಪೊರೇಟ್ ನಿಧಿಯನ್ನು ತೆಗೆದುಕೊಳ್ಳಲು ನಿರಾಕರಿಸುತ್ತಾರೆ.

ಬೇರೆ ಮೂಲಗಳಿಂದಲೂ ಹಣ ಬರುತ್ತದೆ

ವಾಸ್ತವವಾಗಿ, ಈ ರಾಜಕೀಯ ಪಕ್ಷಗಳು ಇದಷ್ಟೇ ಹಣದಿಂದ ಚುನಾವಣೆ ಮತ್ತು ಇತರ ವ್ಯವಹಾರಗಳನ್ನು ನಡೆಸುತ್ತಿವೆ ಎಂದು ಭಾವಿಸುವುದು ತಪ್ಪು. ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ (ಎಡಿಆರ್) 2019 ರ ಚುನಾವಣೆಯ ಒಟ್ಟು ವೆಚ್ಚವು ದೇಶಾದ್ಯಂತ ರೂ. 55,000 ಕೋಟಿಗಳಿಂದ ರೂ. 60,000 ಕೋಟಿಗಳವರೆಗೆ ಇರುತ್ತದೆ ಎಂದು ಅಂದಾಜಿಸಿದೆ. ಇದರಲ್ಲಿ ಹೆಚ್ಚಿನವು ಲೆಕ್ಕಕ್ಕೆ ಸಿಗದ ನಗದು, ಪ್ರಚಾರ ಸಾಮಗ್ರಿಗಳು, ವಿವಿಧ ಮಾಧ್ಯಮಗಳಲ್ಲಿನ ಪ್ರಚಾರ ವೆಚ್ಚಗಳು ಇತ್ಯಾದಿಗಳು ಈ ಬಾಂಡ್ ಗಳ ಮೊತ್ತವನ್ನು ತೋರಿಸುತ್ತವೆ. ಭಾರತೀಯ ಚುನಾವಣಾ ಆಯೋಗಕ್ಕೆ ಬಿಜೆಪಿ ಸಲ್ಲಿಸಿರುವ ಸಲ್ಲಿಕೆಗಳು 2019 ರ ಹಣಕಾಸು ವರ್ಷದಲ್ಲಿ ಪಕ್ಷವು 800 ಕೋಟಿ ರೂಪಾಯಿಗಳನ್ನು ಮೇ ತಿಂಗಳಲ್ಲಿ ಲೋಕಸಭೆ ಚುನಾವಣೆಗೆ ಮೊದಲು ಸಂಗ್ರಹಿಸಿದ್ದರೆ, ಕಾಂಗ್ರೆಸ್ ಪಕ್ಷವು 146 ಕೋಟಿ ರೂಪಾಯಿಗಳನ್ನು ಸಂಗ್ರಹಿಸಿದೆ ಎಂದು ಬಿಸಿನೆಸ್ ಟುಡೇ ವರದಿ ತಿಳಿಸಿದೆ. ಆದಾಗ್ಯೂ, 2018-19ನೇ ಹಣಕಾಸು ವರ್ಷದಲ್ಲಿ ಪಕ್ಷವು 20,000 ರೂ. ಗಿಂತ ಹೆಚ್ಚಿನ ದೇಣಿಗೆಯಲ್ಲಿ 743 ಕೋಟಿ ರೂ. ಗಳನ್ನು ಪಡೆದಿದೆ ಎಂದು ಹಿಂದೂಸ್ತಾನ್ ಟೈಮ್ಸ್ ವರದಿ ಮಾಡಿದೆ.

ಕಾರ್ಪೋರೇಟ್ ಕಂಪನಿಗಳ ಪರವಾದ ನೀತಿಗಳೆ ಬ್ಯಾಡಗಿ ಮಾರುಕಟ್ಟೆಯ ದುರ್ಘಟನೆಗೆ ಕಾರಣ-ಸಿಪಿಐ(ಎಂ)

ಕಳೆದೆರಡು ದಿನಗಳ ಹಿಂದೆ ಹಾವೇರಿ ಜಿಲ್ಲೆ ಬ್ಯಾಡಗಿ ಎಪಿಎಂಸಿ ಮಾರುಕಟ್ಟೆಯಲ್ಲಿ ನಡೆದ ದುರ್ಘಟನೆಗೆ ಒಕ್ಕೂಟ (ಕೇಂದ್ರ) ಸರಕಾರದ ಕಾರ್ಪೋರೇಟ್ ಕಂಪನಿಗಳ ಪರವಾದ ನೀತಿಗಳೇ ಕಾರಣವಾಗಿದೆಯೆಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸವಾದಿ) ಬಲವಾಗಿ ಖಂಡಿಸುತ್ತದೆ. ಸದರಿ ಒಟ್ಟು ಪ್ರಕರಣವನ್ನು ಸಮಗ್ರ ತನಿಖೆಗೆ ಅಗತ್ಯ ಕ್ರಮವಹಿಸಬೇಕೆಂದು ಸಿಪಿಐ(ಎಂ) ರಾಜ್ಯ ಸರಕಾರವನ್ನು ಆಗ್ರಹಿಸಿದೆ.

ಎಪಿಎಂಸಿ ಬ್ಯಾಡಗಿಯಲ್ಲಿ ಉದ್ರಿಕ್ತರ ಗುಂಪು ಆಸ್ತಿ ಪಾಸ್ತಿಗಳಿಗೆ ಉಂಟು ಮಾಡಿದ ಹಾನಿಯನ್ನು ಸಿಪಿಐ(ಎಂ) ಒಪ್ಪುವುದಿಲ್ಲ ಎಂದಿದೆ.

ಆದರೆ ರೈತರ ಆಕ್ರೋಶಕ್ಕೆ ಕಾರಣವಾದ ಅಂಶಗಳನ್ನು ಸರಕಾರ ಕೂಲಂಕುಶವಾಗಿ ಗಮನಿಸಬೇಕು ಎಂದಿದೆ.

ರೈತರ ಉದ್ರಿಕ್ತತೆಯ ಹಿಂದೆ ಬೆಲೆ ಕುಸಿತ ಕಾರ್ಯ ನಿರ್ವಹಿಸಿರುವ ಸಾಧ್ಯತೆಗಳಿವೆ ಎಂಬುದನ್ನು ಸರಕಾರ ಗಮನಿಸಲು ಒತ್ತಾಯಿಸಿದೆ.

ಕಳೆದ 2023 ರಲ್ಲಿ ಗುಂಟೂರು ಮೆಣಸಿನಕಾಯಿ ದರ ಕ್ವಿಂಟಾಲ್ ಒಂದಕ್ಕೆ 25,000 ರೂಗಳಿದ್ದದ್ದು ಈಗದು 15,000 ರೂಗಳಿಗೆ ಕುಸಿದಿದೆ. ಅದೇ ರೀತಿ, ಬ್ಯಾಡಿಗಿ ಕಡ್ಡಿಗಾಯಿ ಕಳೆದ ವರ್ಷ 40,000 ರೂಗಳಿಂದ 45,000 ರೂಗಳಿದ್ದದ್ದು, ಈ ವರ್ಷ ಅದು 8,000 ರಿಂದ 10,000 ರೂಗಳಿಗೆ ಕುಸಿದಿದೆ. ಹಾಗೆ ಬ್ಯಾಡಗಿ ಡಬ್ಬಾ ಕಾಯಿ ಕಳೆದ ವರ್ಷ 60,000 ರಿಂದ 70,000 ರೂಗಳಷ್ಟಿದ್ದದ್ದು ಈ ವರ್ಷ ಅದು 6000 ರಿಂದ 8,000 ರೂಗಳಿಗೆ ಕುಸಿದಿದೆ. ಈ ಬೆಲೆ ಕುಸಿತವು ರೈತರನ್ನು ತೀವ್ರ ಚಿಂತಾಕ್ರಾಂತರನ್ನಾಗಿಸಿದೆ.

ಮಾಹಿತಿಯಂತೆ ಪ್ರತಿ ಎಕರೆಗೆ ರೈತರು 1.5 ಲಕ್ಷ ರೂಗಳಿಂದ 2 ಲಕ್ಷ ರೂಗಳವರೆಗೆ ಹೂಡಿಕೆ ಮಾಡುತ್ತಿದ್ದಾರೆ. ಈ ವರ್ಷ ಇಳುವರಿಯು ನೀರಾವರಿ ಪ್ರದೇಶದಲ್ಲಿ ತಲಾ ಎಕರೆಗೆ ಸರಾಸರಿ 6 ರಿಂದ 10 ಕ್ವಿಂಟಾಲ್ ಬಂದಿದೆ ಎನ್ನಲಾಗಿದೆ. ಹೀಗಾದಲ್ಲಿ ತಲಾ ಎಕರೆಗೆ ಹೂಡಿಕೆಯ



ಭೇಟಿ ನೀಡಿದ ಸಿಪಿಐ(ಎಂ) ನಿಯೋಗ

ಬಡ್ಡಿಯು ಬಾರದೆಂಬ ಆತಂಕವು ರೈತರನ್ನು ಉದ್ರಿಕ್ತರನ್ನಾಗಿಸಿದೆ.

ಕೃಷ್ಣಾ ಹಾಗೂ ತುಂಗ ಭದ್ರ ಅಚ್ಚುಕಟ್ಟು ಪ್ರದೇಶದ ಲಕ್ಷಾಂತರ ಎಕರೆಗಳಲ್ಲಿನ ಈ ಬೆಳೆಯು ಅಂದಾಜಿನಂತೆ ರೈತರಿಗೆ 15 ಸಾವಿರ ಕೋಟಿ ರೂಗಳಿಗೂ ಅಧಿಕ ಮೊತ್ತದ ನಷ್ಟವನ್ನುಂಟು ಮಾಡಿದೆ.

ಈ ಸಂದರ್ಭವನ್ನು ಕೆಲವು ಕಿಡಿಗೇಡಿಗಳು ಲೂಟಿಗೆ ಬಳಸಿಕೊಂಡಿರುವ ಸಂಭವಗಳಿವೆ. ಕಿಡಿಗೇಡಿಗಳ ದುಷ್ಕೃತ್ಯ ತೀವ್ರ ಖಂಡನೀಯವಾಗಿದೆ. ಇವರ ಮೇಲೆ ಕಠಿಣ ಕಾನೂನಿನ ಕ್ರಮವಹಿಸಲು ಸಿಪಿಐ(ಎಂ) ಒತ್ತಾಯಿಸಿದೆ.

ಡಾ. ಎಂ.ಎಸ್. ಸ್ವಾಮಿನಾಥನ್ ಕೃಷಿ ಆಯೋಗದ ಸಲಹೆಯಂತೆ ಕನಿಷ್ಠ ಬೆಂಬಲ ಬೆಲೆ ಘೋಷಣೆಯ ಇಲ್ಲವಾಗಿದೆ.

ರೈತರ ಈ ಸಂಕಷ್ಟಕ್ಕೆ ಬೆಲೆಗಳನ್ನು ತಮ್ಮ ಲಾಭಕ್ಕೆ ತಕ್ಕಂತೆ ಏರಿಳಿತ ಮಾಡಿ ಲೂಟಿ ಮಾಡುವ ಕಾರ್ಪೋರೇಟ್ ವ್ಯಾಪಾರಿಗಳ ದುಷ್ಕೃತನವೇ ಕಾರಣವಾಗಿದೆ. ಈ ಕಾರ್ಪೋರೇಟ್ ಸಂಸ್ಥೆಗಳು ಬೆಲೆಗಳನ್ನು ಏರಿಳಿತ ಮಾಡಿ ಲೂಟಿ ಮಾಡಲು ಅವಕಾಶ ನೀಡಿರುವ ಕೇಂದ್ರ ಸರಕಾರವೇ ಈ ದುರಂತಕ್ಕೆ ನೇರ ಹೊಣೆಗಾರನಾಗಿದೆ.

ಒಣ ಮೆಣಸಿನಕಾಯಿ ಬೆಳೆಗಾರರನ್ನು ಗುರುತಿಸಿ ಈ ಬೆಲೆ ಕುಸಿತಕ್ಕೆ ತಲಾ ಎಕರೆಗೆ ಕನಿಷ್ಠ 50,000 ರೂಗಳ ಪರಿಹಾರವನ್ನು ಒಕ್ಕೂಟ ಸರಕಾರ ಘೋಷಿಸಬೇಕು. ಕನಿಷ್ಠ ಬೆಂಬಲಬೆಲೆಯನ್ನು ಘೋಷಿಸಿ ಖರೀದಿಸಲು ಅಗತ್ಯ ಕ್ರಮವಹಿಸುವಂತೆ ಸಿಪಿಐ(ಎಂ) ಒತ್ತಾಯಿಸಿದೆ.

ಸಂವಿಧಾನ ವಿರೋಧಿ ಹಿಂದುತ್ವ ರಾಷ್ಟ್ರದ ಚಲನೆ ನಿಲ್ಲಲಿ

ನಾಗರಾಜ ನಂಜುಂಡಯ್ಯ

ಲೋಕಸಭಾ ಚುನಾವಣೆಯತ್ತ– ಲೇಖನ–2

ಮೋದಿ ಸರ್ಕಾರದ ಕಳೆದ 10 ವರ್ಷಗಳ ಆಡಳಿತದ ಅವಧಿಯಲ್ಲಿ, ಸಂವಿಧಾನದ ಪ್ರಮುಖ ಆಧಾರ ಸ್ತಂಭ ಜಾತ್ಯಾತೀತ ಸ್ವರೂಪದ ಮೇಲೆ ಗಂಭೀರವಾದ ಆಕ್ರಮಣವನ್ನು ನಡೆಸಲಾಗುತ್ತಿದೆ, ಮತ್ತು ಭಾರತೀಯ ಪ್ರಭುತ್ವವನ್ನು ಕೋಮುವಾದಿ ಗೊಳಿಸುವ ಕ್ರಮಗಳತ್ತ ಸಾಗುತ್ತಿದೆ.

ಬಿಜೆಪಿ–ಆರ್.ಎಸ್.ಎಸ್. ಅಲ್ಪಸಂಖ್ಯಾತರನ್ನು, ವಿಶೇಷವಾಗಿ ಮುಸ್ಲಿಂ ಸಮುದಾಯವನ್ನು ಗುರಿಯಾಗಿಟ್ಟುಕೊಂಡು ಅವರನ್ನು ದ್ವಿತೀಯ ದರ್ಜೆಯ ನಾಗರಿಕರನ್ನಾಗಿ ಪರಿವರ್ತಿಸುವ ಮೂಲಕ ಹಿಂದುತ್ವ ಕೋಮುವಾದಿ ಸಿದ್ಧಾಂತವನ್ನು ಜಾರಿಗೆ ತರಲು ಪ್ರಯತ್ನಿಸುತ್ತಿವೆ. ಬಿಜೆಪಿ ಆಡಳಿತದಲ್ಲಿರುವ ರಾಜ್ಯ ಸರ್ಕಾರಗಳ ಪ್ರೋತ್ಸಾಹ ಮತ್ತು ರಕ್ಷಣೆಯೊಂದಿಗೆ ವಿವಿಧ ಹಿಂದುತ್ವ ಸಂಘಟನೆಗಳು ಅಲ್ಪಸಂಖ್ಯಾತರ ವಿರುದ್ಧ ಹಿಂಸಾಚಾರವನ್ನು ಬಿಚ್ಚಿಟ್ಟಿವೆ. ಇವೆಲ್ಲವೂ ಸಂವಿಧಾನದಲ್ಲಿ ಹುದುಗಿರುವ ಜಾತ್ಯಾತೀತ ತತ್ವದ ಮೇಲೆ ಘೋರ ದಾಳಿಯಾಗಿದೆ ಮತ್ತು ಬಿಜೆಪಿ ಮತ್ತೆ ಅಧಿಕಾರಕ್ಕೆ ಬಂದರೆ ಹಿಂದುತ್ವ ರಾಷ್ಟ್ರ ಆರಂಭದ ಎಚ್ಚರಿಕೆ ಇದಾಗಿದೆ.

ಪ್ರಭುತ್ವವನ್ನು ಜಾತ್ಯಾತೀತ ರಹಿತ ಮಾಡುವುದು

ಜನವರಿ 22, 2024 ರಂದು ಅಯೋಧ್ಯೆಯಲ್ಲಿ ರಾಮ ಮಂದಿರದ ಉದ್ಘಾಟನೆ ಒಂದು ಮಹತ್ವದ ತಿರುವು. ಪ್ರಧಾನ ಮಂತ್ರಿಯವರೆ, ಸ್ವತಃ ಪ್ರಧಾನ ಪೂಜಾ ಅರ್ಚಕರಾಗಿ ಕಾರ್ಯನಿರ್ವಹಿಸುವ ಮೂಲಕ ಪ್ರಭುತ್ವವೇ ಪ್ರಾಯೋಜಿತ ಮಾಡಿದ ಸಮಾರಂಭವಾಗಿತ್ತು. ಇದು ರಾಜ್ಯ ಮತ್ತು ಧರ್ಮದ ವಿಲೀನವನ್ನು ಸಂಕೇತಿಸುತ್ತದೆ. ಇದು ಎಲ್ಲಾ ಇತರ ಧಾರ್ಮಿಕ ನಂಬಿಕೆಗಳ ಮೇಲೆ ಹಿಂದುತ್ವ ಹೇರಿಕೆಯ ಮೂಲಕ ಸಂವಿಧಾನದ ಜಾತ್ಯತೀತ ಮೂಲಭೂತ ತತ್ವದ ಉಲ್ಲಂಘನೆಯನ್ನು ಸ್ಪಷ್ಟಗೊಳಿಸಿದೆ.

ರಾಮಮಂದಿರದ ಪ್ರತಿಷ್ಠಾಪನೆಯ ಬಗ್ಗೆ ಕ್ಯಾಬಿನೆಟ್ ಮತ್ತು ಸಂಸತ್ತಿನಲ್ಲಿ ಕೈಗೊಂಡ ನಿರ್ಣಯವು ಸೇರಿಕೊಂಡಂತೆ, ರಾಮ ಮಂದಿರ ದೇವಾಲಯವನ್ನು "ರಾಷ್ಟ್ರೀಯ ಪ್ರಜ್ಞೆಯ ಸಂಕೇತ" ಮತ್ತು "ರಾಷ್ಟ್ರೀಯ ಅಭಿವೃದ್ಧಿ ಪಯಣದಲ್ಲಿ ಮರೆಯಲಾಗದ ಕ್ಷಣ" ಎಂದು ಬಣ್ಣಿಸಲಾಗಿದೆ. ಹೀಗಾಗಿ, ಧಾರ್ಮಿಕ ಪೂಜಾ ಸ್ಥಳವನ್ನು "ಭಾರತದ ದೃಷ್ಟಿಯಲ್ಲಿ ತತ್ವಶಾಸ್ತ್ರ ಮಾರ್ಗ" ದ ಸಂಕೇತವಾಗಿ ಉನ್ನತೀಕರಿಸಲಾಗಿದೆ. ಆ ಮೂಲಕ ಬಿಜೆಪಿ ತನ್ನ ಆಡಳಿತವನ್ನು ದುರುಪಯೋಗ ಮಾಡಿಕೊಂಡಿದೆ.

ಆರ್.ಎಸ್.ಎಸ್. ಮತ್ತು ಹಿಂದುತ್ವ ಶಕ್ತಿಗಳು ಕಾಶಿಯ ಜ್ಞಾನವಾಪಿ ಮಸೀದಿ ಮತ್ತು ಮಥುರಾದ ಈದ್ಗಾವನ್ನು ದೇವಾಲಯಗಳನ್ನಾಗಿ ಪರಿವರ್ತಿಸುವ ಕೆಲಸ ಮಾಡುತ್ತಿವೆ. ಇದನ್ನು ಆಡಳಿತಾತ್ಮಕ ಮತ್ತು ನ್ಯಾಯಾಂಗದ ಸಹಕಾರದೊಂದಿಗೆ ಮತ್ತು ಪೂಜಾ ಸ್ಥಳಗಳ (ವಿಶೇಷ ನಿಬಂಧನೆಗಳು) ಕಾಯಿದೆ 1991 ಅನ್ನು ಉಲ್ಲಂಘಿಸುವ ಮೂಲಕ ಕೈಗೊಳ್ಳಲಾಗುತ್ತಿದೆ.

ಪೌರತ್ವವು ಧಾರ್ಮಿಕ ಅಸ್ಮಿತೆಯೊಂದಿಗೆ ಸೇರ್ಪಡೆ

ಮೋದಿ ಸರ್ಕಾರವು ಡಿಸೆಂಬರ್ 2019 ರಲ್ಲಿ ಸಂಸತ್ತಿನಲ್ಲಿ ಪೌರತ್ವ (ತಿದ್ದುಪಡಿ) ಕಾಯ್ದೆಯನ್ನು ಅಂಗೀಕರಿಸಿದೆ. ಇದು ಪೌರತ್ವದ ಜಾತ್ಯತೀತ ಪರಿಕಲ್ಪನೆಯನ್ನು ಉಲ್ಲಂಘಿಸುವ, ಧಾರ್ಮಿಕ ಅಸ್ಮಿತೆಯ ಪೌರತ್ವವಾಗಿ ರೂಪುಗೊಂಡಿದೆ ಕಾನೂನು ದಾಖಲಾತಿಗಳಿಲ್ಲದೆ ನೆರೆಯ ದೇಶಗಳಿಂದ ವಲಸೆ ಬಂದಿರುವ ಅಕ್ರಮ ಜನರಿಗೆ ಅವರು ಹಿಂದೂ, ಸಿಖ್, ಬೌದ್ಧ ಅಥವಾ ಕ್ರಿಶ್ಚಿಯನ್ ಧರ್ಮಗಳಿಗೆ ಸೇರಿದವರಾಗಿದ್ದರೆ, ಪೌರತ್ವವನ್ನು ನೀಡಲಾಗುತ್ತದೆ, ಆದರಲ್ಲಿ ಮುಸ್ಲಿಂರಿಗೆ ಮಾತ್ರ ಇಲ್ಲ. ಇದನ್ನು ಲೋಕಸಭೆ ಚುನಾವಣೆಯ ಅಧಿಸೂಚನೆಗೆ ಕೆಲವೇ ದಿನಗಳ ಮೊದಲು ಈ ಕಾಯ್ದೆಯಡಿ



ಕೃಪೆ: ಸತೀಶ್ ಆಚಾರ್ಯ

ನಿಯಮಗಳನ್ನು ಮಾರ್ಚ್ 11, 2024 ರಂದು ಅಧಿಸೂಚಿಸಲಾಗಿದೆ. ಸಿಎಎ ಜೊತೆಗೆ, ಮೋದಿ ಸರ್ಕಾರವು ಜನಗಣತಿ ಸಮೀಕ್ಷೆಯಲ್ಲಿ ರಾಷ್ಟ್ರೀಯ ಜನಸಂಖ್ಯಾ ನೋಂದಣಿಯನ್ನು ನವೀಕರಿಸಲು ಬಯಸುತ್ತದೆ ಮತ್ತು ನಾಗರಿಕರ ರಾಷ್ಟ್ರೀಯ ನೋಂದಣಿಯನ್ನು ರಚಿಸಲು ಬಯಸುತ್ತದೆ, ಇದರಲ್ಲಿ ಭಾರತದಲ್ಲಿ ವಾಸಿಸುವ ನಾಗರಿಕರ ಪೂರ್ವಾಪರವನ್ನು ಪರಿಶೀಲಿಸಲು ಅಧಿಕಾರಿಗಳಿಗೆ ಅಧಿಕಾರವನ್ನು ನೀಡಲಾಗುತ್ತದೆ, ಅಲ್ಲಿ ಮತ್ತೆ ಅಲ್ಪಸಂಖ್ಯಾತರಿಗೆ ಸೇರಿದ ನಾಗರಿಕರು ಪರಿಶೀಲನೆಗೆ ಒಳಪಡುತ್ತಾರೆ.

ಅಲ್ಪಸಂಖ್ಯಾತ ವಿರೋಧಿ ಕಾನೂನುಗಳು

ವಿವಿಧ ರಾಜ್ಯ ಸರ್ಕಾರಗಳು ಅಲ್ಪಸಂಖ್ಯಾತರನ್ನು ಗುರಿಯಾಗಿಸುವ ಕಾನೂನುಗಳನ್ನು ಜಾರಿಗೆ ತಂದಿವೆ. ಅವುಗಳಲ್ಲಿ ಉತ್ತರ ಪ್ರದೇಶ, ಮಧ್ಯಪ್ರದೇಶ, ಹರಿಯಾಣ, ಮಹಾರಾಷ್ಟ್ರ ಮತ್ತು ಕರ್ನಾಟಕದಂತಹ ರಾಜ್ಯಗಳಲ್ಲಿ ಗೋಹತ್ಯೆ ವಿರೋಧಿ ಕಾನೂನುಗಳಿವೆ; ಬಲವಂತದ ಧಾರ್ಮಿಕ ಮತಾಂತರಗಳ ವಿರುದ್ಧ ಮತ್ತು ಲವ್ ಜಿಹಾದ್ ಎಂದು ಕರೆಯಲ್ಪಡುವ ವಿರುದ್ಧ ಕಾನೂನುಗಳು. ಉತ್ತರ ಪ್ರದೇಶ, ಗುಜರಾತ್, ಹರಿಯಾಣ, ಛತ್ತೀಸ್‌ಗಢ, ಹಿಮಾಚಲ ಪ್ರದೇಶ, ಜಾರ್ಖಂಡ್, ಕರ್ನಾಟಕ ಮತ್ತು ಉತ್ತರಾಖಂಡದಲ್ಲಿ ಇಂತಹ ಕಾನೂನುಗಳನ್ನು ಜಾರಿಗೆ ತರಲಾಗಿದೆ.

ಮುಸ್ಲಿಮರ ವಿರುದ್ಧ ವಿಶೇಷವಾಗಿ ದನದ ವ್ಯಾಪಾರ ಮತ್ತು ಮಾಂಸ ಮಾರಾಟದಲ್ಲಿ ತೊಡಗಿರುವವರ ವಿರುದ್ಧ ಈ ಕಾನೂನುಗಳನ್ನು ಬಳಸಲಾಗುತ್ತದೆ. ಉತ್ತರ ಪ್ರದೇಶದಂತಹ ರಾಜ್ಯದಲ್ಲಿ ಅಂತರ್ ಧರ್ಮೀಯ ವಿವಾಹಗಳಿಗಾಗಿ ಹಲವಾರು ಯುವಕರನ್ನು ಬಂಧಿಸಲಾಗಿದೆ.

ಉತ್ತರಾಖಂಡವು ಏಕರೂಪ ನಾಗರಿಕ ಸಂಹಿತೆಯನ್ನು (UCC) ಅಳವಡಿಸಿಕೊಂಡಿದೆ, ಇದು ಬಹುಸಂಖ್ಯಾತ ಸ್ವಭಾವವಾಗಿದೆ ಮತ್ತು ಏಕರೂಪ ಅಥವಾ ನಾಗರಿಕವಲ್ಲ. ಬಿಜೆಪಿ ಆಡಳಿತವಿರುವ ಇತರ ರಾಜ್ಯಗಳಲ್ಲಿ ಇಂತಹ ಕೋಡ್‌ಗಳನ್ನು ಅಳವಡಿಸಿಕೊಳ್ಳಲು ಬಿಜೆಪಿ ಯೋಜಿಸಿದೆ.

ದ್ವಿತೀಯ ದರ್ಜೆಯ ನಾಗರಿಕರು

ಮುಸ್ಲಿಮರ ಜೀವನೋಪಾಯದ ಸಾಧನಗಳಾದ ಜಾನುವಾರು ವ್ಯಾಪಾರ, ಮಾಂಸದ ಅಂಗಡಿಗಳು– ಅವರನ್ನು ಗೋಹತ್ಯೆ ಅಥವಾ ಗೋಮಾಂಸ ಮಾರಾಟ ಎಂದು ಆರೋಪಿಸುತ್ತಾರೆ. ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ ಜಾರಿಗೆ ತಂದ ಕಾನೂನುಗಳನ್ನು ನಂತರ ಜಾನುವಾರು ಮತ್ತು ಮಾಂಸ ವ್ಯಾಪಾರವನ್ನು ನಿಷೇಧಿಸುವಂತೆ ಒತ್ತಾಯ ಮಾಡಲಾಗುತ್ತದೆ.

ಮಧ್ಯಪ್ರದೇಶ (ಇಂಧೋರ್), ರಾಜಸ್ಥಾನ ಮತ್ತು ಉತ್ತರಪ್ರದೇಶದಲ್ಲಿ ಮಾರಾಟಗಾರರು ಅಥವಾ ಆಟೋ–ರಿಕ್ಷಾ ಚಾಲಕರಾಗಿ ತಮ್ಮ ವ್ಯಾಪಾರವನ್ನು ನಡೆಸುತ್ತಿರುವ ಮುಸ್ಲಿಮರ ಮೇಲೆ ದಾಳಿ ನಡೆಸಲಾಗಿದೆ, ಇದರಿಂದಾಗಿ ಅವರು ತಮ್ಮ ಜೀವನೋಪಾಯವನ್ನು ತ್ಯಜಿಸುವಂತಾಗಿದೆ.

ಉತ್ತರ ಪ್ರದೇಶ, ಹರಿಯಾಣ, ದೆಹಲಿ ಮತ್ತು ಮಧ್ಯಪ್ರದೇಶದಂತಹ ರಾಜ್ಯಗಳಲ್ಲಿ, ಆಪಾದಿತ ಅಪರಾಧದ ಆರೋಪಿ ಮುಸ್ಲಿಮರ ಮನೆಗಳನ್ನು ಬುಲ್ಡೋಜ್ ಮಾಡುವುದು ಸಾಮಾನ್ಯ ಘಟನೆಯಾಗಿದೆ. ಉದಾಹರಣೆಗೆ, ಹರಿಯಾಣ ಆಡಳಿತದಿಂದ 1,208 ಕಟ್ಟಡಗಳನ್ನು ಕೆಡವಲಾಯಿತು.

ಅಲ್ಪಸಂಖ್ಯಾತರ ಮೇಲೆ ಹಿಂಸೆ ಮತ್ತು ಕಿರುಕುಳ

ಜಾನುವಾರುಗಳನ್ನು ಸಾಗಿಸುತ್ತಿದ್ದಾರೆ ಅಥವಾ ಶಂಕಿತ ಗೋಮಾಂಸವನ್ನು ಸಾಗಿಸುತ್ತಿದ್ದಾರೆ ಎಂದು ಆರೋಪಿಸಿ ಗುಂಪುಗಳಿಂದ ಹಲ್ಲೆಗಳು ನಿತ್ಯದ ಘಟನೆಯಾಗಿವೆ. 2015 ರಲ್ಲಿ ದಾದ್ರಿಯಲ್ಲಿ (ಉತ್ತರ ಪ್ರದೇಶ) ಮೊಹಮ್ಮದ್ ಅಖ್ಲಾಕ್ ಅವರ ಮೊದಲ ಗುಂಪು ಹತ್ಯೆಯ ನಂತರ, ಗುಂಪು ಹತ್ಯೆಗಳು ಹೆಚ್ಚಾಗುತ್ತಿವೆ. ಉದಾಹರಣೆಗೆ, 2019 ರಲ್ಲಿ 107 ಗುಂಪು ಹತ್ಯೆಯ ಘಟನೆಗಳು ಪತ್ರಿಕೆಗಳಲ್ಲಿ ವರದಿಯಾಗಿವೆ. 2017 ರಲ್ಲಿ ಗುಂಪು ಹತ್ಯೆಗಳು ಮತ್ತು ದ್ವೇಷದ ಅಪರಾಧದ ಅಂಕಿಅಂಶಗಳ ಸಂಗ್ರಹವನ್ನು ನಿಲ್ಲಿಸಿದ ಯಾವುದೇ ಅಧಿಕೃತ ದಾಖಲೆಗಳಿಲ್ಲ. ಆದಾಗ್ಯೂ, ದ್ವೇಷ ಭಾಷಣದ ಪ್ರಕರಣಗಳನ್ನು ಸಂಗ್ರಹಿಸುವ ಮೂಲಕ ಮತ್ತು ಧರ್ಮ, ಜನಾಂಗ ಮತ್ತು ಸ್ಥಳದ ಆಧಾರದ ಮೇಲೆ ಗುಂಪುಗಳ ನಡುವೆ ದ್ವೇಷವನ್ನು ಉತ್ತೇಜಿಸುವ ಇತರ ಕೃತ್ಯಗಳ ಮೂಲಕ ಕೆಲವು ಅಂಕಿ ಅಂಶಗಳು ಅಸ್ತಿತ್ವದಲ್ಲಿವೆ. ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ (ಎನ್.ಸಿ.ಆರ್.ಬಿ.) ಯಿಂದ ಐಪಿಸಿ ಸೆಕ್ಷನ್ 153ಎ ಅಡಿಯಲ್ಲಿ ಜನನವನ್ನು ನೋಂದಾಯಿಸಲಾಗಿದೆ. 2021 ರಲ್ಲಿ ಅಂತಹ 993 ಪ್ರಕರಣಗಳು ಇದ್ದವು ಎಂದು ಅದು ತೋರಿಸುತ್ತದೆ ಅದು 2022 ರಲ್ಲಿ 1,444 ಕ್ಕೆ ಏರಿದೆ–44 ಪ್ರತಿಶತದಷ್ಟು ಹೆಚ್ಚಾಗಿದೆ.

ರಾಮನವಮಿ ಮೆರವಣಿಗೆಗಳು ಮುಸ್ಲಿಮರ ವಿರುದ್ಧ ಕೋಮು ಹಿಂಸಾಚಾರವನ್ನು ಪ್ರಚೋದಿಸುವ ಮತ್ತೊಂದು ಮಾರ್ಗವಾಗಿದೆ. ಇಂತಹ ಮೆರವಣಿಗೆಗಳನ್ನು ಅಲ್ಪಸಂಖ್ಯಾತರ ಜನಸಂಖ್ಯೆ ವಾಸಿಸುವ ಪ್ರದೇಶಗಳಲ್ಲಿ ಉದ್ದೇಶಪೂರ್ವಕವಾಗಿಯೇ ಹಾದು ಹೋಗುತ್ತವೆ. ಮಸೀದಿಗಳ ಹೊರಗೆ ಜೋರಾಗಿ ಸಂಗೀತ ಮತ್ತು ಆಕ್ಷೇಪಾರ್ಹ ಘೋಷಣೆಗಳನ್ನು ಕೂಗಲಾಗುತ್ತದೆ ಮತ್ತು ಘರ್ಷಣೆಗಳನ್ನು ವಿನ್ಯಾಸಗೊಳಿಸಲಾಗಿದೆ. ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ ಇಂತಹ ಘರ್ಷಣೆಗಳು ಪೊಲೀಸರು ಮುಸಲ್ಮಾನರನ್ನು ಬಂಧಿಸಿ ಜೈಲಿಗಟ್ಟಲು ನೆಪವಾಗುತ್ತದೆ. 2022 ಮತ್ತು 2023 ರಲ್ಲಿ, ರಾಮ ನವಮಿ ಸಮಯದಲ್ಲಿ, ಬಿಹಾರ, ಮಹಾರಾಷ್ಟ್ರ, ಉತ್ತರ ಪ್ರದೇಶ, ಮಧ್ಯಪ್ರದೇಶ, ರಾಜಸ್ಥಾನ, ಗುಜರಾತ್ ಮತ್ತು ಛತ್ತೀಸ್‌ಗಢ ದಲ್ಲಿ ಇಂತಹ ಹಿಂಸಾಚಾರ ಸಂಭವಿಸಿದೆ.

ಕ್ರಿಶ್ಚಿಯನ್ ಅಲ್ಪಸಂಖ್ಯಾತರನ್ನೂ ಗುರಿಯಾಗಿರಿಸಿಕೊಳ್ಳಲಾಗಿದೆ. ಯುನೈಟೆಡ್ ಕ್ರಿಶ್ಚಿಯನ್ ಫೋರಮ್ (UCF) ಪ್ರಕಾರ, 2023 ರಲ್ಲಿ, ಚರ್ಚ್ ಗಳು, ಪಾದ್ರಿಗಳು ಮತ್ತು ಅವರ ಸಭೆಗಳ ಮೇಲೆ 720 ದಾಳಿಗಳು ನಡೆದಿವೆ. ಇದು 2014 ರಲ್ಲಿ 147 ಇಂತಹ ದಾಳಿಗಳಿಗೆ ಹೋಲಿಸಿದರೆ 2021 ರಲ್ಲಿ 505 ಮತ್ತು 2022 ರಲ್ಲಿ 509 ದಾಳಿಗಳು ನಡೆದಿವೆ.

ಶೈಕ್ಷಣಿಕ ವ್ಯವಸ್ಥೆಯನ್ನು ಮರು ರೂಪಿಸುವುದು

ಕೇಂದ್ರ ಮತ್ತು ರಾಜ್ಯ ಸರ್ಕಾರದ ಮಟ್ಟದಲ್ಲಿ ಶಾಲೆಗಳಿಗೆ ಇತಿಹಾಸ ಪಠ್ಯಪುಸ್ತಕಗಳನ್ನು ಪುನಃ ಬರೆಯುವ ವ್ಯವಸ್ಥಿತ ಪ್ರಯತ್ನಗಳು ನಡೆಯುತ್ತಿವೆ. ರಾಷ್ಟ್ರೀಯ ಶಿಕ್ಷಣ ನೀತಿಯ ನೆಪದಲ್ಲಿ ಧಾರ್ಮಿಕ ಮೌಲ್ಯಗಳು ಮತ್ತು ಹಿಂದುತ್ವ ಸಿದ್ಧಾಂತವನ್ನು ಪಠ್ಯಕ್ರಮದಲ್ಲಿ ಅಳವಡಿಸಲು ಯತ್ನಿಸಲಾಗುತ್ತಿದೆ. ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ ಮದರಸಾ ಸೇರಿದಂತೆ ಅಲ್ಪಸಂಖ್ಯಾತರು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳ ಮೇಲೆ ದಾಳಿ ನಡೆದಿದೆ.

ಹಿಂದುತ್ವ ರಾಷ್ಟ್ರದತ್ತ ಚಲನೆ

ಬಿಜೆಪಿಯ ಆರ್.ಎಸ್.ಎಸ್. ಆಡಳಿತದಲ್ಲಿ, ಜಾತ್ಯತೀತ ತತ್ವಗಳ ಮೇಲೆ ಸರ್ವಾಂಗೀಣ ದಾಳಿಗಳು ನಡೆಯುತ್ತಿವೆ, ಅದು ಸಾಂವಿಧಾನಿಕ ಮೌಲ್ಯಗಳು ಅಥವಾ ರಾಜ್ಯದ ಯಾವುದೇ ಧರ್ಮಕ್ಕೆ ಆದ್ಯತೆ ನೀಡುವುದಿಲ್ಲ ಅಥವಾ ಅಲ್ಪಸಂಖ್ಯಾತರ ಹಕ್ಕುಗಳನ್ನು ಖಾತರಿಪಡಿಸುವುದಿಲ್ಲ. ಸೈದ್ಧಾಂತಿಕ, ಆಡಳಿತಾತ್ಮಕ ಮತ್ತು ಸಾಂವಿಧಾನಿಕ ಕ್ಷೇತ್ರಗಳಲ್ಲಿ ಭಾರತೀಯ ರಾಜ್ಯದ ಅವಿಭಾಜ್ಯೀಕರಣವನ್ನು ಅನುಸರಿಸಲಾಗುತ್ತಿದೆ. ಸಂಸತ್ತಿನ ಉಭಯ ಸದನಗಳಲ್ಲಿ ಬಿಜೆಪಿ ಮೂರನೇ ಎರಡರಷ್ಟು ಬಹುಮತ ಪಡೆದರೆ ಸಂವಿಧಾನ ಬದಲಿಸುವ ಬಗ್ಗೆ ಚರ್ಚೆ ನಡೆಯುತ್ತಿದೆ. ಈಗಾಗಲೇ, ಒಂದು ರಾಷ್ಟ್ರ, ಒಂದು ಚುನಾವಣೆ ಇವರ ಕಾರ್ಯ ಸೂಚಿಯಲ್ಲಿದೆ.

ಮೋದಿ ಸರ್ಕಾರ ಮತ್ತು ಬಿಜೆಪಿ ಆಡಳಿತ ಅಧಿಕಾರದಲ್ಲಿ ಪುನಃ ಮುಂದುವರಿಯುವುದು ಎಂದರೆ, ಜಾತ್ಯತೀತತೆಯ ಅಂತ್ಯ ಎಂದರ್ಥ ಮತ್ತು ಇದು "ಹಿಂದೂ ರಾಷ್ಟ್ರ" ನಿರ್ಮಾಣಕ್ಕೆ ಕುಮ್ಮಕ್ಕು ಸೂಚಿಸುತ್ತದೆ.

ಸಂವಿಧಾನದ ಆಧಾರ ಸ್ತಂಭಗಳು, ಜಾತ್ಯಾತೀತ, ಸಮಾಜವಾದ, ಪ್ರಜಾಸತ್ತಾತ್ಮಕ ಗಣತಂತ್ರವನ್ನು ಬಿಜೆಪಿಯ ಹಿಂದುತ್ವ ಕಾರ್ಯ ಸೂಚಿಯಿಂದ ಸಂರಕ್ಷಣೆ ಮಾಡಬೇಕಾಗಿದೆ. ಆ ಮೂಲಕ, ನಮ್ಮ ನಮ್ಮ ಧಾರ್ಮಿಕ ಸಂಬಂಧಗಳನ್ನು ಮೀರಿ ಪ್ರತಿಯೊಬ್ಬ ನಾಗರಿಕರು ಸಮಾನ ಸ್ಥಾನಮಾನ ಮತ್ತು ಸೋದರತ್ವ, ಭ್ರಾತೃತ್ವ ಭಾವನೆಗಳಿಂದ ಬದುಕ ಬೇಕಾಗಿದೆ. ಆದ್ದರಿಂದ, ಬಿಜೆಪಿಯನ್ನು ಲೋಕಸಭಾ ಚುನಾವಣೆಯಲ್ಲಿ ನಿರ್ಣಾಯಕವಾಗಿ ಸೋಲಿಸೋಣ.

'ಒಂದು ರಾಷ್ಟ್ರ ಒಂದು ಚುನಾವಣೆ' ಶಿಫಾರಸು: ಸರ್ವಾಧಿಕಾರದ ಕಡೆಗೆ..

ದೇಶದಲ್ಲಿ ಏಕಕಾಲದಲ್ಲಿ ಚುನಾವಣೆ ನಡೆಯಬೇಕು ಎಂಬ ರಾಮ್ ನಾಥ್ ಕೋವಿಂದ್ ನೇತೃತ್ವದ ಸಮಿತಿಯ ಶಿಫಾರಸುಗಳು ಸರ್ವಾಧಿಕಾರಕ್ಕೆ ಕಾರಣವಾಗುತ್ತದೆ. ಎಂಟು ಭಾಗಗಳಲ್ಲಿ 18,626 ಪುಟಗಳ ವರದಿಯನ್ನು ಸಮಿತಿಯು ಅಧ್ಯಕ್ಷೆ ದ್ರೌಪದಿ ಮುರ್ಮು ಅವರಿಗೆ ಮಾರ್ಚ್ 14ರಂದು ಹಸ್ತಾಂತರಿಸಿದೆ. ಬಿಜೆಪಿ, ಬಿಜೆಡಿ ಸೇರಿದಂತೆ 32 ಪಕ್ಷಗಳು 'ಒಂದು ರಾಷ್ಟ್ರ ಒಂದು ಚುನಾವಣೆ' ವ್ಯವಸ್ಥೆಯನ್ನು ಬೆಂಬಲಿಸಿದರೆ, ಸಿಪಿಎಂ, ಸಿಪಿಐ, ಕಾಂಗ್ರೆಸ್ ಮತ್ತು ಡಿಎಂಕೆಯಂತಹ 15 ಪಕ್ಷಗಳು ಅದನ್ನು ವಿರೋಧಿಸಿವೆ. ವೈಸಿಪಿ, ಟಿಡಿಪಿ, ಬಿ.ಆರ್.ಎಸ್. ನಂತಹ ಕೆಲವು ಪಕ್ಷಗಳು ಇನ್ನೂ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿಲ್ಲ. ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಏಕಕಾಲದಲ್ಲಿ ಮತದಾನ ನಡೆಯಬೇಕು, ಬಳಿಕ ಸ್ಥಳೀಯ ಸಂಸ್ಥೆಗಳಿಗೆ 100 ದಿನಗಳ ಕಾಲ ಚುನಾವಣೆ ನಡೆಸಬೇಕು ಎಂದು ಸಮಿತಿ ಹೇಳಿದೆ. ಇದಕ್ಕಾಗಿ ಸಂವಿಧಾನ ಮತ್ತು ಇತರ ಕಾನೂನುಗಳಿಗೆ 18 ತಿದ್ದುಪಡಿಗಳನ್ನು ಮಾಡಬೇಕಾಗಿದೆ. ಸಾಂವಿಧಾನಿಕ ತಿದ್ದುಪಡಿಗಳಿಗೆ ಸಂಸತ್ತಿನ ಉಭಯ ಸದನಗಳಲ್ಲಿ ಮತ್ತು ಅರ್ಧದಷ್ಟು ರಾಜ್ಯ ಅಸೆಂಬ್ಲಿಗಳಲ್ಲಿ ಮೂರನೇ ಎರಡರಷ್ಟು ಬಹುಮತದ ಅಗತ್ಯವಿದೆ. ಆದ್ದರಿಂದ, ಇದು ಬಹಳ ದೀರ್ಘ ಪ್ರಕ್ರಿಯೆಯಾಗಿದೆ.

ವಿಧಾನಸಭೆಗಳ ಅವಧಿಯನ್ನು ಕಡಿತಗೊಳಿಸಲು ಪ್ರಸ್ತಾಪ

ಸಮಿತಿಯ ಶಿಫಾರಸುಗಳು ಜಾರಿಯಾದರೆ ಸಂಸದೀಯ ಪ್ರಜಾಸತ್ತಾತ್ಮಕ ವ್ಯವಸ್ಥೆ ಹಾಗೂ ಐದು ವರ್ಷಗಳಿಗೊಮ್ಮೆ ಸರಕಾರವನ್ನು ಆಯ್ಕೆ ಮಾಡುವ ಜನರ ಹಕ್ಕನ್ನು ಸಹ ಹಾಳುಗೆಡವಲಾಗುತ್ತದೆ. ಉದಾಹರಣೆಗೆ, 18ನೇ ಲೋಕಸಭೆ ಚುನಾವಣೆಯ ನಂತರ ಚುನಾವಣೆ ನಡೆದ ರಾಜ್ಯಗಳ ವಿಧಾನಸಭೆಗಳ ಅವಧಿಯನ್ನು



ಕಡಿತಗೊಳಿಸಲು ಪ್ರಸ್ತಾಪಿಸಲಾಗಿದೆ. ಈ ರಾಜ್ಯಗಳ ಅಸೆಂಬ್ಲಿಗಳ ಅವಧಿಯನ್ನು ಕಡಿಮೆ ಮಾಡಲು ಸಹ ಪ್ರಸ್ತಾಪಿಸಲಾಗಿದೆ. ಇದರಿಂದ 19 ನೇ ಲೋಕಸಭೆ ಚುನಾವಣೆಯೊಂದಿಗೆ ಏಕಕಾಲದಲ್ಲಿ ಚುನಾವಣೆಗಳನ್ನು ನಡೆಸಬಹುದು. ಇದರರ್ಥ 2026 ರಲ್ಲಿ ನಡೆಯಲಿರುವ ಪಶ್ಚಿಮ ಬಂಗಾಳ, ಅಸ್ಸಾಂ, ತಮಿಳುನಾಡು ಮತ್ತು ಕೇರಳ ರಾಜ್ಯಗಳ ವಿಧಾನಸಭೆಗಳ ಅವಧಿಯು ಅರ್ಧಕ್ಕಿಂತ ಹೆಚ್ಚು ಕಡಿಮೆಯಾಗಲಿದೆ. ಐದು ವರ್ಷಗಳ ಕಾಲ ಆಡಳಿತ ನಡೆಸಲು ಜನರಿಂದ ಆಯ್ಕೆಯಾದ ರಾಜ್ಯ ವಿಧಾನಸಭೆಗಳನ್ನು ಈ ರೀತಿ ರದ್ದುಪಡಿಸುವುದು ಜನರ ಅಧಿಕಾರವನ್ನು ಕಸಿದುಕೊಂಡು ಪ್ರಜಾಪ್ರಭುತ್ವವನ್ನು ಅಣಕಿಸುತ್ತಿದೆ!

ರಾಜ್ಯ ಸರ್ಕಾರಗಳ ಅಧಿಕಾರ ಕಬಳಿಕೆ

ಲೋಕಸಭೆ ಮತ್ತು ವಿಧಾನಸಭೆಗಳಿಗೆ ಏಕಕಾಲಕ್ಕೆ ಚುನಾವಣೆ ನಡೆದ ಬಳಿಕ 100 ದಿನಗಳ ಒಳಗಾಗಿ ಎಲ್ಲ ಸ್ಥಳೀಯ ಸಂಸ್ಥೆಗಳಿಗೂ ಚುನಾವಣೆ ನಡೆಸಬೇಕು ಎಂದು ಸಮಿತಿ ಪ್ರಸ್ತಾಪಿಸಿದೆ. ಪ್ರಸ್ತುತ, ಸ್ಥಳೀಯ ಸಂಸ್ಥೆಗಳ ಚುನಾವಣೆಯ ವೇಳಾಪಟ್ಟಿಯನ್ನು ರಾಜ್ಯ ಸರ್ಕಾರಗಳು ನಿರ್ಧರಿಸುತ್ತವೆ ಮತ್ತು ನಡೆಸುತ್ತವೆ. ಚುನಾವಣೆ ಶುರುವಾದ ಮೇಲೆ ರಾಜ್ಯ ಸರ್ಕಾರಗಳ ಅಧಿಕಾರ ಕಬಳಿಕೆ! ಲೋಕಸಭೆ ಚುನಾವಣೆ ಜತೆಗೆ ರಚನೆಯಾಗಿರುವ ವಿಧಾನಸಭೆ ಹಾಗೂ ಸ್ಥಳೀಯ ಸಂಸ್ಥೆಗಳು ಯಾವುದೇ ಕಾರಣಕ್ಕೆ ರದ್ದಾದರೆ ಲೋಕಸಭೆಯ ಉಳಿದ ಅವಧಿಗೆ ಉಪಚುನಾವಣೆ ನಡೆಸಬೇಕು. ಅಂದರೆ ದೇಶದಲ್ಲಿ ಚುನಾಯಿತರಾದ ಎಲ್ಲಾ ಸಂಸ್ಥೆಗಳು ಲೋಕಸಭೆಯ ಅವಧಿಯ ಸುತ್ತ ಸುತ್ತುತ್ತವೆ. ಎಲ್ಲಾ ಚುನಾವಣೆಗಳಿಗೆ ಸಾಮಾನ್ಯ ಮತದಾರರ ಪಟ್ಟಿಗಳು ಮತ್ತು ಎಲ್ಲಾ ರಾಜ್ಯಗಳಲ್ಲಿನ ಸ್ಥಳೀಯ ಸಂಸ್ಥೆಗಳಿಗೆ ಏಕಕಾಲಿಕ ಚುನಾವಣೆಗಳು ಅಧಿಕಾರಗಳನ್ನು ಕೇಂದ್ರೀಕರಿಸುತ್ತವೆ. ಇದು ಮೂಲ ಪಂಚಾಯತ್ ಮತ್ತು ಸ್ಥಳೀಯ ಸಂಸ್ಥೆಗಳ ಮೂಲ ತತ್ವವಾಗಿದ್ದ ವಿಕೇಂದ್ರೀಕರಣದ ಮನೋಭಾವಕ್ಕೆ ಸಂಪೂರ್ಣ ವಿರುದ್ಧವಾಗಿದೆ. ಗಲ್ಲಿಯಿಂದ ದಿಲ್ಲಿಯವರೆಗೆ ಏಕೀಕೃತ ರೀತಿಯಲ್ಲಿ ಚುನಾವಣೆ ನಡೆದರೆ ಸ್ಥಳೀಯ ಸ್ವಯಂ ಆಡಳಿತದ ಮೂಲ ಯಾವುದು? ನಿರ್ಣಾಯಕ 'ಸ್ಥಳೀಯತೆ' ಕಣ್ಮರೆಯಾಗುತ್ತದೆ! ಗಾಂಧೀಜಿಯವರು ಗ್ರಾಮ ಸ್ವರಾಜ್ಯ ಸ್ಥಾಪನೆಯ ಕನಸು ಕಂಡಿದ್ದು ಇದೇನಾ?

ಚುನಾಯಿತ ಸಂಸ್ಥೆಗಳ ಅಧಿಕಾರ ಮೊಟಕು

ಏಕಕಾಲದಲ್ಲಿ ಚುನಾವಣೆಯು ಸಂಸತ್ತಿನಿಂದ ಗ್ರಾಮ ಪಂಚಾಯತ್ ವರೆಗೆ ಎಲ್ಲಾ ಚುನಾಯಿತ ಸಂಸ್ಥೆಗಳ ಅಧಿಕಾರ ಮತ್ತು ಅಧಿಕಾರಾವಧಿಯನ್ನು ತೀವ್ರವಾಗಿ ಅಡ್ಡಿಪಡಿಸುತ್ತದೆ. ಕಳೆದ 75 ವರ್ಷಗಳಲ್ಲಿ ಸರ್ಕಾರಗಳು ಹೇಗೆ ರಚನೆಯಾದವು, ಸಂಸತ್ತು ಮತ್ತು ಶಾಸಕಾಂಗಗಳು ಹೇಗೆ ರಚನೆಯಾದವು ಎಂಬುದನ್ನು ನಾವು ನೋಡಿದ್ದೇವೆ. ಸ್ಥಳೀಯ ಸಂಸ್ಥೆಗಳ ಇತಿಹಾಸದಲ್ಲಿ ಅನೇಕ ಚಳುವಳಿಗಳು ಮತ್ತು ನಿಧಿಗಳು, ಕಾರ್ಯಗಳು ಮತ್ತು ಅಧಿಕಾರಗಳ ರಚನೆ, ಹಾಗೆಯೇ ಆಡಳಿತ ಸುಧಾರಣೆಗಳಿವೆ. ಅವೆಲ್ಲವನ್ನೂ ಒಳಗೊಳ್ಳುವ 'ಒಂದು ರಾಷ್ಟ್ರ ಒಂದು ಚುನಾವಣೆ' ಪ್ರಸ್ತಾವನೆಯಿಂದ ದೇಶದಲ್ಲಿ ಕೇಂದ್ರೀಕೃತ ನಿರಂಕುಶ ರಾಜಕೀಯ ವ್ಯವಸ್ಥೆ ಸ್ಥಾಪನೆಯಾಗಲಿದೆ. ಇದು ಏಕಪಕ್ಷೀಯ ಆಡಳಿತ ಮತ್ತು ನಂತರ ಏಕವ್ಯಕ್ತಿ ಸರ್ವಾಧಿಕಾರಕ್ಕೆ ಕಾರಣವಾಗುವ ಅಪಾಯವಿದೆ. ಈ ಹಿಂದೆ ಸಾಂವಿಧಾನಿಕ ಪರಾಮರ್ಶೆ ಹೆಸರಿನಲ್ಲಿ ನಡೆದಂತೆ ಒಂದು ರಾಷ್ಟ್ರ ಒಂದು ಚುನಾವಣೆ ಪ್ರಹಸನವೂ ಮುಂದೆ ಬಂದಿದೆ. ಪ್ರಜಾಸತ್ತಾತ್ಮಕವಲ್ಲದ ಒಂದು ರಾಷ್ಟ್ರ ಒಂದು ಚುನಾವಣೆ ಪ್ರಸ್ತಾಪವನ್ನು ದೇಶದ ಎಲ್ಲ ಪ್ರಜಾಸತ್ತಾತ್ಮಕ ಸಂಸ್ಥೆಗಳು ಮತ್ತು ನಾಗರಿಕರು ವಿರೋಧಿಸುವುದು ಅಗತ್ಯವಾಗಿದೆ. ಹೀಗಾಗಿ ನಾವು ಭಾರತದ ಸಂವಿಧಾನ ಮತ್ತು ಈ ದೇಶದಲ್ಲಿ ಪ್ರಜಾಪ್ರಭುತ್ವವನ್ನು ಉಳಿಸಬಹುದು.

> "ಒಂದು ರಾಷ್ಟ್ರ ಒಂದು ಚುನಾವಣೆ" ಸಮಿತಿಯು ಸಂವಿಧಾನದ 83/172/324/325 ಪರಿಚ್ಛೇದಗಳನ್ನು ತಿದ್ದುಪಡಿ ಮಾಡಬೇಕು ಎಂದು ಶಿಫಾರಸು ಮಾಡಿದೆ. ಇದು ಸಂಪೂರ್ಣ ಪ್ರಜಾಪ್ರಭುತ್ವ ವಿರೋಧಿಯಾಗಿದೆ. ಇದು ಸಾಂವಿಧಾನಿಕ ಕಾನೂನಿನ ಮೂಲ ತತ್ವಗಳಿಗೆ ವಿರುದ್ಧವಾಗಿದೆ. ಭಾರತ ಗಣರಾಜ್ಯದ ಘನತೆಯನ್ನು ಕಾಪಾಡಲು ಬಯಸುವವರೆಲ್ಲರೂ ಒಗ್ಗೂಡಿ ಇದನ್ನು ಬಲವಾಗಿ ವಿರೋಧಿಸಬೇಕು.
>
> -ಸೀತಾರಾಂ ಯೆಚೂರಿ

ಜನವಾದಿಗಳು ತರಿಸಿದ ಸರಕಾರಿ ಬಸ್ಸು!

ಮಾರ್ಚ್ ಹನ್ನೊಂದು-2024, ಉಡುಪಿ ಜಿಲ್ಲೆಯ ಬೈಂದೂರು ತಾಲೂಕಿನ ನಾಡ-ಪಡುಕೋಣೆಯ ಇತಿಹಾಸದಲ್ಲಿ "ಸಂಚಾರ ಕ್ರಾಂತಿ" ಯಾದ ದಿನವಾಗಿ ದಾಖಲಾಗುತ್ತದೆ.

ಆ ದಿನದ ಸುಂದರ ಮುಂಜಾನೆ ಗ್ರಾಮ ಪ್ರವೇಶಿಸಿದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಅಂದರೆ ಸರಕಾರದ ಬಸ್ಸು ಒಂದು ಅವಿರತ ಹೋರಾಟದ ವಿಜಯೋತ್ಸವದ ಸಂಕೇತದಂತೆ ಪೋಂ ಪೋಂ ಎಂದು ಮಂಗಳ ಧ್ವನಿ ಹೊರಡಿಸಿದಾಗ ನಾಡಿನ ಪ್ರಜ್ಞಾವಂತ ಜನ ಒಂದು ತೃಪ್ತಿಯ ನಿಟ್ಟುಸಿರು ಬಿಟ್ಟು"ಅಬ್ಬಾ... ಕೊನೆಗೂ ಬಸ್ಸು ಬಂತು!!!" ಎಂದು ಉದ್ಗಾರ ತೆಗೆದಾಗ ಅದರ ಹಿಂದಿದ್ದ ಪರಿಶ್ರಮದ ನೆನಪಿನ ಮೆರವಣಿಗೆ ಸಾಗಿ ಹೋಗಿರಬಹುದು.

ಇದೆಲ್ಲವೂ ಆರಂಭವಾದದ್ದು 2023ರ ಜೂನ್ ತಿಂಗಳ 21ನೇ ತಾರೀಕಿನಂದು ನಾಡ ಗ್ರಾಮ ಪಂಚಾಯತ್ ಮುಂಭಾಗದಲ್ಲಿ ಸ್ಥಳೀಯ "ಜನವಾದಿ ಮಹಿಳಾ ಸಂಘಟನೆ" ಮತ್ತು "ಡಿವೈಎಫ್ಐ ಪಡುಕೋಣೆ" ಯ ಯುವ ಬಳಗ ಹಮ್ಮಿಕೊಂಡಿದ್ದ ಹಕ್ಕೊತ್ತಾಯ ಧರಣಿ ಕಾರ್ಯಕ್ರಮದ ಮೂಲಕ. ಅವರ ಬೇಡಿಕೆ ಇದ್ದುದು ತಮ್ಮೂರಿಗೂ ಸರಕಾರಿ ಬಸ್ ಸೌಲಭ್ಯ ದೊರೆಯಬೇಕು ಎಂದು.

ಹೌದು, ಅದು ಅತ್ತ ಬೈಂದೂರಿಗೂ ಇತ್ತ ಕುಂದಾಪುರಕ್ಕೂ ನಡುವಿನ ಸಂಗಮ ತಾಣದಂತಿರುವ ಗ್ರಾಮ. ವಿಶ್ವ ವಿಖ್ಯಾತ ಮರವಂತೆ ಎಂಬ ಸಮುದ್ರ ತೀರವನ್ನೂ ಪ್ರತಿಭಾಶಾಲಿಗಳ ತವರು ಎಂದೆನಿಸಿರುವ ಪಡುಕೋಣೆ ಎಂಬ ಊರನ್ನೂ ಮಡಿಲಲ್ಲಿರಿಸಿಕೊಂಡಿರುವ ನಾಡ ಗ್ರಾಮದ ಸುತ್ತಮುತ್ತಲಿನ ಹಲವು ಪ್ರದೇಶಗಳು ಸೌಲಭ್ಯ ವಂಚಿತ ಕುಗ್ರಾಮವಾಗಿಯೇ ಗುರುತಿಸಿಕೊಂಡವು! ಹಡವು- ಕೋಣ್ಕಿ - ಬಡಾಕೆರೆ... ಹೀಗೆ ಊರು ತುಂಬಾ ರಸ್ತೆಗಳು ತುಂಬಿಕೊಂಡಿದ್ದರೂ ಸಂಚಾರ ವಾಹನಗಳಿಲ್ಲದ ಮರುಭೂಮಿ.

ಮುಖ್ಯ ರಸ್ತೆಗಳಲ್ಲಿ ಮಾತ್ರ ತಿರುಗುವ ಬೆರಳೆಣಿಕೆಯ ಖಾಸಗಿ ಬಸ್ಸುಗಳನ್ನು ಬಿಟ್ಟರೆ ಬಡ ಜನತೆಗೆ ನಿಲುಕದ ಆಟೋಗಳು ಅಷ್ಟೇ.

ಊರು ತುಂಬಾ ಇರುವ ಕೂಲಿ ಕಾರ್ಮಿಕರು, ಕೃಷಿಕರು, ನಗರಗಳಿಗೆ ಉದ್ಯೋಗಕ್ಕಾಗಿ ತೆರಳುವ ನೌಕರರು, ವಿದ್ಯಾಭ್ಯಾಸದ ಅಗತ್ಯಕ್ಕಾಗಿ ತಿರುಗಾಡುವ ವಿದ್ಯಾರ್ಥಿ ವಿದ್ಯಾರ್ಥಿನಿಯರು.... ಎಲ್ಲರ ಸಂಚಾರಕ್ಕೆ ಪೂರಕವಾಗಿ ಸಾರಿಗೆ ವ್ಯವಸ್ಥೆಯ ಕೊರತೆ ಬಹುಕಾಲದಿಂದ ಕಾಡುತ್ತಲೇ ಇತ್ತು.

ಹೀಗಾಗಿಯೇ ಒಗ್ಗಟ್ಟಾದ ಸಮಾನ ಮನಸ್ಕ ಸಂಘಟನೆಗಳೆರಡೂ ಸಾರ್ವಜನಿಕ ಹಿತಾಸಕ್ತಿಯಿಂದ ಹೋರಾಟಕ್ಕಿಳಿದು ಪಂಚಾಯತ್ ಎದುರು ನೆರೆಯಿತು.

ಹೋರಾಟದ ತೀವ್ರತೆ ಮತ್ತು ಬೇಡಿಕೆಯಲ್ಲಿರುವ ಸತ್ಯಾಂಶವನ್ನು ಮನಗಂಡ ನಾಡ ಗ್ರಾಮ ಪಂಚಾಯತ್ ಜನ ಪ್ರತಿನಿಧಿಗಳೂ ಅಧಿಕಾರಿಗಳೂ ಹೋರಾಟ ನಿರತರನ್ನು ಪ್ರಶಂಸಿಸಿದರು. ಆದರೆ ಅದಷ್ಟೇ ಸಾಕಾಗದು, ತಮ್ಮ ಬೇಡಿಕೆ ಪಂಚಾಯತ್ ನ ಅಧಿಕೃತ ನಿರ್ಣಯ ರೂಪದಲ್ಲಿ ದಾಖಲಾಗಬೇಕು ಎಂದು ಪಟ್ಟು ಹಿಡಿಯಲಾಯಿತು. ಆ ಮೂಲಕ ಸಂಬಂಧಪಟ್ಟ ಇಲಾಖೆಗಳಿಗೆ ಜನರ ಬೇಡಿಕೆಯನ್ನು ತಲುಪಿಸುವ ಕಾರ್ಯತಂತ್ರ ಪರಿಣಾಮ ಬೀರತೊಡಗಿತು.

ಇದೇ ಸಮಯಕ್ಕೆ ಕರ್ನಾಟಕ ರಾಜ್ಯ ಸರ್ಕಾರ ಜನತೆಗೆ ನೀಡಿದ ಐದು ಗ್ಯಾರಂಟಿ ಗಳಲ್ಲಿ ಒಂದಾದ "ಶಕ್ತಿ" ಯೋಜನೆ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣದ ಅವಕಾಶ ನೀಡಿದಾಗ ನಾಡ ಗ್ರಾಮದ ಮಹಿಳೆಯರು ತಾವೇಕೆ ಅದರಿಂದ ವಂಚಿತರಾಗಬೇಕು ಎಂದು ಪ್ರಶ್ನಿಸತೊಡಗಿದಾಗ "ಜನವಾದಿ" ಸಂಘಟನೆ ಇದನ್ನೊಂದು ಸವಾಲನ್ನಾಗಿ ಸ್ವೀಕರಿಸಿತು.

ಹಲವಾರು ಜನಪರ ಚಟುವಟಿಕೆಗಳ ಮೂಲಕ ಮನೆ ಮಾತಾಗಿರುವ ಪಡುಕೋಣೆಯ ಯುವ ಬಳಗ ಡಿವೈಎಫ್ಐ ಸರಕಾರಿ ಬಸ್ ಈ ಗ್ರಾಮದ ಹಕ್ಕು, ಅದನ್ನು ದೊರಕಿಸಿಕೊಳ್ಳಲೇಬೇಕು ಎಂದು ಪ್ರತಿಜ್ಞಾ ಬದ್ಧರಾದರು.

ಎರಡೂ ಸಂಘಟನೆಗಳ ಸದಸ್ಯರು 2023ರ ಅಕ್ಟೋಬರ್ 31ರಂದು ನೇರವಾಗಿ



ಮಂಗಳೂರಿನಲ್ಲಿರುವ ಕೆಎಸ್ಆರ್ಟಿಸಿ ವಿಭಾಗೀಯ ಕಚೇರಿಯ ಮುಂಭಾಗದಲ್ಲಿ ನೆರೆದು ನಾಡ ಗ್ರಾಮದ ಬಸ್ ಬೇಡಿಕೆಯನ್ನು ಮರು ನೆನಪಿಸಿ ಧರಣಿ ಕುಳಿತೇ ಬಿಟ್ಟರು.

ಜನವಾದಿ ಜಿಲ್ಲಾ ನಾಯಕಿ ಕಾಮ್ರೇಡ್ ಶೀಲಾವತಿ, ಬೈಂದೂರು ತಾಲೂಕು ನೇತಾರೆ ನಾಗರತ್ನ ನಾಡ, ಗೀತಾ ಪಡುಕೋಣೆ, ಗಿರಿಜಾ ದೇವಾಡಿಗ ಹಡವು, ಮುಂತಾದವರ ಜೊತೆ ಯುವಜನ ಮುಂದಾಳುಗಳಾದ ನಾಗರಾಜ ಕುರು, ರಾಜೇಶ್ ಪಡುಕೋಣೆ, ನಿಸರ್ಗ ಪಡುಕೋಣೆ, ಜನಾರ್ದನ, ಶಶಿಕಾಂತ ಆಚಾರ್ಯ, ವೆಂಕಟೇಶ್ ದೇವಾಡಿಗ, ದೀಪಕ್ ಪಡುಕೋಣೆ ಮುಂತಾದವರ ಸಾಂಗತ್ಯ, ಗ್ರಾಮ ಪಂಚಾಯತ್ ಸದಸ್ಯೆ ಶೋಭಾ ಕೆರೆಮನೆ ಬೆಂಬಲ ಮತ್ತು ವಿಶೇಷವಾಗಿ ಸಹಕಾರಿ ರಂಗದ ಧುರೀಣ,ರೈತ ನಾಯಕ, ಬೈಂದೂರು ತಾಲೂಕು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘದ ಅಧ್ಯಕ್ಷ ಶ್ರೀ ರಾಜೀವ ಪಡುಕೋಣೆಯವರ ಮಾರ್ಗದರ್ಶನ ಹೋರಾಟದ ಕೆಚ್ಚನ್ನು ಹೆಚ್ಚಿಸಿದವು.

ಪರಿಸ್ಥಿತಿ ಕೈ ಮೀರುತ್ತಿದೆ ಎಂದು ಅರ್ಥ ಮಾಡಿಕೊಂಡ ಕೆಎಸ್ಆರ್ಟಿಸಿ ಮಂಗಳೂರು ವಿಭಾಗೀಯ ಕಾರ್ಯನಿರ್ವಹಣಾಧಿಕಾರಿ ಶ್ರೀ ರಾಜೇಶ್ ಶೆಟ್ಟಿಯವರು ತಕ್ಷಣವೇ ನಾಡ ಗ್ರಾಮದಲ್ಲಿ ಸಮೀಕ್ಷೆ ನಡೆಸುವ ವಾಗ್ದಾನ ನೀಡಿದರು. ನುಡಿದಂತೆ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಗ್ರಾಮದ ಜನತೆಯ ಬೇಡಿಕೆ ಅರ್ಥಪೂರ್ಣವಾಗಿದೆ ಎಂದು ಮನಗಂಡು ಸೂಕ್ತ ರೂಟ್ ಮ್ಯಾಪ್ ಕೂಡಾ ರೂಪಿಸಿದರು. ನಾಡ ಗ್ರಾಮದ ಕೋಣ್ಕಿ, ಪಡುಕೋಣೆ, ಹಡವು, ಬಡಾಕೆರೆಯಂತಹ ಪ್ರದೇಶಗಳಲ್ಲಿ ಸರಕಾರಿ ಬಸ್ ಸಂಚರಿಸಲು ಸೂಕ್ತವಾಗಿದೆ ಎಂದು ದೃಢಪಡಿಸಿದರು.

ಪುಟ 14 ಕ್ಕೆ

ನಮ್ಮ ಬೇಡಿಕೆಗಳೇ ನಮ್ಮ ರಾಜಕೀಯ

ರೈತರ ಹೋರಾಟ ಕುರಿತು ಹನ್ನನ್ ಮೊಲ್ಲಾ ಅವರ ಸಂದರ್ಶನ



ಸಂಯುಕ್ತ ಕಿಸಾನ್ ಮೋರ್ಚಾ (SKM) ಮತ್ತು ಅದರ ಸಹಭಾಗಿತ್ವ ಸಂಘಟನೆಗಳಿಗೆ ನಾಯಕತ್ವ ನೀಡಿದ, ಹಾಗೂ ಎಂಟು ಅವಧಿಯ ಲೋಕಸಭಾ ಸದಸ್ಯರಾಗಿದ್ದ ಹನ್ನನ್ ಮೊಲ್ಲಾ ಅವರನ್ನು, ಒಂದು ವರ್ಷದ ರೈತರ ಆಂದೋಲನದಲ್ಲಿ ಪ್ರಮುಖ ವ್ಯಕ್ತಿ ಎಂದು ಗುರುತಿಸಲ್ಪಟ್ಟಿದ್ದಾರೆ. ಭಾರತದ ಅತಿ ದೊಡ್ಡ ರೈತ ಸಂಘ 'ಆಲ್ ಇಂಡಿಯಾ ಕಿಸಾನ್ ಸಭಾ' (ಎಐಕೆಎಸ್) ದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ, ರೈತರ ಹೋರಾಟಗಳನ್ನು ನಿರಂತರವಾಗಿ ಮುಂದುವರೆಸಲು ಶ್ರಮಿಸಿದ ನಾಯಕರಲ್ಲಿ ಒಬ್ಬರಾಗಿದ್ದಾರೆ. ಮಾರ್ಚ್ 14 ರ ಮಹಾ ಪಂಚಾಯತ್ ಗೂ ಕೆಲ ದಿನಗಳ ಹಿಂದೆ 'ಫ್ರಂಟ್‌ಲೈನ್' ಪ್ರತಿನಿಧಿ ಟಿ.ಕೆ.ರಾಜಲಕ್ಷ್ಮಿ ಅವರಿಗೆ ಹನ್ನನ್ ಮೊಲ್ಲಾ ಅವರು ನೀಡಿದ ಸಂದರ್ಶನದ ಮುಖ್ಯಾಂಶಗಳು ಇಲ್ಲಿವೆ...

ಪ್ರಶ್ನೆ: ಪ್ರಸ್ತುತ ರೈತರ ಆಂದೋಲನದ ಹಂತವನ್ನು ನೀವು ಹೇಗೆ ನೋಡುತ್ತೀರಿ? ಕೆಲ ರೈತ ಸಂಘಗಳು 'ದೆಹಲಿ ಚಲೋ'ಗೆ ಕರೆ ನೀಡಿದ್ದರಿಂದ ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಬೆಂಬಲವಿದೆಯೋ ಇಲ್ಲವೋ ಎಂಬ ಗೊಂದಲ ಉಂಟಾಗಿತ್ತು.

ಉತ್ತರ: ಸ್ವಾಮಿನಾಥನ್ ಆಯೋಗದ ಶಿಫಾರಸುಗಳನ್ನು ಜಾರಿಗೆ ತರಲು ಸರ್ಕಾರ ನಿರಾಕರಿಸಿದಾಗ, ದೇಶದಾದ್ಯಂತ ಇರುವ 500 ರೈತ ಸಂಘಗಳು ಅಕ್ಟೋಬರ್ 2020 ರಲ್ಲಿ ಗುರುದ್ವಾರ ರಾಕಬ್‌ಗಂಜ್‌ನಲ್ಲಿ ಸಮಾವೇಶ ನಡೆಸಿದವು. ಇದು ಸಮಸ್ಯೆ ಆಧಾರಿತ ಆಂದೋಲನವಾಗಿದೆ ಮತ್ತು ವೈಯಕ್ತಿಕ ಧ್ವಜಗಳಿಂದ ಅವಕಾಶ ಇರಬಾರದು ಎಂದು ಅಲ್ಲಿ ನಿರ್ಧರಿಸಲಾಯಿತು. ನಾವೂ ಕೆಲವು ಅಂಶಗಳನ್ನು ಒಪ್ಪಿಕೊಂಡಿದ್ದೇವೆ. ಮೂರು ಕೃಷಿ ಕಾನೂನುಗಳನ್ನು ರದ್ದುಗೊಳಿಸುವುದು ತಕ್ಷಣದ ಸಮಸ್ಯೆ. ಸ್ವಾಮಿನಾಥನ್ ಆಯೋಗದ ಶಿಫಾರಸುಗಳ ಆಧಾರದ ಮೇಲೆ ಕನಿಷ್ಠ ಬೆಂಬಲ ಬೆಲೆಯ ಶಾಸನಬದ್ಧ ಖಾತರಿಯನ್ನು ಪಡೆಯುವುದು ಮತ್ತೊಂದು ಪ್ರಮುಖ ಬೇಡಿಕೆ. ಹೂಡಿಕೆ ವೆಚ್ಚಗಳು ಬಹಳಷ್ಟು ಹೆಚ್ಚಾಗುತ್ತಿವೆ. ಇವುಗಳ ನಿಯಂತ್ರಣಕ್ಕೆ ಸರಕಾರ ಖಾತರಿ ನೀಡಬೇಕು. ಕೃಷಿ ಇತರ ಕೈಗಾರಿಕೆಗಳಂತೆ ಅಲ್ಲ. ಇತರ ಉತ್ಪನ್ನಗಳು ಗರಿಷ್ಠ ಚಿಲ್ಲರೆ ಬೆಲೆ (MRP) ಯನ್ನು ಹೊಂದಿವೆ. ಅದನ್ನು ಮೀರಿ ಯಾರೂ ಪಾವತಿ ಮಾಡಬಾರದು. ನಾವು ಕನಿಷ್ಟ ಬೆಂಬಲ ಬೆಲೆ ಮತ್ತು ಸಂಗ್ರಹಣೆ ಖಾತರಿಯನ್ನು ಮಾತ್ರ ಕೇಳುತ್ತಿದ್ದೇವೆ.

ನವೆಂಬರ್ 26, 2020 ರಂದು ದೆಹಲಿ ಚಲೋಗೆ ಕರೆ ನೀಡಲಾಯಿತು. ಸರ್ಕಾರ ನಮ್ಮನ್ನು ದೆಹಲಿಯ ಒಳಗೆ ಬಿಡುವುದಿಲ್ಲ ಎಂದು ಹೇಳಿತು. ರಾಷ್ಟ್ರೀಯ ಹೆದ್ದಾರಿಗಳಲ್ಲಿ ದೊಡ್ಡ ದೊಡ್ಡ ಗುಂಡಿ ತೋಡಿತು. ರೈತರ ಮೇಲೆ ಅಶ್ರುವಾಯು ಪ್ರಯೋಗಿಸಿದರು. ರೈತರ ಪ್ರತಿಭಟನಾ ಶಿಬಿರಗಳಲ್ಲಿ ನೀರು, ವಿದ್ಯುತ್ ಪೂರೈಕೆ ಸ್ಥಗಿತಗೊಂಡಿತ್ತು. ರೈತರು ಬರದಂತೆ ಬ್ಯಾರಿಕೇಡ್‌ಗಳನ್ನು ಹಾಕಿದಾಗ, ನಾವು ಪೊಲೀಸರೊಂದಿಗೆ ಘರ್ಷಣೆಗೆ ಹೋಗುವುದಿಲ್ಲ ಎಂದು ಹೇಳಿದೆವು. ಶಾಂತಿಯನ್ನು ಕಾಪಾಡಿಕೊಳ್ಳಬೇಕು ಎಂಬುದು ನಮಗೆ ಗೊತ್ತಿದೆ. ನಮ್ಮ ನಾಯಕತ್ವ ಸಂಪೂರ್ಣ ನಿಯಂತ್ರಣದಲ್ಲಿದೆ. ಸರ್ಕಾರ ನಮ್ಮನ್ನು ಪಾಕಿಸ್ತಾನಿ, ಖಲಿಸ್ತಾನಿ ಮತ್ತು ಮಾವೋವಾದಿಗಳೆಂದು ಕರೆಯಿತು. ಅವರು ನಮ್ಮನ್ನು ದುರ್ಬಲಗೊಳಿಸಲು ಸಹ ಬಯಸಿದ್ದರು. ಸರ್ಕಾರದ ಜೊತೆಗಿನ ಸಭೆಗಳು ಕೊನೆಯವರೆಗೂ ಅಪೂರ್ಣವಾಗಿತ್ತು. ಈ ಪ್ರಕ್ರಿಯೆಯಲ್ಲಿ ನಮಗೆ ಅಸಾಧಾರಣವಾದ ಬೆಂಬಲವಿದೆ. ಕಾರ್ಮಿಕರು, ರೈತರು, ಕೃಷಿ ಕಾರ್ಮಿಕರು, ಮಹಿಳೆಯರು ಮತ್ತು ಬುದ್ಧಿಜೀವಿಗಳು ನಮ್ಮೊಂದಿಗೆ ಸೇರಿಕೊಂಡರು. ಉಳಿದದ್ದು ಇತಿಹಾಸ. ಸಂಯುಕ್ತ ಕಿಸಾನ್ ಮೋರ್ಚಾದಿಂದ ವರ್ಷವಿಡೀ ನಡೆದ ಪ್ರತಿಭಟನೆಗಳು ಶಾಂತಿಯುತವಾಗಿ ಮತ್ತು ಶಿಸ್ತುಬದ್ಧವಾಗಿ ನಡೆದವು. ಪಂಜಾಬ್‌ನ ರೈತರ ಮೇಲೆ ಹರಿಯಾಣ ಪೊಲೀಸರ ದಬ್ಬಾಳಿಕೆಯನ್ನು ನಾವು ಖಂಡಿಸುತ್ತೇವೆ. ಈ ವರ್ಷ ನಾವು ಫೆಬ್ರವರಿ 16 ರಂದು ಗ್ರಾಮೀಣ ಬಂದ್‌ಗೆ ಕರೆ ನೀಡಿದ್ದೆವು. ಆದರೆ ಕೆಲವು ರೈತ ಗುಂಪುಗಳು ಮುಂದೆ ಹೋಗಿ ಫೆಬ್ರವರಿ 13 ರಂದು ಚಲೋ ದೆಹಲಿಗೆ ಕರೆ ನೀಡಿದ್ದವು.

ನಮ್ಮ ಪ್ರಮುಖ ಆರು ಬೇಡಿಕೆಗಳು

ಪ್ರಶ್ನೆ: ನವೆಂಬರ್ 2020 ರಲ್ಲಿ ದೆಹಲಿ ಮುತ್ತಿಗೆಯ ನಂತರ ಸ್ವಲ್ಪ ಪ್ರಗತಿಯನ್ನು ಸಾಧಿಸಲಾಗಿದೆ. ಹೊಸ ಆಂದೋಲನವನ್ನು ಪ್ರಾರಂಭಿಸಿದ ಒಂದು ಗುಂಪಿಗೆ ಸೇರಿದ ರೈತರಿಗೆ ಬೆಂಬಲ ದೊರಕಿದೆ ಎಂಬ ಭಾವನೆ ಇದೆ. ಸಮಿತಿಯ ಉಳಿದವರೂ ಈ ಆಂದೋಲನಕ್ಕೆ ಬೆಂಬಲ ನೀಡಬೇಕಿತ್ತು ಎಂಬ ಅಭಿಪ್ರಾಯವೂ ವ್ಯಕ್ತವಾಗಿದೆ.

ಉ: ಎಂದಿಗೂ ನಮ್ಮ ಮೊದಲ ಬೇಡಿಕೆ ಕನಿಷ್ಠ ಬೆಂಬಲ ಬೆಲೆಗೆ ಕಾನೂನು ಚೌಕಟ್ಟನ್ನು ಸ್ಥಾಪಿಸುವುದು ಎಂಬುದಾಗಿದೆ. 20 ವರ್ಷಗಳ ನಮ್ಮ ಬೇಡಿಕೆ ಇದು. ಬಿಜೆಪಿ ತನ್ನ ಚುನಾವಣಾ ಪ್ರಣಾಳಿಕೆಗಳಲ್ಲಿ ಸ್ವಾಮಿನಾಥನ್ ಆಯೋಗದ ಶಿಫಾರಸುಗಳನ್ನು ಜಾರಿಗೆ ತರುವುದಾಗಿ ಹಲವಾರು ಸಂದರ್ಭಗಳಲ್ಲಿ ಹೇಳಿದೆ. ಹಲವಾರು ಸಾರ್ವಜನಿಕ ಸಭೆಗಳಲ್ಲಿ ಸ್ವತಃ ನರೇಂದ್ರ ಮೋದಿಯವರು ತಮ್ಮ ಸರ್ಕಾರ ರಚನೆಯಾದರೆ ಹೂಡಿಕೆ ವೆಚ್ಚಕ್ಕೆ ಅರ್ಧದಷ್ಟು ವೆಚ್ಚವನ್ನು ಸೇರಿಸುವ (ಸಿ2+50) ಸೂತ್ರವನ್ನು ಜಾರಿಗೆ ತರುವುದಾಗಿ ಹೇಳಿದ್ದಾರೆ.

ಕಾನೂನನ್ನು ಹಿಂತೆಗೆದುಕೊಳ್ಳುವ ಆಲೋಚನೆಯನ್ನು ಸರ್ಕಾರವು ತೇಲಿಬಿಟ್ಟಾಗ, ನಾವು ಮತ್ತೆ ಧರಣಿಗೆ ಹೋದೆವು. ಹನ್ನೊಂದು ದಿನಗಳ ನಂತರ ಸರ್ಕಾರ ನಮ್ಮನ್ನು ಸಭೆಗೆ ಕರೆಯಿತು. ಅಲ್ಲಿ ಇತರೆ ಬೇಡಿಕೆಗಳ ಬಗ್ಗೆ ಚರ್ಚೆ ನಡೆಸಲಾಯಿತು. ಮೊದಲನೆಯದಾಗಿ ಸಿ2+50 ಶೇಕಡಾ ಸೂತ್ರ ಜಾರಿ, ಸಾಲ ಮನ್ನಾ, ಬೆಳೆ ತ್ಯಾಜ್ಯ ಸುಡುವ ಸಂಬಂಧಿಸಿದ ಪ್ರಕರಣಗಳ ಹಿಂಪಡೆಯುವುದು, ವಿದ್ಯುತ್ ತಿದ್ದುಪಡಿ ಕಾಯ್ದೆ ಹಿಂಪಡೆಯುವುದು, ಮೃತ ರೈತರ ಕುಟುಂಬಗಳಿಗೆ ಪರಿಹಾರ ಪಾವತಿ, ರೈತರ ಮೇಲೆ ದಾಖಲಾಗಿರುವ 40 ಸಾವಿರ ಪ್ರಕರಣಗಳನ್ನು ಹಿಂಪಡೆಯುವುದು. ಇವು ನಮ್ಮ ಪ್ರಮುಖ ಆರು ಬೇಡಿಕೆಗಳು.

ಕೃಷಿ ಸಚಿವರೊಂದಿಗೆ ಲಿಖಿತ ಒಪ್ಪಂದದಲ್ಲಿ ಇವು ಆರು ಬೇಡಿಕೆಗಳ ಭಾಗವಾಗಿವೆ. ಮೂರು ವರ್ಷ ಕಳೆದರೂ ಸರ್ಕಾರ ನಮ್ಮೊಂದಿಗೆ ಮಾಡಿಕೊಂಡಿರುವ ಒಪ್ಪಂದದ ಅನುಷ್ಠಾನದಲ್ಲಿ ಒಂದಿಂಚೂ ಮುಂದಕ್ಕೆ ಹೋಗಿಲ್ಲ. ಕಳೆದ ಮಾರ್ಚ್‌ನಲ್ಲಿ ರಾಮ್ ಲೀಲಾ ಮೈದಾನದಲ್ಲಿ ಆಯೋಜಿಸಿದ್ದ ಬೃಹತ್ ಪ್ರದರ್ಶನದಲ್ಲಿ ನಾವು ಈ ಒಪ್ಪಂದದ ಬಗ್ಗೆ ಸರ್ಕಾರಕ್ಕೆ ನೆನಪಿಸಿದ್ದೇವೆ. ರಾಜ್ಯಪಾಲರ ಕಚೇರಿ ಎದುರು 72 ಗಂಟೆಗಳ ಧರಣಿ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ಜನವರಿ 26, 2023 ರಂದು, ನಾವು ದೇಶಾದ್ಯಂತ ಟ್ರಾಕ್ಟರ್‌ಗಳ ಪ್ರದರ್ಶನವನ್ನು ಆಯೋಜಿಸಿದ್ದೇವೆ. 2024 ಫೆಬ್ರವರಿ 16, ರಂದು ಗ್ರಾಮೀಣ ಬಂದ್ ಮತ್ತು ಟ್ರಾಕ್ಟರ್ ಪ್ರದರ್ಶನವನ್ನು ಫೆಬ್ರವರಿ 26 ರಂದು ಆಯೋಜಿಸಿದ್ದೆವು. ಕೇಂದ್ರ ಕಾರ್ಮಿಕ ಸಂಘಟನೆಗಳು ಫೆಬ್ರವರಿ 16ರ ಕರೆಯನ್ನು ಬೆಂಬಲಿಸಿದವು. ನಮ್ಮ ಪ್ರತಿಭಟನೆ ಪ್ರಕ್ರಿಯೆಯು ಯಾವಾಗಲೂ ಶಿಸ್ತುಬದ್ಧ, ಪ್ರಜಾಸತ್ತಾತ್ಮಕ ಮತ್ತು ಶಾಂತಿಯುತವಾಗಿರುತ್ತದೆ. SKM ಒಂದು ಜೀವಂತ ಚಳುವಳಿ. ಆದ್ದರಿಂದಲೇ ನಮಗೆ ಜನರಿಂದ ವ್ಯಾಪಕ ಬೆಂಬಲ ಸಿಗುತ್ತಿದೆ.

ಒಬ್ಬರು ಆರ್‌ಎಸ್‌ಎಸ್‌ನೊಂದಿಗೆ ನಿಕಟ ಸಂಪರ್ಕ

ಪ್ರ: ಸರ್ಕಾರದ 'ಒಡೆದು ಆಳುವ' ನೀತಿಯಿಂದಾಗಿ ರೈತರ ಚಳವಳಿ ಇಬ್ಭಾಗವಾಗಿದೆ ಎಂದು ನೀವು ಭಾವಿಸುತ್ತೀರಾ?

ಉ: ನಮ್ಮ ಒಂದು ವರ್ಷದ ಪ್ರತಿಭಟನೆಯ ನಂತರ ಇಬ್ಬರು ನಾಯಕರು ಖಿಖಿಒ ಅನ್ನು ತೊರೆದರು. ಅವರಲ್ಲಿ ಒಬ್ಬರು ಆರ್‌ಎಸ್‌ಎಸ್‌ನೊಂದಿಗೆ ನಿಕಟ ಸಂಪರ್ಕ ಹೊಂದಿದ್ದಾರೆ. ಇದಕ್ಕೆ ನಮ್ಮ ಅಭ್ಯಂತರವಿಲ್ಲ. ಆಶ್ಚರ್ಯಕರವೆಂದರೆ, ಈ ಇಬ್ಬರು ನಾಯಕರು ಪ್ರತಿನಿಧಿಸುವ ಕೆಲವು ವಿಭಾಗೀಯ ಗುಂಪುಗಳೊಂದಿಗೆ ಸಮಾಲೋಚನೆ ನಡೆಸಲು ಸರ್ಕಾರವು ಸಿದ್ಧವಾಗಿತ್ತು ಮತ್ತು ಖಿಖಿಒ ಪ್ರತಿನಿಧಿಸುವ ದೊಡ್ಡ ಅಖಿಲ ಭಾರತ ಮಟ್ಟದ ಸಮಿತಿಯನ್ನು ನಿರ್ಬಂಧಿಸಿತು. ಎಸ್.ಕೆ.ಎಂ. ನಲ್ಲಿ ಅಖಿಲ ಭಾರತ ರೈತ, ಕಿಸಾನ್ ಸಂಘಟನೆಗಳನ್ನು ಪ್ರತಿನಿಧಿಸುವ 40 ಜನ ಮುಖಂಡರು ಇದ್ದಾರೆ. ಒಟ್ಟಾರೆಯಾಗಿ, 2020–21ರಲ್ಲಿ ನಾವು ಸರ್ಕಾರದೊಂದಿಗೆ 11 ಸುತ್ತಿನ ಚರ್ಚೆ ನಡೆಸಿದ್ದೇವೆ. ನಂತರ 3 ವರ್ಷಗಳ ಕಾಲ ನಮ್ಮನ್ನು ಮಾತುಕತೆಗೆ ಕರೆಯಲಿಲ್ಲ. ಆದರೆ ಸರ್ಕಾರವು ಚಂಡೀಗಢಕ್ಕೆ ಮೂವರು ಮಂತ್ರಿಗಳನ್ನು ಕಳುಹಿಸಿ ಒಡೆದು ಹೋದ ಗುಂಪುಗಳೊಂದಿಗೆ ಮಾತುಕತೆ ನಡೆಸಿತು. ಸರ್ಕಾರದ ಸಂಚಿನಲ್ಲಿ ಸಿಲುಕಿಕೊಳ್ಳಬೇಡಿ ಎಂದು ನಾವು ಸಂಘಟನೆಗಳಿಗೆ ಎಚ್ಚರಿಕೆ ನೀಡಿದ್ದೇವೆ. ಆದ್ದರಿಂದ, ಸರ್ಕಾರದ ಷರತ್ತುಗಳನ್ನು ಒಪ್ಪಿಕೊಂಡ ನಂತರ, ಪ್ರಸ್ತಾಪವನ್ನು ತಕ್ಷಣವೇ ತಿರಸ್ಕರಿಸಲಾಯಿತು. ಪ್ರಾಥಮಿಕ ಸಮಸ್ಯೆಗಳು ಪರಿಹಾರವಾಗಿಲ್ಲ. ಮಾಧ್ಯಮಗಳೂ ಸಹ ನಮ್ಮ ಶಾಂತಿಯುತ ಪ್ರತಿಭಟನೆಯ ವಿಧಾನಗಳನ್ನು ನಿರ್ಲಕ್ಷಿಸಿದವು.

'ರಾಜಕೀಯೇತರ' ಎಂಬುದು ಜನರನ್ನು ವಂಚಿಸುತ್ತದೆ

ಪ್ರ: ಪ್ರಸ್ತುತ ಹಂತದಲ್ಲಿ ನಾಯಕತ್ವ ನೀಡುತ್ತಿರುವವರು ಕೂಡಾ ತಮ್ಮನ್ನು ತಾವು ಎಸ್‌ಕೆಎಂ ಎಂದು ಕರೆಯುತ್ತಿದ್ದಾರೆ. ಆದರೆ 'ರಾಜಕೀಯೇತರ' ಪದವನ್ನು ಸೇರಿಸುತ್ತಿದ್ದಾರೆ.

ಉ: 'ರಾಜಕೀಯೇತರ' ಎಂಬುದೇ ಇಲ್ಲ. ಇದು ಜನರನ್ನು ವಂಚಿಸುತ್ತದೆ. ಸರ್ಕಾರ ಪ್ರತಿನಿಧಿಸುವ ರಾಜಕೀಯ ಘಟಕದ ವಿರುದ್ಧ ನಾವು ರಾಜಕೀಯೇತರವಾಗಿ ಹೋರಾಡುವುದಾದರೂ ಹೇಗೆ? ನಮ್ಮ ಬೇಡಿಕೆಗಳೇ ನಮ್ಮ ರಾಜಕೀಯ. 'ಪಕ್ಷ'ದ ರಾಜಕೀಯವಲ್ಲ. ಎಸ್‌ಕೆಎಂ ರಾಜಕೀಯ ಸಂಘಟನೆಯಲ್ಲ. ಹೌದು, ಅಖಿಲ ಭಾರತ ಗ್ರಾಮಾಂತರ ಬಂದ್ ಆಯೋಜಿಸಲು ಈಗಾಗಲೇ ಸಾಮೂಹಿಕ ಕ್ರಿಯಾ ಯೋಜನೆ ರೂಪಿಸಿರುವ ಕಾರಣ 'ಚಲೋ ದೆಹಲಿ' ಕರೆಯಿಂದ ದೂರ ಇದ್ದೆವು. ಇದು ವಾಸ್ತವ. ಆದರೆ ಪ್ರತಿಭಟಿಸುವ ಪ್ರತಿಯೊಬ್ಬರ ಹಕ್ಕನ್ನು ನಾವು ಬೆಂಬಲಿಸುತ್ತೇವೆ. ಒಂದು ವೇಳೆ ಸರಕಾರ ರೈತರ ಮೇಲೆ ದಾಳಿ ನಡೆಸಿದರೆ ನಾವು ಖಂಡಿತಾ ಖಂಡಿಸುತ್ತೇವೆ ಎಂಬುದು ಕೂಡ ಸ್ಪಷ್ಟವಾಗಿ ಕಾಣುತ್ತಿದೆ. ಮುಂದಿನ ಐದು ವರ್ಷಗಳವರೆಗೆ ಕನಿಷ್ಠ ಬೆಂಬಲ ಬೆಲೆಯಲ್ಲಿ ಐದು ಬೆಳೆಗಳನ್ನು ಖರೀದಿಸಲು ಸರ್ಕಾರ ಅವಕಾಶ ನೀಡಿದೆ. ಮೊದಲು, ಒಂದು ಗುಂಪು ಒಪ್ಪಿಕೊಂಡಿತು, ನಂತರ ಹಿಂದೆ ಸರಿಯಿತು. ನಾವು ಸರ್ಕಾರ ಕೊಟ್ಟಿದ್ದನ್ನು ಟೀಕಿಸುತ್ತಾ ಸಾರ್ವಜನಿಕರ ಬಳಿ ಹೋಗಿ ಇದು ಬೆನ್ನಿಗೆ ಚೂರಿ ಹಾಕುವ ಕ್ರಮ ಎಂದೆವು. ಇದು ತಪ್ಪು ಎಂದು ಸಂಘಟನೆಗಳು ಗುರುತಿಸಿವೆ ಎಂದು ನಾನು ಭಾವಿಸುತ್ತೇನೆ.

ಒಂದು ವಿಭಾಗವು ಕೆಂಪು ಕೋಟೆಯತ್ತ ಸಾಗಿತು

ಮೊದಲ ಹಂತದ ಆಂದೋಲನದ ಸಮಯದಿಂದ ಪ್ರಸ್ತುತ ಪ್ರತಿಭಟನೆಗಳ ಹಂತದ ವರೆಗೆನಾಯಕತ್ವ ನೀಡುತ್ತಿರುವ ಒಂದು ಸಂಘ ಐಕ್ಯ ಸಂಘಟನೆಯಿಂದ ಬೇರ್ಪಟ್ಟು ಪ್ರತ್ಯೇಕ ಗುಂಪನ್ನು ರಚಿಸಿಕೊಂಡಿತು. ಜನವರಿ 26, 2021 ರಂದು, ಟ್ರ್ಯಾಕ್ಟರ್ ಶೋ ನಡೆದಾಗ, ಅದೇ ಸಂಘಟನೆಯನ್ನು ಪ್ರತಿನಿಧಿಸುವ ಒಂದು ವಿಭಾಗವು ಒಡೆದು ಕೆಂಪು ಕೋಟೆಯತ್ತ ಸಾಗಿತು. ಇದು ಯೋಜನೆಯ ಭಾಗವಾಗಿರಲಿಲ್ಲ. ಈ ಕ್ರಮವು ಸರ್ಕಾರಕ್ಕೆ ನಮ್ಮ ಮೇಲೆ ದಬ್ಬಾಳಿಕೆ ಮಾಡಲು ಅವಕಾಶ ಮಾಡಿಕೊಟ್ಟಿತು. ಇನ್ನು 11 ತಿಂಗಳ ಕಾಲ ರಾಷ್ಟ್ರದ ರಾಜಧಾನಿ ಗಡಿಗಳಲ್ಲಿ ಪ್ರತಿಭಟನೆ ಮುಂದುವರಿಸುವ ನಿಟ್ಟಿನಲ್ಲಿ ಐಕ್ಯ ಹೋರಾಟಗಾರರು ಗಟ್ಟಿಯಾಗಿ ನಿಲ್ಲುವುದು ಬೇರೆ ವಿಷಯ.

ಆದ್ದರಿಂದ ಸರಕಾರದೊಂದಿಗೆ ಸಮಾಲೋಚನೆ ನಡೆಸಿದವರಲ್ಲಿ ಇಂತಹ ಕ್ರಮಗಳನ್ನು ಕೈಗೊಂಡವರು ಪ್ರಮುಖರು ಎಂಬುದು ಗಮನಾರ್ಹ. ಆದರೆ ಸರ್ಕಾರದ ದಬ್ಬಾಳಿಕೆಯನ್ನು ನಾವು ಸಾರಾಸಗಟಾಗಿ ಖಂಡಿಸುತ್ತೇವೆ. ರೈತ ಸಂಘಗಳು ಸರ್ಕಾರದ ದಾಳಿಗೆ ಯಾವುದೇ ಅವಕಾಶ ನೀಡಬಾರದು.

ಕಾರ್ಪೊರೇಟ್ ಕೃಷಿಯನ್ನು ಉತ್ತೇಜಿಸಲು

ರೈತಾಧಾರಿತ ಕೃಷಿಯನ್ನು ನಾಶಪಡಿಸಿ, ಕಾರ್ಪೊರೇಟ್ ಕೃಷಿಯನ್ನು ಉತ್ತೇಜಿಸುವುದು ಸರ್ಕಾರದ ನೀತಿಯಾಗಿದೆ. ಮೂರು ಕೃಷಿ ಕಾನೂನುಗಳನ್ನು ಹಿಂಪಡೆಯಲಾಗಿದೆ, ಆದರೆ ಆ ಕಾನೂನುಗಳ ಸಾರ ಮಾತ್ರ ಬಜೆಟ್‌ನಲ್ಲಿ ಯಥಾವತ್ತಾಗಿದೆ. ಕೃಷಿಗಾಗಿ ಬಜೆಟ್‌ನಲ್ಲಿ ಸುಮಾರು ಶೇ. 83 ರಷ್ಟು ವೈಯಕ್ತಿಕ ಆಧಾರಿತ ಯೋಜನೆಗಳಿಗೆ ಮೀಸಲಿಡಲಾಗಿದೆ. ಶೇಕಡ 40 ರಷ್ಟು ರೈತರು ಹಿಡುವಳಿದಾರರಾಗಿರುವುದರಿಂದ ಅವರಿಗೆ ಈ ವೈಯಕ್ತಿಕ ಸವಲತ್ತುಗಳು ಸಿಗುತ್ತಿಲ್ಲ. 82ರಷ್ಟು ಕೃಷಿ ವೆಚ್ಚವನ್ನು ರೈತರೇ ಭರಿಸುತ್ತಿದ್ದಾರೆ. ಕೃಷಿಯನ್ನು ರಕ್ಷಿಸುತ್ತಿದ್ದೇವೆ ಎಂದು ಸರಕಾರ ಹೇಳುತ್ತಿದೆ.

ಕೃಷಿಯಲ್ಲಿ ಕಾರ್ಪೊರೇಟ್ ಹೂಡಿಕೆ ಕೇವಲ 3 ಪ್ರತಿಶತ. ಇಷ್ಟು ಕಡಿಮೆ ಪ್ರಮಾಣದ ಹೂಡಿಕೆಯೊಂದಿಗೆ, ಕಾರ್ಪೊರೇಟ್ ವಲಯವು ಕೃಷಿ, ಉತ್ಪಾದನೆ, ಸಾರಿಗೆ, ಸಂಸ್ಕರಣೆ, ರಫ್ತು,

ಪುಟ 14 ಕ್ಕೆ

ಐಟಿ ಉದ್ಯಮಗಳಿಗೆ ಕೈಗಾರಿಕಾ ಉದ್ಯೋಗ ಕಾನೂನಿನ ವಿನಾಯ್ತಿ ರದ್ದುಗೊಳಿಸಿ ಕಾರ್ಮಿಕ ಆಯುಕ್ತರ ಕಛೇರಿ ಎದುರು ಐಟಿ ಉದ್ಯೋಗಿಗಳ ಪ್ರತಿಭಟನೆ

ಕರ್ನಾಟಕ ರಾಜ್ಯ ಸರ್ಕಾರ ಮಾಹಿತಿ ತಂತ್ರಜ್ಞಾನದ ಉದ್ಯಮಗಳಲ್ಲಿ ನೀಡಿರುವ ಕೈಗಾರಿಕಾ ಉದ್ಯೋಗ (ಜಾರಿಯಲ್ಲಿರುವ ಆದೇಶ) ಕಾನೂನಿನ ವಿನಾಯತಿಯನ್ನು ತಕ್ಷಣವೇ ರದ್ದುಗೊಳಿಸಲು ಒತ್ತಾಯಿಸಿ, ಬೆಂಗಳೂರಿನಲ್ಲಿನ ಕಾರ್ಮಿಕ ಭವನದಲ್ಲಿರುವ ಕಾರ್ಮಿಕ ಆಯುಕ್ತರ ಕಛೇರಿ ಎದುರು ಮಾಹಿತಿ ತಂತ್ರಜ್ಞಾನ ಕಂಪನಿಗಳ ಉದ್ಯೋಗಿಗಳು (ಐಖಿ ಜಟಂಟಿಟಂಥಿಜಜಥ) ಪ್ರತಿಭಟನೆ ನಡೆಸಿದರು.

ಮಾರ್ಚ್ 16 ರಂದು ಕರ್ನಾಟಕ ರಾಜ್ಯ ಐ.ಟಿ ಎಂಪ್ಲಾಯೀಸ್ ಯೂನಿಯನ್ (ರಿ) (KITU) ನೇತೃತ್ವದಲ್ಲಿ ನಡೆದ ಈ ಪ್ರತಿಭಟನೆಯಲ್ಲಿ ನೂರಾರು ಐಟಿ ಉದ್ಯೋಗಿಗಳು ಭಾಗವಹಿಸದ್ದರು.

ಕರ್ನಾಟಕದಲ್ಲಿರುವ ಮಾಹಿತಿ ತಂತ್ರಜ್ಞಾನದ (ಐಟಿ) ಉದ್ಯಮಗಳಲ್ಲಿ ಸರಿ ಸುಮಾರು 20 ಲಕ್ಷ ಉದ್ಯೋಗಿಗಳು ಕೆಲಸ ಮಾಡುತ್ತಿದ್ದಾರೆ. ಈ ಮೊದಲು ನಾಲ್ಕು ಬಾರಿ ಮಾಹಿತಿ ತಂತ್ರಜ್ಞಾನದ ಉದ್ಯಮಗಳಲ್ಲಿ ಕಾರ್ಮಿಕ ಕೈಗಾರಿಕಾ ಉದ್ಯೋಗ (ಜಾರಿಯಲ್ಲಿರುವ ಆದೇಶ) ಕಾನೂನಿನಲ್ಲಿ ಸರ್ಕಾರ ವಿನಾಯತಿ ನೀಡಿ ಸುತ್ತೋಲೆ ಹೊರಡಿಸಿರುತ್ತಾರೆ. ಕಳೆದ ಬಾರಿ 25–05–2019 ರಂದು ನೀಡಿರುವ ವಿನಾಯತಿ ದಿನಾಂಕ 25–05–2024 ಕ್ಕೆ ಕೊನೆಗೊಳ್ಳಲಿದೆ.

ಮಾಹಿತಿ ತಂತ್ರಜ್ಞಾನದ ಸಂಸ್ಥೆಗಳ ಮಾಲೀಕರು ಸರ್ಕಾರದ ವಿನಾಯತಿಯ ಮೇರೆಗೆ ನೀಡಿರುವ ನಾಲ್ಕು ಷರತ್ತಗಳನ್ನು ಪಾಲಿಸಿರುವುದಿಲ್ಲ ಎನ್ನುವ ಕಾರಣಕ್ಕೆ, ಮಾಹಿತಿ ತಂತ್ರಜ್ಞಾನದ ಉದ್ಯಮಗಳಿಗೆ ಸರ್ಕಾರ ನೀಡಿರುವ ವಿನಾಯತಿಯನ್ನು ರದ್ದುಗೊಳಿಸಲು ಕರ್ನಾಟಕ ರಾಜ್ಯ ಐ.ಟಿ. ಎಂಪ್ಲಾಯೀಸ್ ಯೂನಿಯನ್ ಒತ್ತಾಯಿಸಿತ್ತು.



ವಿನಾಯತಿಯ ಮೇರೆಗೆ ನೀಡಿರುವ ಷರತ್ತುಗಳ ಅನುಸಾರವಾಗಿ, ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಾಗುವಲೈಂಗಿಕದೌರ್ಜನ್ಯ (ನಿರೋಧ, ನಿರ್ಭಂಧನೆ ಹಾಗೂ ನಿವಾರಣೆ) ಕಾಯ್ದೆ ಅಡಿಯಲ್ಲಿ, ಕೆಲಸ ಮಾಡುವ ಪ್ರದೇಶದಲ್ಲಿ ಮಹಿಳಾ ಉದ್ಯೋಗಿಗಳಿಗೆ ಲೈಂಗಿಕ ದೌರ್ಜನ್ಯ ತಡೆಗಟ್ಟಲು ಆಂತರಿಕ ಸಮಿತಿಗಳನ್ನು ಮತ್ತು ಕುಂದುಕೊರತೆ ಪರಿಹಾರ ಸಮಿತಿಯನ್ನು ನೇಮಕ ಮಾಡಬೇಕಿದೆ. ಹಾಗೆಯೇ, ಈ ವಿಭಾಗದಲ್ಲಿ ದುಡಿಯುವ ಉದ್ಯೋಗಿಗಳ ಮೇಲೆ ತೆಗೆದುಕೊಂಡಿರುವ ಹಿಂಬಡ್ತಿ, ವಜಾ ಮಾಡುವುದು ಮತ್ತು ಶಿಸ್ತುಕ್ರಮದಂತಹ ಸಂದರ್ಭಗಳ ಮಾಹಿತಿಯನ್ನು ಕಾರ್ಮಿಕ ಇಲಾಖೆಗಳಿಗೆ ನೀಡಬೇಕಾಗಿದೆ.

ಕೈಗಾರಿಕಾ ವಿವಾದ ಕಾಯಿದೆಯಡಿ ಸರ್ಕಾರದ ಅನುಮತಿಯಿಲ್ಲದೆ ಸಾವಿರಗಟ್ಟಲೆ ಕಾರ್ಮಿಕರನ್ನು, ಯಾವುದೇ ಮಾಹಿತಿ ನೀಡದೆ ಅಥವಾ ಯಾವುದೇ ತನಿಖೆ ಮತ್ತು ತಿಳುವಳಿಕೆ ನೀಡದೆ ಕಾನೂನು ಬಾಹಿರವಾಗಿ ವಜಾ ಮಾಡಲಾಗುತ್ತಿದೆ.

ಮಾಹಿತಿ ತಂತ್ರಜ್ಞಾನದ ಉದ್ಯಮಗಳಲ್ಲಿ ಕಾರ್ಮಿಕ ಕಾನೂನುಗಳಿಗೆ ಸರ್ಕಾರ ವಿನಾಯತಿ ನೀಡುವಾಗ ಮಾಡಿರುವ ಯಾವುದೇ ಷರತ್ತುಗಳನ್ನು ಮಾಲಿಕರು ಪಾಲನೆ ಮಾಡದೆ ಕೆಲಸದಿಂದ ವಜಾ ಮಾಡುವ ಪ್ರಕ್ರಿಯೆ ನಿರಂತರ ನಡೆಯುತ್ತಿದೆ. ಕೈಗಾರಿಕಾ ವಿವಾದ ಕಾನೂನಿನಡಿಯಲ್ಲಿ KITU ಹಲವಾರು ಪ್ರಕರಣಗಳನ್ನು ಕಾರ್ಮಿಕ ಇಲಾಖೆಯ ಗಮನಕ್ಕೆ ತಂದಿರುತ್ತದೆ ಎಂದು ಹೇಳಿರುವ ಸಂಘಟನೆ, ಕಾರ್ಮಿಕ ಕಾನೂನಿನಡಿಯಲ್ಲಿ ಬರುವ ಎಲ್ಲಾ ಸೇವೆಯ ಷರತ್ತುಗಳ ನಿಯಮಗಳನ್ನು ಮಾಹಿತಿ ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನ ಸಂಬಂಧಿತ ಸೇವೆಗಳ ಉದ್ಯಮಗಳಲ್ಲಿ ಇದರ ವ್ಯಕ್ತವ್ಯಾಖ್ಯಾನಗಳನ್ನು ಉದ್ಯೋಗಿಗಳು ಮತ್ತು ಮಾಲಿಕರ ಸಹಭಾಗಿತ್ವದಲ್ಲಿ ನಿರ್ಣಯಿಸಬೇಕಿದೆ, ರಾಜ್ಯ ಸರ್ಕಾರವು ಮಾಹಿತಿ ತಂತ್ರಜ್ಞಾನದ ಕೈಗಾರಿಕೆಯಲ್ಲಿ ನೀಡಿರುವ ವಿನಾಯತಿಯನ್ನು ರದ್ದುಗೊಳಿಸಿ ಉದ್ಯಮಗಳಿಗೆ ಸೂಕ್ತವಾದಂತೆ ಕೈಗಾರಿಕಾ ಉದ್ಯೋಗ (ಜಾರಿಯಲ್ಲಿರುವ ಆದೇಶ) ಜಾರಿ ಮಾಡಿದರೆ ಮಾತ್ರ ಸಾದ್ಯ ಎಂದು ಹೇಳಿದೆ.

ಪ್ರತಿಭಟನೆಯ ನಂತರ ಕಾರ್ಮಿಕ ಸಂಘಟನೆಯ ಅಧ್ಯಕ್ಷರು ವಿ.ಜೆ.ಕೆ. ನಾಯರ್ ಮತ್ತು KITU ಪ್ರದಾನ ಕಾರ್ಯದರ್ಶಿ ಸೂರಜ್ ನಿದಿಯಂಗ ಕಾರ್ಮಿಕ ಅಯುಕ್ತರನ್ನು ಭೇಟಿಮಾಡಿ ಮನವಿ ಸಲ್ಲಿಸಿದರು.

ಸರ್ಕಾರದ ಮಾಹಿತಿ ತಂತ್ರಜ್ಞಾನ ಕೈಗಾರಿಕೆಯಲ್ಲಿ ನೀಡಿರುವ ವಿನಾಯತಿಯ ವಿರುದ್ಧ ಕರ್ನಾಟಕ ರಾಜ್ಯ ಐಟಿ ಎಂಪ್ಲಾಯೀಸ್ ಯೂನಿಯನ್ (ರಿ) (KITU) ಕರ್ನಾಟಕ ಉಚ್ಚ ನ್ಯಾಯಾಲದಲ್ಲಿ ರಿಟ್ ಅರ್ಜಿ ಸಲ್ಲಿಸಿದೆ.

KITU ಸಂಘಟನೆಯು ಮಾಹಿತಿ ತಂತ್ರಜ್ಞಾನದ ಉದ್ಯಮಗಳಲ್ಲಿನ ನೋಂದಾಯಿತ ಏಕ ಕಾರ್ಮಿಕ ಸಂಘಟನೆ ಆಗಿದ್ದು, ಹತ್ತು ಸಾವಿರಕ್ಕೂ ಹೆಚ್ಚು ಸದಸ್ಯರು ಇದರಲ್ಲಿ ನೋಂದಾಯಿತರಾಗಿದ್ದಾರೆ.

ಜನವಾದಿಗಳು ತರಿಸಿದ ಸರಕಾರಿ ಬಸ್ಸು....... ಪುಟ 12 ರಿಂದ

ಆದರೆ ಇಲ್ಲಿಗೆ ಎಲ್ಲವೂ ಸುಖಾಂತ್ಯ ಆಗಲಿಲ್ಲ!

ಊರಿಗೆ ಸರಕಾರಿ ಬಸ್ ಬಂದರೆ ಖಾಸಗಿ ಬಸ್ಸಿನವರು ಸಹಿಸುವುದುಂಟೇ?

ಅದೂ ಜನವಾದಿ, ಡಿವೈಎಫ್ಐ ಪ್ರಯತ್ನದಿಂದ ಊರಿಗೆ ಬಸ್ ಬಂದರೆ ರಾಜಕೀಯದ ಮಂದಿ ಸಹಿಸುತ್ತಾರೆಯೇ!

ಎಲ್ಲವೂ ಸಲೀಸಾದರೆ ಇಲಾಖೆಗಳ ಹೆಗ್ಗಣಗಳ ಪಾಡೇನು?

ಕೆಲವೊಂದು ತಾಂತ್ರಿಕ, ಕೆಲವೊಂದು ಆಡಳಿತಾತ್ಮಕ ಅಡಚಣೆಗಳು.

ಒಳ್ಳೆಯ ಉದ್ದೇಶಕ್ಕೂ ಹತ್ತಾರು ಸಂಕಷ್ಟಗಳು. ದಿನಗಳು ಮಾತ್ರ ಮುಂದೋಡಿದವು.

ಇದೇ ಸಂದರ್ಭದಲ್ಲಿ ಬೈಂದೂರಿನಲ್ಲಿ ಉಡುಪಿ ಜಿಲ್ಲಾಧಿಕಾರಿಯವರ "ಜನತಾ ದರ್ಶನ" ಕಾರ್ಯಕ್ರಮ ಸಂಯೋಜಿಸಲ್ಪಟ್ಟಿತು. ಜನತೆಯ ಅಹವಾಲುಗಳನ್ನು ಸ್ವೀಕರಿಸಲು ಸಿದ್ಧತೆ ನಡೆಯಿತು.

ವಿಷಯ ತಿಳಿದು ಡಿವೈಎಫ್ಐ ಹುಡುಗರು ತಮ್ಮ ಬಸ್ ಬೇಡಿಕೆಯ ಮನವಿ ಪತ್ರದೊಂದಿಗೆ ಡಿಸಿಯವರನ್ನು ಭೇಟಿಯಾಗಿ ತಮ್ಮೂರಿನ ಪರಿಸ್ಥಿತಿಯನ್ನು ವಿವರಿಸಿದರು.

ಈಗಾಗಲೇ ಈ ವಿಚಾರದ ಬಗ್ಗೆ ತಿಳಿದಿದ್ದ ಮಾನ್ಯ ಜಿಲ್ಲಾಧಿಕಾರಿಗಳು ಯುವಕರ ಬೆನ್ನು ತಟ್ಟಿ ಭರವಸೆ ಮೂಡಿಸಿದರು.

ಗ್ರಾಮಕ್ಕೆ ಮರುದಿನಗಳಲ್ಲಿ ಭೇಟಿ ನೀಡಿ ಪರಿಶೀಲಿಸಿ ಸರಕಾರಿ ಬಸ್ ಸಂಚಾರಕ್ಕೆ ಶಿಫಾರಸು ಮಾಡಿದರು.

ಸತತವಾದ ಪ್ರಯತ್ನ, ಒಗ್ಗಟ್ಟಿನ ಕಾರ್ಯತಂತ್ರ, ಜನಪರ ಆಲೋಚನೆ ಮತ್ತು ಗ್ರಾಮಸ್ಥರ ವಿಶ್ವಾಸದ ಮೂಲಕ ಗ್ರಾಮದ ಜನತೆಯ ಬಹುಕಾಲದ ಬೇಡಿಕೆಗೆ ಸರ್ಕಾರದ ಅಧಿಕೃತ ಒಪ್ಪಿಗೆ ಮಂಜೂರಾಯಿತು.

ಸಾರ್ವಜನಿಕರ ಸುಲಲಿತವಾದ ಪ್ರಯಾಣಕ್ಕೆ ಸೂಕ್ತವಾದ ಸರ್ಕಾರಿ ಬಸ್ಸುಗಳು ಹಳ್ಳಿ ಮೂಲೆಗಳಲ್ಲೂ ಸಂಚರಿಸುವಂತೆ ಆಯಿತು. ಜೊತೆಗೆ ಸರಕಾರದ "ಶಕ್ತಿ" ಯೋಜನೆಯ ಫಲಾನುಭವಿಗಳಾಗಲು ಗ್ರಾಮದ ಮಹಿಳೆಯರು ಮತ್ತು ವಿದ್ಯಾರ್ಥಿನಿಯರಿಗೆ ಅವಕಾಶವನ್ನು ತೆರೆದಿಟ್ಟಿತು.

ಇದೇ ಮಾರ್ಚ್ ಹನ್ನೊಂದರಂದು ಗ್ರಾಮದಲ್ಲಿ ಸಂಚಾರ ಆರಂಭಿಸಿದ ಸರಕಾರಿ ಬಸ್ಸುಗಳು ಒಂದು ಧೀರೋದಾತ್ತ ಹೋರಾಟದ ಯಶಸ್ಸಿನ ರಾಯಭಾರಿಗಳಂತೆ ಅತ್ತ ಬೈಂದೂರಿಗೂ ಇತ್ತ ಕುಂದಾಪುರಕ್ಕೂ ಪಯಣಿಸುತ್ತಾ ಸಂಘಟಿತ ಪ್ರಯತ್ನಗಳು ಎಂದಿಗೂ ಸೋಲುವುದಿಲ್ಲ ಎಂಬ ಸಂದೇಶವನ್ನು ನಿರಂತರವಾಗಿ ಸಾರುತ್ತಲೇ ಇರಲಿ....

–ರಮೇಶ್ ಗುಲ್ವಾಡಿ

ನಮ್ಮ ಬೇಡಿಕೆಗಳೇ ನಮ್ಮ ರಾಜಕೀಯ..... ಪುಟ 13 ರಿಂದ

ಆಮದು, ಮಾರುಕಟ್ಟೆ ಮತ್ತು ಪೂರೈಕೆಯನ್ನು ನಿಯಂತ್ರಿಸಲು ಬಯಸುತ್ತದೆ. ಕೃಷಿ ನೀತಿ ರೈತ ಕೇಂದ್ರಿತವಾಗಿರಬೇಕು. ಸದ್ಯದ ಪರಿಸ್ಥಿತಿಯಲ್ಲಿ ರೈತ ಎಲ್ಲದರಿಂದ ದೂರವಾಗಿದ್ದಾನೆ. 2014–2022ರ ನಡುವೆ ಒಂದು ಲಕ್ಷ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಎನ್‌ಸಿಆರ್‌ಬಿ ನೀಡಿದ ವರದಿಯು ಇದನ್ನು ತಿಳಿಸುತ್ತದೆ. 23 ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ಬೆಲೆಯನ್ನು ಹೆಚ್ಚಿಸಲಿದೆ ಎಂಬುದು ಕಲ್ಪನೆ. ತಾಳೆ ಎಣ್ಣೆಯನ್ನು ಆಮದು ಮಾಡಿಕೊಳ್ಳಲು ಸರ್ಕಾರ 1.75 ಲಕ್ಷ ಕೋಟಿ ರೂ. ವೆಚ್ಚ ಮಾಡುತ್ತಿದೆ. ನಮ್ಮ ರೈತರೂ ಅದನ್ನೇ ಉತ್ಪಾದಿಸಬಹುದು. ಅದೇ ರೀತಿ, ಕಬ್ಬಿನ ಅಲ್ಪ ಪ್ರಮಾಣದ ಲಾಭದಾಯಕವಾದ ಬೆಲೆ ಏರಿಕೆ ಪರಿಹಾರವಲ್ಲ. ದೇಶಾದ್ಯಂತ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ನಿಜವಾದ ಬಿಕ್ಕಟ್ಟನ್ನು ಪರಿಹರಿಸುವ ಸಮಗ್ರ ನೀತಿಯಾಗಲಿ ಅಥವಾ ಉದ್ದೇಶವಾಗಲಿ ಸರಕಾರಕ್ಕಿಲ್ಲ.

(ಕೃಪೆ: 'ಫ್ರಂಟ್ ಲೈನ್' ಮತ್ತು ಪ್ರಜಾಶಕ್ತಿ)

STATEMENT OF THE OWNERSHIP ETC

The Weekly Newspaper "JANASHAKTHI KANNADA VARA PATRIKE"

Form IV

(See Rule 8)

1.	Place of Publication	:	EMS Bhavana, No.37/A, 8th Cross, Mahalakshmi Layout, Bangalore-560086 (Karnataka)
2.	Periodicity of Publication	:	weekly
3.	Printer's Name	:	U. BASAVARAJ
	(Whether Citizen of India? If Foreigner, State the Country of Origin)	:	Indian
4.	Address	:	No. 12, 18th Cross, Sampangirama Nagar, Bangalore 560027
5.	Editor`s Name	:	NITYANANDASWAMI
	(Whether Citizen of India? If Foreigner, State the Country of Origin)	:	Indian
	Address	:	EMS Bhavana, No.37/A, 8th Cross, Mahalakshmi Layout, Bangalore-560086 (Karnataka)
6.	Name and address of Individuals Communist Party of India(Marxist) Who own the News paper and Karnataka State Committee partners or Shareholders holding more then one percent of the Total capital	:	EMS Bhavana, No.37/A, 8th Cross, Mahalakshmi Layout, Bangalore-560086 (Karnataka)

I U. BASAVARAJ, here by declare that the particulars given above are true to the best of my knowledge and belief.

Date : March 15, 2024
Bangalore

Sd/-
U. BASAVARAJ
Publisher

ದೆಹಲಿ ನಮ್ಮದು, ರೈತರು ಮತ್ತು ಕಾರ್ಮಿಕರ ಬಗ್ಗೆ ಮಾತನಾಡುವವರು ಮಾತ್ರವೇ ದೇಶವನ್ನು ಆಳಲು ಸಾಧ್ಯ!
ದೆಹಲಿಯ ಕಿಸಾನ್ ಮಜ್ದೂರ್ ಮಹಾಪಂಚಾಯತ್ ನಲ್ಲಿ ಮೊಳಗಿದ ಘೋಷಣೆ



ದೆಹಲಿ ಆಗತಾನೆ ಎಚ್ಚರಗೊಳ್ಳುತ್ತಿದ್ದ ಸಮಯ. ಸಾವಿಸಾರು ಸಂಖ್ಯೆಯ ರೈತರು ದೆಹಲಿಯ ರಸ್ತೆಗಳಲ್ಲಿ, ಕೈಯಲ್ಲಿ ಬಾವುಟಗಳನ್ನಿಡಿದು ಗುಂಪು ಗುಂಪಾಗಿ ಬರತೊಡಗಿದ್ದರು. ರೈಲ್ವೇ ನಿಲ್ದಾಣದಿಂದ, ಖಾಸಗೀ ವಾಹನಗಳಿಂದ ಬಂದಿದ್ದ ಈ ರೈತರು ದೆಹಲಿಯ ಐತಿಹಾಸಿಕ ರಾಮಲೀಲಾ ಮೈದಾನದ ಸುತ್ತ ನೆರೆದಿದ್ದರು. ಈ ದೃಶ್ಯವನ್ನು ನೋಡಿದವರಿಗೆ ಕಳೆದ ಮೂರು ವರ್ಷಗಳ ಹಿಂದೆ ದೆಹಲಿಯ ರಾಷ್ಟ್ರೀಯ ಹೆದ್ದಾರಿ ಗಡಿಗಳಲ್ಲಿ ವರ್ಷಗಟ್ಟಲೆ ಟೆಂಟ್ ಹೊಡೆದು ಕುಳಿತಿದ್ದವರೆ ಈಗ ಇಲ್ಲಿಗೆ ಬಂದಿದ್ದಾರಲ್ಲ ಎಂದು ಆಶ್ಚರ್ಯವಾಯಿತು. ಇನ್ನೂ ಕೆಲವರಿಗೆ ಕಳೆದ 15 ದಿನಗಳ ಹಿಂದೆ ಇವರನ್ನು ಪಂಜಾಬ್ ಗಡಿಯಲ್ಲೇ ತಡೆದು ಮುಂದೆ ದೆಹಲಿಯತ್ತ ಬರದಂತೆ ಪೊಲೀಸರು ಇನ್ನಿಲ್ಲದ ರೀತಿಯಲ್ಲಿ ಡ್ರೋಣ್ ಗಳ ಮೂಲಕ ಅಶ್ರುವಾಯು ಶೆಲ್ ಗಳನ್ನು ಸಿಡಿಸಿ, ರಸ್ತೆಗೆ ಮಳೆ ಹೊಡೆಯುವ ಮೂಲಕ, ಹೆದ್ದಾರಿ ಮಧ್ಯದಲ್ಲಿ ಕಾಂಕ್ರೀಟ್ ಗೋಡೆಗಳನ್ನು ನಿರ್ಮಾಣ ಮಾಡುವ ಮೂಲಕ ದಾಳಿಗಳನ್ನು ನಡೆಸಿದ್ದರು. ಈಗ ಅದೇ ರೈತರು ದೆಹಲಿಯ ಬೀದಿಗಳಲ್ಲಿ ಬಾವುಟ ಹಿಡಿದು ಮೋದಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಹಾಕುತ್ತಿರುವುದನ್ನು ನೋಡಿ ಆಶ್ಚರ್ಯಗೊಂಡರು.

ಹೌದು, ಮಾರ್ಚ್ 14 ರಂದು ದೆಹಲಿಯ ರಾಮಲೀಲ ಮೈದಾನದ ಸುತ್ತಲಿನ ವಾತಾವರಣ ಹೀಗೇ ಇತ್ತು. ಎಲ್ಲಿ ನೋಡಿದರೂ ರೈತ ಕಾರ್ಮಿಕರೇ ಕಾಣುತ್ತಿದ್ದರು. 2020-2021 ರಲ್ಲಿ ಒಂದು ವರ್ಷಗಳ ಕಾಲ ನಡೆದ ಐತಿಹಾಸಿಕ ರೈತ ಚಳುವಳಿಗೆ ಮೋದಿ ಸರ್ಕಾರ ನೀಡಿದ್ದ ಲಿಖಿತ ಭರವಸೆಗಳನ್ನು ಈಡೇರಿಸದೆ ದೇಶದ ರೈತ ಸಮುದಾಯಕ್ಕೆ ದ್ರೋಹವೆಸಗಿದೆ. ಆ ಎಲ್ಲಾ ಭರವಸೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿ, ಜೊತೆಗೆ ಇದೇ ವಿಚಾರಗಳ ಬಗ್ಗೆ ಪ್ರತಿಭಟಿಸಲು ಮುಂದಾದ ರೈತರನ್ನು ಪಂಜಾಬ್ ನ ಗಡಿಗಳಲ್ಲೇ ತಡೆದು, ಅವರ ಮೇಲೆ ನಡೆಸಿದ ಹಿಂಸಾತ್ಮಕ ದೌರ್ಜನ್ಯವನ್ನು ಖಂಡಿಸಿ, ಸಂಯುಕ್ತ ಕಿಸಾನ್ ಮೋರ್ಚಾ (ಎಸ್.ಕೆ.ಎಂ.) ಮತ್ತು ಕೇಂದ್ರ ಕಾರ್ಮಿಕ ಸಂಘಟನೆಗಳ ಜಂಟಿ ವೇದಿಕೆ (ಜೆಸಿಟಿಯು) ಒಟ್ಟಿಗೆ ಮಾರ್ಚ್ 14 ರಂದು ದೆಹಲಿಯ ರಾಮಲೀಲಾ ಮೈದಾನದಲ್ಲಿ ಕಿಸಾನ್ ಮಜ್ದೂರ್ ಮಹಾ ಪಂಚಾಯತ್ ನಡೆಸಲು ತೀರ್ಮಾನಿಸಿದ್ದವು.

ಈ ಕರೆಗೆ ಓಗೊಟ್ಟ ರೈತ ಕಾರ್ಮಿಕರು ದೇಶದ ವಿವಿಧ ಭಾಗಗಳಿಂದ ದೆಹಲಿಯತ್ತ ಹೆಜ್ಜೆ ಹಾಕಿದ್ದರು. ಅದರಲ್ಲಿ ಪಂಜಾಬ್, ಹರಿಯಾಣ, ಉತ್ತರಪ್ರದೇಶ, ರಾಜಸ್ಥಾನ ರಾಜ್ಯಗಳ ರೈತರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಹಲವು ಷರತ್ತುಗಳೊಂದಿಗೆ ಪೊಲೀಸರ ಅನುಮತಿ

ರಾಮಲೀಲಾ ಮೈದಾನದಲ್ಲಿ ಮಹಾ ಪಂಚಾಯತ್ ನಡೆಸಲು ದೆಹಲಿ ಪೊಲೀಸರು ಕೊನೆಯ ಕ್ಷಣದವರೆಗೂ ಅನುಮತಿಯನ್ನು ನಿರಾಕರಿಸುತ್ತ, ಕೊನೆಗೆ ಹಲವು ಷರತ್ತುಗಳೊಂದಿಗೆ ಮೈದಾನದಲ್ಲಿ ಸಭೆ ನಡೆಸಲು ಅನುಮತಿ ನೀಡಿದರು. ಈ ಷರತ್ತಿನಲ್ಲಿ ಕೇವಲ 5000 ಜನ ಮಾತ್ರ ಸೇರಬೇಕು ಎಂಬುದು ಒಂದಾಗಿತ್ತು. ಅದಕ್ಕಾಗಿಯೇ ಮೈದಾನದ ಅರ್ಧದಷ್ಟು



ಭಾಗಕ್ಕೆ ನೀರು ತುಂಬಿಸಿ ಪ್ರತಿಭಟನಾಕಾರರು ಕುಳಿತುಕೊಳ್ಳದಂತೆ ಮಾಡಲಾಗಿತ್ತು ಎಂದು ಮುಖಂಡರು ದೂರಿದ್ದರು. ಇದು ವಾಸ್ತವದಲ್ಲಿ ಮೈದಾನಕ್ಕೆ ಪ್ರವೇಶ ಪಡೆದಾಗ ಸತ್ಯ ಎಂಬುದು ಅರಿವಾಯಿತು. ಆದರೆ ಈ ಶರತ್ತುಗಳಿಗೆ ಕಿವಿಗೊಡದ ರೈತ ಕಾರ್ಮಿಕರು ಸಾಗರೋಪಾದಿಯಲ್ಲಿ ಹರಿದು ಬಂದರು. ಪ್ರತಿದಿನ ಮಣ್ಣು, ಕೆಸರಿನಲ್ಲೇ ಜೀವನ ಸಾಗಿಸುತ್ತಾ ತಮ್ಮ ಕೈಗಳನ್ನು ಕೆಸರು ಮಾಡಿಕೊಂಡು ದೇಶಕ್ಕೆ ಅನ್ನ ನೀಡುವ ಅನ್ನದಾತರಿಗೆ ಈ ಮೈದಾನದ ಕೃತಕ ನೀರು, ಕೆಸರು ಪ್ರತಿಭಟನೆಯ ಉದ್ದೇಶಕ್ಕೆ ಯಾವುದೇ ಅಡ್ಡಿಯನ್ನು ಉಂಟುಮಾಡಲಿಲ್ಲ.

ಮೈದಾನಕ್ಕೆ ದೊಡ್ಡ ಸಂಖ್ಯೆಯ ರೈತ ಕಾರ್ಮಿಕರು ಬಂದು ಸೇರಿದಂತೆ ವಿಶಾಲ ವೇದಿಕೆಯಿಂದ ಮುಖಂಡರುಗಳು ಮಾತನಾಡಲು ಆರಂಭಿಸಿದರು. ಫೆಬ್ರವರಿ 21ರಂದು, ಪಟಿಯಾಲಾದ ಧಾಭಿ ಗುಜ್ರಾನ್‌ನಲ್ಲಿ ಪ್ರತಿಭಟನಾ ನಿರತ ರೈತರ ಮೇಲೆ ಪೊಲೀಸರು ಅಶ್ರುವಾಯು ಪ್ರಯೋಗಿಸಿದಾಗ, ತಲೆಗೆ ಗಾಯವಾಗಿ ಸಾವನ್ನಪ್ಪಿದ ಬಟಿಂಡಾ ಜಿಲ್ಲೆಯ ಬಲ್ಲೋ ಗ್ರಾಮದ ರೈತ ಶುಭಕರಣ್ ಸಿಂಗ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸುವುದರೊಂದಿಗೆ ಪ್ರತಿಭಟನಾ ಸಭೆ ಪ್ರಾರಂಭವಾಯಿತು.

"ದೆಹಲಿ ನಮ್ಮದು, ರೈತರು ಮತ್ತು ಕಾರ್ಮಿಕರ ಬಗ್ಗೆ ಮಾತನಾಡುವವರು ಮಾತ್ರವೇ ದೇಶವನ್ನು ಆಳಲು ಸಾಧ್ಯ"! ಎಂದು ಪಂಜಾಬ್, ಹರಿಯಾಣ, ಉತ್ತರ ಪ್ರದೇಶ, ಕರ್ನಾಟಕ, ಕೇರಳ, ಮಧ್ಯಪ್ರದೇಶ ಮತ್ತು ಉತ್ತರಾಖಂಡದ ರೈತ ಮತ್ತು ಕಾರ್ಮಿಕ ಸಂಘಟನೆಗಳ ಮುಖಂಡರು ಕಾರ್ಪೊರೇಟ್ ಕಂಪನಿಗಳ ಹಿತಾಸಕ್ತಿಯಲ್ಲಿ ಕೆಲಸ ಮಾಡುತ್ತಿರುವ ಕೋಮುವಾದಿ, ಸರ್ವಾಧಿಕಾರಿ ಸರ್ಕಾರಕ್ಕೆ ತಕ್ಕ ಪಾಠ ಕಲಿಸಬೇಕು ಎಂದು ಕರೆ ನೀಡಿದರು.

ಭಾರತೀಯ ಕಿಸಾನ್ ಯೂನಿಯನ್ ನ ರಾಕೇಶ್ ಟಿಕಾಯತ್ ತಮ್ಮ ಭಾಷಣದಲ್ಲಿ, "ಜನವರಿ 22, 2021ರ ನಂತರ ಸರ್ಕಾರವು ರೈತ ಸಂಘಟನೆಗಳೊಂದಿಗೆ ಮಾತನಾಡಿಲ್ಲ. ಮಾತುಕತೆ ನಡೆಯದೇ ಸಮಸ್ಯೆಗಳು ಹೇಗೆ ಬಗೆಹರಿಯುತ್ತವೆ?" ಎಂದು ಕೇಳಿದರು.

ಸರ್ಕಾರ ಕೊಟ್ಟ ಭರವಸೆಗಳು ಈಡೇರಿಲ್ಲ

ಅಖಿಲ ಭಾರತ ಕಿಸಾನ್ ಸಭಾದ (ಎಐಕೆಎಸ್) ಪ್ರಧಾನ ಕಾರ್ಯದರ್ಶಿ ಡಾ. ವಿಜು ಕೃಷ್ಣನ್ ಮಾತನಾಡಿ, "2020-21ನೇ ಸಾಲಿನಲ್ಲಿ ರೈತ ಚಳವಳಿಯ ಕೊನೆಯ ದಿನಗಳಲ್ಲಿ ನರೇಂದ್ರ ಮೋದಿ ಸರಕಾರವು ಎಂಎಸ್‌ಪಿ [ಕನಿಷ್ಠ ಬೆಂಬಲ ಬೆಲೆ] ನೀಡುವುದಾಗಿ ಭರವಸೆ ನೀಡಿತ್ತು. ಕಾನೂನುಬದ್ಧವಾಗಿ ಅ2+50% ರಷ್ಟು ನಿಗದಿಪಡಿಸುವ ಭರವಸೆ ಜಾರಿಯಾಗಿಲ್ಲ. "ಸಾಲವನ್ನು ಮನ್ನಾ ಮಾಡಲಾಗುವುದು ಎಂದು ಅವರು ಭರವಸೆ ನೀಡಿದ್ದರು. ಆದರೆ ಅದು ಇನ್ನೂ ಈಡೇರಿಲ್ಲ. ವರ್ಷವಿಡೀ ನಡೆದ ಅಂದಿನ ರೈತ ಪ್ರತಿಭಟನೆಯಲ್ಲಿ ಮೃತಪಟ್ಟ 736 ರೈತರ ಕುಟುಂಬಗಳಿಗೆ ಪರಿಹಾರ ನೀಡುವ ಸರ್ಕಾರದ ಭರವಸೆ ಇನ್ನೂ ಈಡೇರಿಲ್ಲ. ಧರಣಿ ನಿರತರ ಮೇಲೆ ದಾಖಲಾಗಿರುವ ಎಲ್ಲ ಪ್ರಕರಣಗಳನ್ನು ಹಿಂಪಡೆಯುವ ಭರವಸೆಯೂ ಈಡೇರಿಲ್ಲ. ಭರವಸೆಯಂತೆ ವಿದ್ಯುತ್ ಕಾಯ್ದೆಯಲ್ಲಿ ಮಾಡಿರುವ ತಿದ್ದುಪಡಿಗಳನ್ನೂ ಹಿಂಪಡೆಯಬೇಕು, ಅದೂ ಆಗಿಲ್ಲ" ಎಂದು ಆರೋಪಿಸಿದರು.

ಸಂಯುಕ್ತ ಕಿಸಾನ್ ಮೋರ್ಚಾದ ಭಾರೀ ವಿರೋಧದ ನಡುವೆಯೂ ಕೇಂದ್ರ ಸಚಿವ ಅಜಯ್ ಮಿಶ್ರಾ ತೇಣಿ ಅವರು ಕಚೇರಿಯಲ್ಲಿ ಮುಂದುವರಿದಿರುವ ವಿಷಯವನ್ನು ಕೃಷ್ಣನ್ ಪ್ರಸ್ತಾಪಿಸಿದರು. ಅವರ ಪುತ್ರ ಆಶಿಶ್ ಮಿಶ್ರಾ ಉತ್ತರ ಪ್ರದೇಶದ ಲಖೀಂಪುರ ಖೇರಿಯಲ್ಲಿ ಐವರು ರೈತರು ಮತ್ತು ಪತ್ರಕರ್ತರ ಮೇಲೆ ಕಾರು ಹತ್ತಿಸಿ ಅವರ ಸಾವಿಗೆ ಕಾರಣವಾದರೂ ಇದುವರೆಗೂ ಆರೋಪಿಯ ಬಂಧನವಾಗಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕರ್ನಾಟಕದ ತಂಡ

ಈ ಐತಿಹಾಸಿಕ ಮಹಾ ಪಂಚಾಯತ್ ನಲ್ಲಿ ಸಂಯುಕ್ತ ಹೋರಾಟ ಕರ್ನಾಟಕದ ತಂಡ ಭಾಗವಹಿಸಿತ್ತು. ರಾಜ್ಯ ರೈತ ಸಂಘದ ಬಡಗಲಪುರ ನಾಗೇಂದ್ರ, ಚಾಮರಸ ಮಾಲೀಪಾಟೀಲ್, ಪೂಣಚ್ಚ, ಕರ್ನಾಟಕ ಪ್ರಾಂತ ರೈತ ಸಂಘದ ಟಿ.ಯಶವಂತ, ಎಚ್. ಆರ್.ನವೀನ್ ಕುಮಾರ್ ಸೇರಿದಂತೆ ಹಲವು ಮುಖಂಡರು ಇದ್ದರು

ಈ ನಡುವೆ ಕೇಂದ್ರ ಸರ್ಕಾರ ರೈತ ಚಳುವಳಿಯಲ್ಲಿ ಒಡಕು ತರುವ ಪ್ರಯತ್ನಗಳನ್ನು ನಿರಂತರವಾಗಿ ಮಾಡುತ್ತಿದ್ದು, ಅದಕ್ಕೆಲ್ಲಾ ಉತ್ತರದಂತೆ ದೆಹಲಿಯ ರಾಮಲೀಲ ಮೈದಾನದಲ್ಲಿ ನಡೆದ ಕಿಸಾನ್ ಮಜ್ದೂರ್ ಮಹಾ ಪಂಚಾಯತ್ ಸಂಯುಕ್ತ ಕಿಸಾನ್ ಮೋರ್ಚಾದಲ್ಲಿನ ತನ್ನ ಒಗ್ಗಟ್ಟನ್ನು ಪ್ರದರ್ಶಿಸಿತು. ಮಾತ್ರವಲ್ಲದೆ ಭಾಗವಹಿಸಿದ್ದ ಎಲ್ಲರಲ್ಲೂ

ಕಿಸಾನ್ ಏಕ್ತಾ ಜಿಂದಾಬಾದ್ (ರೈತರ ಐಕ್ಯತೆ ಜಿರಾಯುವಾಗಲಿ)

ಕಿಸಾನ್ ಮಜ್ದೂರ್ ಏಕ್ತಾ ಜಿಂದಾಬಾದ್ (ರೈತ ಕಾರ್ಮಿಕರ ಐಕ್ಯತೆ ಚಿರಾಯುವಾಗಲಿ) ಘೋಷಣೆಗಳು ಮೊಳಗುತ್ತಿದ್ದವು.

ಮಾರ್ಚ್ 23-25 "ಪ್ರಜಾಪ್ರಭುತ್ವ ಉಳಿಸಿ" ಆಂದೋಲನ

ಈ ರೈತ ಕಾರ್ಮಿಕರ ಒಗ್ಗಟ್ಟನ್ನು ಮುಂದುವರೆಸಲು ಹಲವು ಹಂತದ ಚಳುವಳಿಗೆ ಕರೆ ನೀಡಲಾಗಿದ್ದು ಮಾರ್ಚ್ 23-25 "ಪ್ರಜಾಪ್ರಭುತ್ವ ಉಳಿಸಿ" ಆಂದೋಲನಕ್ಕೆ ಮಹಾಪಂಚಾಯತ್ ಕರೆ ನೀಡಿದೆ. ಈ ದಿನಗಳಲ್ಲಿ ದೇಶಾದ್ಯಂತ ಪ್ರತಿ ಗ್ರಾಮಗಳಲ್ಲೂ ಮುಂಬರುವ ಚುನಾವಣೆಯಲ್ಲಿ ಹಣಬಲ, ತೋಳ್ಬಲಗಳನ್ನು ಬಳಸಿ ಪ್ರಜಾಪ್ರಭುತ್ವವನ್ನು ನಾಶಮಾಡುವ ಪ್ರವೃತ್ತಿಯ ವಿರುದ್ಧ ವ್ಯಾಪಕ ಜನಾಂದೋಲನ ನಡೆಸಲು ಕರೆ ನೀಡಲಾಗಿದೆ.

-ಎಚ್.ಆರ್.ನವೀನ್ ಕುಮಾರ್, ಹಾಸನ

ಕರ್ನಾಟಕದ ಪ್ರತಿನಿಧಿಗಳು



NEW No. MAG(3)/NPP/205/2021-2022
JANASHAKTHI KANNADA VARA PATRIKE March 18-24, 2024 Price: Rs. 10/- Date of Publication: 15 March 2024 RNI No. KARKAN /2006/17926 Posted on 19-03-2024
Posted at BG PSO, BG - 560026 **Posted at Periodical Rate -** Rs. 2

ನಾಟಕ: 'ತಲ್ಕಿ' ಉತ್ತಮ ಪ್ರದರ್ಶನ

ಬಾಬು ಪಿಲಾರ್



ನಾಟಕದ ಕೊನೆಯಲ್ಲಿ ಇಡೀ ತಂಡದ ನಟನಾ ಪಾತ್ರಧಾರಿಗಳೆಲ್ಲರೂ ಸಭಾಂಗಣಕ್ಕಿಳಿದು ಯಾಚನಾ ಭಾವದಿಂದ ಕೈಮುಗಿದುಕೊಂಡಾಗ ಸಭಿಕರೆಲ್ಲರೂ ಎದ್ದು ನಿಂತು ಸ್ಪಂಧಿಸಿದ ಆ ಒಂದು ಭಾವಸ್ಪಂದನಾ ಕ್ಷಣವನ್ನು ಮರೆಯುವುದು ಅಸಾಧ್ಯ.

ಆ ಮಧುರ ಬಾಂಧವ್ಯದ ಮಾನಸ ಮಿಳಿತವೇ ಅವರಿಗಿನ್ನೂ ಭೂಮಿಯಲ್ಲಿ ಬಾಳಿ ಬದುಕಬೇಕೆಂಬ ಆಶೆಯ ಚಿಗುರೊಡೆಸುವಂತಿತ್ತು.

ತಾವು ಯಾರಿಗಾಗಿ ಬದುಕಬೇಕು?

ಈ ಸಮಾಜದಲ್ಲಿ ಮನೆಯವರಿಂದಲೂ ಗಂಡಸರಿಂದಲೂ ಹೆಂಗಸರಿಂದಲೂ ತಿರಸ್ಕಾರ ಭಾವಕ್ಕೊಳಗಾಗಿ– ಯಾರಿಗೂ ಬೇಡದವರಾಗಿ ನೊಂದು ಬೆಂದು ಬದುಕುವುದಕ್ಕಿಂತಲೂ ಸಾಯುವುದೇ ಮೇಲೆಂಬ ನಿರ್ಧಾರ ತಳೆದ ಮನಸುಗಳ ನಡುವೆ ಹೊಸ ಬೆಳಕಿನ ಕಿರಣವೊಂದು ಮೂಡುವಂತಾಗಿತ್ತು.

ಸಾಯುವುದು ಪರಿಹಾರವಲ್ಲ.. ನಾವು ಬದುಕಬೇಕು.. ನಮಗಾಗಿಯೇ ಬದುಕಬೇಕು.. ಬದುಕನ್ನು ನಾವು ಸಂಭ್ರಮಿಸಬೇಕು... ಸಾವಿನ ಪಯಣದ ಕೊನೆವರೆಗೂ ಸಂತಸ ಪಡಬೇಕು...

ಹೀಗೊಂದು ಬದುಕುಕಟ್ಟಿಕೊಂಡು ತಮ್ಮದೇ ಲೋಕದಲ್ಲಿ ಕಷ್ಟ ನೋವುಗಳನ್ನೆಲ್ಲಾ ಮರೆತು ಜೀವನವನ್ನು ಸಂಭ್ರಮಿಸುವ ಕಥಾ ಹಂದರವೇ "ತಲ್ಕಿ."

ತಮ್ಮೆಲ್ಲಾ ಕನಸುಗಳನ್ನು ನಾಟಕದ ಮೂಲಕ ತೆರೆಯ ಮುಂದೆ ಪ್ರದರ್ಶಿಸಿದ ಮಂಗಳಮುಖಿಯರು

ತಮ್ಮದೇ ಜೀವನ ಶೈಲಿಯನ್ನು ಕಥೆಯಾಗಿ ರೂಪಿಸಿದ್ದಾರೆ.

ಮಂಗಳಮುಖಿಯರೇ ಕಟ್ಟಿದ "ಪಯಣ" ಬೆಂಗಳೂರು ನಾಟಕ ತಂಡವು ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಿದೆ.

ಸಹನೆ ಪ್ರೀತಿ ವಾತ್ಸಲ್ಯ ಮಮಕಾರ ಗುರು ಹಿರಿಯರಿಗೆ ಗೌರವ ಕೊಡುವಂತ ತಮ್ಮ, ಸಮುದಾಯದೊಳಗೆ ತಾವೇ ಸೃಷ್ಟಿಸಿದ ಸಂಸ್ಕಾರದ ನಡೆ–ಈ ಎಲ್ಲವನ್ನು ಹದಗೊಳಿಸಿ ಅವರ ನಿತ್ಯ ಜೀವನದ ಕಥೆಗೆ ಜೀವ ತುಂಬಿದ್ದಾರೆ.

ಪ್ರತಿಯೊಬ್ಬರ ಸ್ವಂತ ಅನುಭವದ ಒಂದೊಂದು ಕಥೆಯಿದೆ. ಆ ಕಥೆಯೊಳಗೆ ಅನುಭವಿಸಿದ ನೋವಿನ ಸೆಲೆಯಿದೆ. ಬೆಂಗಳೂರಿನ ಹಾದಿಬೀದಿಯಲ್ಲಿ ಪೋಲೀಸರಿಂದ ತಿಂದ ಚಡಿ ಏಟಿನ ಗುರುತು, ಬದುಕು ಸಾಗಿಸಲು ಜನರನ್ನು ಸತಾಯಿಸಿ ಹಣ ಸಂಪಾದಿಸುವ ದಂಧೆ, ಜನಗಳಿಂದಾಗುವ ಅವಮಾನ ತಾತ್ಸಾರದ ನುಡಿ, ಪ್ರೀತಿಸಿ ವಂಚಿಸಿದ ಪುರುಷರ ತ್ರಷೆ, ಮಕ್ಕಳ ತಂದೆ ಯಾರೆಂದು ಹೇಳಲಾಗದ ಸಂಕಟಕ್ಕೆ ಸಿಲುಕಿ ಸಮಾಜದಲ್ಲಿ ಹೆಣ್ಣೊಬ್ಬಳು ಅನುಭವಿಸಿದ ನೋವು ಸಂಕಟದ ಕಥೆ, ಲೈಂಗಿಕ ವೃತ್ತಿಯಲ್ಲಿ ಸಂಪಾದಿಸಿದ ಹಣವನ್ನು ತಂದೆಯ ಕೈಗಿತ್ತು ತನ್ನ ಕನಸಿನ ಮನೆಯನ್ನು ಕಟ್ಟಿಸಿ, ಆ ಮನೆಗೆ ತಾನೇ ಹೊರಗಿನವಳಾಗಿ ಅನುಭವಿಸಿದ ನೋವಿನ ಕಥೆ..

ಮನೆಯವರ ಒತ್ತಾಯಕ್ಕಾಗಿ ಮದುವೆ ಮಾಡಿಸಿಕೊಂಡರೂ ತಮ್ಮ ಭಾವನೆಗಳಲ್ಲಿ ಯಾವೊಂದು ಬದಲಾವಣೆಗಳಿಲ್ಲದೆ ಸಂಕಟಪಡುವ ಕಥೆ..

ಶಾಕುಂತಲೆಯಾಗಿ, ರಾಣಿ ಮಹಾರಾಣಿಯರಾಗಿ, ಅರ್ಧ ನಾರೀಶ್ವರಳಾಗಿ, ಜಯಮಾಲಿನಿಯಾಗಿ, ನಾಟ್ಯವಾಡುತ್ತಾ ತಮ್ಮ ತಮ್ಮ ಕನಸುಗಳನ್ನು ನನಸು ಮಾಡಲು ಪರದೆಯ ಮುಂದೆ ಬಂದಿರುವ ಈ ಮಂಗಳಮುಖಿಯರ ಭಿನ್ನವಿಕೆ ಏನೆಂದರೆ ... ನಮ್ಮ ಈ ಸ್ಥಿತಿಗೆ ಮರುಗಿ ಕರುಣೆ ತೋರುವ ಬದಲು ಸಮಾಜದಲ್ಲಿ ನಾವೂ ನಿಮ್ಮಂತೆಯೇ ಮನುಷ್ಯರೆಂಬುದಾಗಿ ಗೌರವದಿಂದ ಕಂಡರೆ ಅಷ್ಟೇ ಸಾಕು ಎನ್ನುತ್ತಾರೆ.

ಈ ಕಥೆಯಲ್ಲಿ.. ಅವರೊಳಗೆ ಜಗಳವಾದರೆ ಕ್ಷಣಮಾತ್ರದಲ್ಲಿ ಮತ್ತೆ ಒಂದಾಗ್ತಾರೆ.. ಮನೆಯೊಳಗಣ ಕೆಲಸಗಳನ್ನು ಪರಸ್ಪರ ಹಂಚಿಕೊಂಡು ಮಾಡಿ ಮುಗಿಸ್ತಾರೆ.

ಈ ನಾಟಕದಲ್ಲಿ ಭಾಗವಹಿಸಿರುವವರ ವಯಸ್ಸು ಐವತ್ತು ದಾಟಿದೆ. ಯವ್ವನವಿರುವಾಗ ಹೇಗೊ ಹಣ ಸಂಪಾದಿಸಿ ಬದುಕು ಕಟ್ಟಿಕೊಂಡವರು ಮುಂದಿನ ಸಾವಿನ ಪಯಣದಲ್ಲೂ ಸಂಭ್ರಮಿಸುತ್ತಿರಬೇಕೆಂಬ ಅವರ ಹಂಬಲವನ್ನು ವ್ಯಕ್ತಪಡಿಸಿದ್ದಾರೆ.

ಮಂಗಳಮುಖಿಯರ ಬದುಕು ಎಷ್ಟೊಂದು ಅಮಾನುಷ ನೋವು ಸಂಕಟಗಳಿಂದ ಕೂಡಿದೆಯೆಂಬುದನ್ನು ರೇವತಿಯವರು ಬರೆಸಿದ ಆತ್ಮಕಥೆಯನ್ನು ಓದಿ ತಿಳಿಯಬಹುದು. ಆ ರೇವತಿಯವರು ಈ ತಂಡದ ಒಬ್ಬ ಪಾತ್ರಧಾರಿಯಾಗಿದ್ದರು.

ಅವರ ಜೀವನ ಚರಿತ್ರೆಯನ್ನು ಈ ಮೊದಲೇ ಓದಿದ್ದ ನನಗೆ ಅವರನ್ನು ಕಂಡು ಮಾತಾಡಬೇಕೆನಿಸಿತು. ಮಾತಾಡಿಸಿದೆ.

ನಾಟಕ ಮುಗಿದ ಮೇಲೂ ಪ್ರೇಕ್ಷಕರ ನಿರ್ಗಮನ ನಿಧಾನಗತಿಯಲ್ಲಿತ್ತು. ಅವರನ್ನು ಮಾತಾಡಿಸುವಲ್ಲಿ ಕಾತರರಾಗಿದ್ದರು.

ಚಾಂದಿನಿ ಹೆಸರಿನ ಪಾತ್ರಧಾರಿಯ ಬಳಿಗೆ ಹೋದ ಪ್ರೇಕ್ಷಕ ಮಹಿಳೆಯರು ಅವರನ್ನು ಮಾತಾಡಿಸಿದರು. ಚಾಂದಿನಿಯವರ ಮೊಣಕಾಲಿನವರೆಗೆ ಇಳಿಬಿಟ್ಟ ಕೂದಲನ್ನು ಕಂಡು ..ನೀವು ಕೂದಲಿಗೆ ಏನನ್ನ ಹಚ್ಚುತ್ತೀರಿ? ಇಷ್ಟು ಉದ್ದಕ್ಕೆ ಬೆಳೆಯಲೂ ಹೇಗೆ ಸಾಧ್ಯವಾಯಿತೆಂದು ಪ್ರಶ್ನಿಸಿದರು.. ಅದಕ್ಕೆ ಚಾಂದಿನಿಯವರ ಉತ್ತರ.. ನಾನು ಅಶ್ವಿನಿ ಹೇರ್ ಆಯಿಲ್ ಮಾತ್ರ ಉಪಯೋಗಿಸುತ್ತೇನೆ. ಬೇರೇನೂ ಮಾಡುತ್ತಿಲ್ಲ ಎಂದರು. (ಇದು ಜಾಹೀರಾತು ಅಲ್ಲ)

ಮುಚ್ಚು ಮರೆಯಿಲ್ಲದಂತೆ ಪ್ರದರ್ಶಿಸಿದ ಈ ನಾಟಕದ ಒಂದು ಹಂತದಲ್ಲಿ ಪಾತ್ರಧಾರಿಗಳೆಲ್ಲರ ಕನಸುಗಳ ಪ್ರದರ್ಶನ ನೀಡಲು ಅವರು ತೊಟ್ಟಿದ್ದ ಉಡುಪುಗಳನ್ನು ಬದಲಾಯಿಸಬೇಕಿತ್ತು. ಪ್ರದರ್ಶನಕ್ಕೆ ತಡೆಯಿಲ್ಲದೆ ಕೇವಲ ಎರಡು ಮೂರೂ ನಿಮಿಷಗಳ ಅಂತರದಲ್ಲಿ ಪಾತ್ರಧಾರಿಗಳಾದ ಏಳು ಮಂದಿಯೂ ಬದಲಾದ ಉಡುಪಿನಲ್ಲಿ ನೃತ್ಯಕ್ಕೆ ಸಿದ್ದರಾಗಿ ರಂಗಮಂಟಪದಲ್ಲಿ ಪ್ರತ್ಯಕ್ಷಗೊಂಡಿದ್ದುದು ಪ್ರೇಕ್ಷರನ್ನು ಆಶ್ಚರ್ಯಚಕಿತಗೊಳಿಸಿದೆ.

ರಾಣಿ ಮಹಾರಾಣಿ ಅರ್ಧನಾರೀಶ್ವರಿ ಜಯಮಾಲಿನಿ ಶಾಕುಂತಲೆಯಾಗಿ ವಸ್ತ್ರಾಲಂಕಾರ ಮಾಡಿಕೊಟ್ಟ ಮಹಿಳೆ ಸವಿತಾ. ಅವರ ಹೆಸರೆತ್ತಿ ಕೂಗಿದಾಗ ಜೋರಾದ ಕರತಾಡಣ ಕೇಳಿಸಿತು.



5 ಮಾರ್ಚ್ 24ರಂದು ಮಂಗಳೂರು ಸಂತ ಅಲೋಸಿಯಸ್ ಕಾಲೇಜು ಸಭಾಂಗಣದಲ್ಲಿ ನೀಡಿದ ಪ್ರದರ್ಶನ.
(ತಲ್ಕಿ ಎಂದ್ರೆ ಮಂಗಳಮುಖಿಯರ ಇಷ್ಟವಾದ ಮಾಂಸಾಹಾರದ ಹೆಸರು)

ಹಸಿವು ಹಡೆಯುವ ಮೊದಲೆ

ನನ್ನ ಹೂ ಮನಸಿಗೆ
ಬೋರ್ಡ್ ತೂಗಿಸಿ ಕೂಗಿದರು ಖರೀದಿಗಿದ್ದಾಳೆ.
ಸಾಲು ಪುಟ್ಟಿಯ ತರಕಾರಿಗಳು ನನ್ನಂತೆ
ಬಿಕರಿಗೆ ಕಾದು ಗೋಲಿಟ್ಟವು
ಒಳರಸ ಒಣಗುವ ಮೊದಲೇ ಕೊಂಡುಬಿಡಿ.
ಮಾಯೆಯಲ್ಲವೆ ನಾನು
ಮಾತುಕಟ್ಟೆಯ ಬಾಯಲ್ಲಿ
ನನ್ನ ಕವಳದ ಕಂಪು
ಎಲ್ಲರ ತುಟಿಯಲ್ಲೂ ಅದರದೆ ಕೆಂಪು.

ನನ್ನ ಗುಡುಸಲಿಗಿ ಕನಸ ಉಡಿಸಲು ಗಾಂಭಿರ್ಯದ ಧಿರಿಸು
ತೊಟ್ಟವರ ಸಾಲು. ಮುಖವಾಡದ ಮರೆಯಲ್ಲಿ ಬೆಚ್ಚನೆಯ
ಭಾವದ ನವಿಲ ಒಂದೊಂದೇ ಕಣ್ಣಕಿತ್ತು ಕರುಳಬಳ್ಳಿಯ
ಹಸಿವ ಕೊಂದವರ ಗೀಳು. ಬಂದವರಗಿ ಬಣ್ಣಗಳ ಹರಡಿ
ರುಚಿಸುವ ತಿಂಡಿ ನಾನು
ನನ್ನ ಬೆಚ್ಚಲ್ಲಿ ವೆಚ್ಚವಾದವರ ಮಾನವೂ ಬೆತ್ತಲೆ
ನನ್ನ ಬೆತ್ತಲಂತೆ.
ಆದರೂ ನನ್ನ ಬೆತ್ತಲಿಗೆ ಅವರು ಸಮವಲ್ಲ ಬಿಡಿ.

ನನ್ನ ಗುಡಿಸಲ ಕರುಳಿಗೆ ಕೂಳು ತುಂಬುವ ತವಕ
ನಿಮ್ಮೆಲ್ಲ ಚರ್ಮದ ಕಸ ನನ್ನ ರಸ. ಮರ್ಯಾದಸ್ತ
ಮಹನೀಯರೆ, ಮೆಟ್ಟಿದ ಮೆಟ್ಟಿಗೆ ನನ್ನ ಕಣ್ಣೀರ ಪಾಲೀಸು
ಅದರ ಮೆರುಗಲ್ಲಿ ನಿಮ್ಮಮಾರಿಯ ಥಳಕು ನನ್ನ ಮಧು
ಬಟ್ಟಲಿಗೆ ನಿಮ್ಮ ತುಟಿಯ ಚುಂಬನಕ್ಕಿಂತ ಕಾಂಚಣದ ನಗು
ಲೇಸು. ಚುಂಬನ ಕ್ಷಣಮಾತ್ರ
ಕಾಂಚಣ ನಾಳೆಯ ಹಸುವಿನ ಹುಟ್ಟು

ಮರ್ಯಾದಸ್ತ ಮಹನೀಯರೆ, ನಿಮ್ಮಗಾಂಭಿರ್ಯ ನನ್ನ
ನಾನೇ ಕೊಂದಷ್ಟೇ ಅವಮಾನ
ನಿಮ್ಮ ಉರುವಣಿಗೆಗೆ ಲಾಸ್ಯ ಬೆಳಕು ನನಗೆ ಸುಡುಬೆಂಕಿ
ಸಾಕಿನ್ನು ಬೇಗ ಹೊರಟು ಬಿಡಿ ಯುದ್ಧಕ್ಕೆ ಸಜ್ಜಾಗಿದೆ ಹಸಿವು
ನಿಮ್ಮ ಹಸಿವು ಸುಟ್ಟ ರಾತ್ರಿ ಬೂದಿಯನು ಎಕ್ಕೊಸೆಯ ಬೇಕು
ದಿಮಾಕಿನ ಹಗಲು ಹಸಿವ ಹಡೆಯುವ ಮೊದಲೆ.

–ಪಿ.ಆರ್. ವೆಂಕಟೇಶ್

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**